ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ನಗರ (ಬಿದನೂರು)


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ನರೇಂದ್ರಕುಮಾರ್ ಎಸ್.ಎಸ್.**

ಲೇಖಕರು

**ಚಿನ್ಮಯ ಎಂ.ಸಿ.**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**NAGARA (BIDANOORU):** An Introduction Book on Places in Karnataka that Played a Major Role in the Freedom Struggle, Written by Chinmya M.C., Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಚಿನ್ಮಯ ಎಂ.ಸಿ.

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೭೨


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



ಕರ್ನಾಟಕ ಸರ್ಕಾರ

## ಶುಭ ಸಂದೇಶ

**‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

## ಲೇಖಕರ ಮಾತು

ಮಾನವನ ಜೀವನಕ್ಕೆ ಪ್ರಾಣವಾಯು ಅವಶ್ಯವಿದ್ದಷ್ಟೇ ಅವನ ಬದುಕಿಗೂ ಸ್ವಾತಂತ್ರ್ಯ ಅವಶ್ಯ. ಪ್ರಾಣಿಗೆ ಮಾತ್ರವಲ್ಲ, ಸಕಲ ಚರಾಚರ ಜೀವಿಗಳಿಗೂ ಇದು ಅವಶ್ಯಕ. ಶತಮಾನಗಳ ಸ್ವಾತಂತ್ರ್ಯ ಯಜ್ಞಕ್ಕೆ ತೈಲ ಸುರಿದವರು ಲಕ್ಷಾಂತರ ಮಂದಿ. ಇಂತಹ ಸ್ವಾತಂತ್ರ್ಯ ಹೋರಾಟದಲ್ಲಿ ಬಿದನೂರು, ತೀರ್ಥಹಳ್ಳಿ ಭಾಗದ ಹೋರಾಟ ಅಮೋಘವಾದುದು. ಇಲ್ಲಿನ ಹೋರಾಟದ ಅನೇಕ ಘಟನೆಗಳು ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿ ಪಡೆದು, ಅನೇಕ ರಾಷ್ಟ್ರೀಯ ನೇತಾರರನ್ನು ಬರಮಾಡಿಕೊಂಡಿದೆ. ಕೆಲವೇ ಪುಟಗಳಲ್ಲಿ ಇವರ ಶೌರ್ಯ, ಸಾಹಸವನ್ನು ವರ್ಣಿಸಲು ಅಸಾಧ್ಯವಾಗಿದೆ.

ಈ ಹೊತ್ತಿಗೆಯನ್ನು ಅತಿ ತುರ್ತಾಗಿ ಬರೆದುಕೊಡಲು ಕೊಟ್ಟಿದ್ದರು. ಸಾಧ್ಯವಾದಷ್ಟು ವಿಷಯಗಳನ್ನು ಸೇರಿಸಲಾಗಿದೆ. ಅವಕಾಶಕ್ಕಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಗೂ, ಸಂಪಾದಕರಿಗೂ ಹೃತ್ಪೂರ್ವಕ ಧನ್ಯವಾದಗಳು.

**– ಚಿನ್ಮಯ ಎಂ.ಸಿ., ಚನ್ನಗಿರಿ**

## ಪರಿವಿಡಿ


ಶುಭ ಸಂದೇಶ ೩

ಶುಭ ಸಂದೇಶ ೫

ಪ್ರಧಾನ ಸಂಪಾದಕರ ಮಾತು ೭

ಲೇಖಕರ ಮಾತು ೧೦

ಅಧ್ಯಾಯ ೧
**ಕೆಳದಿ ಅರಸರು – ಕವಲೇದುರ್ಗ ಮತ್ತು ಬಿದನೂರು** ೧೩

ಅಧ್ಯಾಯ ೨
**ನಗರ ರೈತ ದಂಗೆ (೧೮೩೦–೩೧)** ೨೩

ಅಧ್ಯಾಯ ೩
**ಗಾಂಧೀಜಿ ಪ್ರವಾಸ ಮತ್ತು ಪ್ರಭಾವ** ೨೯

ಅಧ್ಯಾಯ ೪
**೧೯೪೨ ರ ಕ್ವಿಟ್ ಇಂಡಿಯಾ ಚಳುವಳಿ** ೩೭

ಅಧ್ಯಾಯ ೫
**ಅರಣ್ಯ ಸತ್ಯಾಗ್ರಹ** ೪೦

ಅಧ್ಯಾಯ ೬
**ಕರನಿರಾಕರಣ ಚಳುವಳಿ** ೪೫

ಅಧ್ಯಾಯ ೭
**ಹೋರಾಟ–ಸೊರಬ** ೪೭

ಅಧ್ಯಾಯ ೮
**ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ ಬಿಂದು ಈ ಉದ್ಯಾನವನ** ೫೬

ಅಧ್ಯಾಯ ೯
**ಕಾಗೋಡು ಸತ್ಯಾಗ್ರಹ** ೫೯

**ಆಕರಗಳು** ೬೮

● ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೯

---

ಅಧ್ಯಾಯ ೧

## ಕೆಳದಿ ಅರಸರು – ಕವಲೇದುರ್ಗ ಮತ್ತು ಬಿದನೂರು

ಶತಮಾನಗಳಿಂದಲೂ ಬಿದನೂರಿನದು ಹೋರಾಟದ ಇತಿಹಾಸ. ಕ್ರಿ.ಶ. ೧೬ನೇ ಶತಮಾನದ ಪ್ರಾರಂಭದಿಂದ ಹದಿನೆಂಟನೆಯ ಶತಮಾನದ ಮೂರನೆಯ ಪಾದದವರೆಗೆ ಕರ್ನಾಟಕ ರಾಜ್ಯದ ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಆಳಿದ ಕೆಳದಿ ವಂಶದ ಅರಸರು, ಮೊದಲು ವಿಜಯನಗರ ಅರಸರ ಸಾಮಂತರಾಗಿದ್ದು, ಆ ರಾಜ್ಯದ ಪತನಾನಂತರ ಸ್ವತಂತ್ರರಾದರು. ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿ ಈಗಿನ ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಬಹುಭಾಗ, ಉತ್ತರ ಕನ್ನಡ, ಧಾರವಾಡ, ಚಿತ್ರದುರ್ಗ ಜಿಲ್ಲೆಗಳ ಕೆಲಭಾಗ ಮತ್ತು ಕೇರಳದ ಸ್ವಲ್ಪ ಭಾಗಗಳನ್ನು ಒಳಗೊಂಡಿತ್ತು. ರಾಜ್ಯದ ರಾಜಧಾನಿಗಳು ಕ್ರಮವಾಗಿ ಕೆಳದಿ, ಇಕ್ಕೇರಿ ಮತ್ತು ಕೊನೆಗೆ ಬಿದನೂರು (ನಗರ) ಸ್ವಲ್ಪಕಾಲ ಭುವನಗಿರಿ ಅಥವಾ ಕವಲೆದುರ್ಗ ಆಗಿದ್ದವು. ಪರ್ವತ ಶ್ರೇಣಿ ಹಾಗೂ ದಟ್ಟವಾದ ಕಾಡುಗಳಿಂದ ಕೂಡಿ ನಿಸರ್ಗ ಸೌಂದರ್ಯಕ್ಕೆ ಹೆಸರಾದ ಮಲೆನಾಡಿನ ಮಡಿಲಿನಲ್ಲಿರುವ ಕವಲೆದುರ್ಗ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ್ದು. ಇದು ತೀರ್ಥಹಳ್ಳಿಗೆ ಹದಿಮೂರು ಮೈಲಿ ದೂರದಲ್ಲಿ ಪಶ್ಚಿಮ ದಲ್ಲಿದೆ. ಕವಲೇದುರ್ಗ ದಿಂದ ಪಶ್ಚಿಮಕ್ಕೆ ಬಿದನೂರು (ನಗರ) ಇದೆ. ಸಮುದ್ರಮಟ್ಟದಿಂದ ಸುಮಾರು ೩೦೫೮ ಅಡಿಗಳಷ್ಟು ಎತ್ತರದಲ್ಲಿರುವ ಇದು ಕೆಳದಿ ಅರಸರ ದುರ್ಗಗಳಲ್ಲಿ ಅತ್ಯಂತ ದುರ್ಗಮವಾದದ್ದು. ಸುತ್ತಲೂ ಅರಣ್ಯ ಹಾಗೂ ವಿಶಾಲವಾದ ಗುಡ್ಡ ಕಾಡುಗಳಿಂದ ತುಂಬಿ ಹಚ್ಚಹಸಿರಾಗಿದೆ. ಈ ಸ್ಥಳಕ್ಕೆ ಕವಲೇದುರ್ಗ, ಕವುಲೆದುರ್ಗ, ಕೌಲೇದುರ್ಗ

ಎಂಬೆಲ್ಲ ಹೆಸರುಗಳಿವೆ. ಇದನ್ನು ಕೆಳದಿ ಅರಸರ ಶಾಸನಗಳಲ್ಲಿ 'ದುರ್ಗ ಭುವನಗಿರಿ' ಎಂದು ಕರೆದಿದ್ದಾರೆ. ಹೈದರಾಲಿ ಇದನ್ನು ವಶಪಡಿಸಿಕೊಂಡ ನಂತರ ಈ ಭುವನಗಿರಿ ದುರ್ಗಕ್ಕೆ ಕವಲೆದುರ್ಗ ಎಂಬ ಹೆಸರು ಬಂತು. ಇದನ್ನು ಕೃತಯುಗದಲ್ಲಿ ರೇಣುಕಾಶ್ರಮವೆಂದು, ತ್ರೇತಾಯುಗದಲ್ಲಿ ಅಗಸ್ತ್ಯಾಶ್ರಮವೆಂದು ಮತ್ತು ದ್ವಾಪರಯುಗದಲ್ಲಿ ಕಾಮ್ಯಕವನ ಎಂದು ಕರೆದರು. ಈ ಸ್ಥಳದಲ್ಲಿ ಪಾಂಡವರು ವನವಾಸ ಕಾಲದಲ್ಲಿ ತಂಗಿದ್ದರೆಂದೂ ಬೆಟ್ಟದ ಮೇಲೆ ಕೋಟೆ ಕೊತ್ತಲಗಳನ್ನು ಕಟ್ಟಿದರೆಂದು ಭೀಮನು ನೀರಿಗಾಗಿ ಸ್ಥಳದ ಸಮೀಪ ಒಂದು ಕಟ್ಟೆಯನ್ನು ನಿರ್ಮಿಸಿ ತುಂಗಾ ನದಿಯನ್ನು ಇಲ್ಲಿಗೆ ತಿರುಗಿಸಿದುದಾಗಿಯೂ ತದನಂತರ ಋಷಿಗಳ ಪ್ರಾರ್ಥನೆಯಂತೆ ಧರ್ಮರಾಯ ಕಟ್ಟೆಯಿಂದ ನೀರು ಬಿಡಿಸಿದುದಾಗಿಯೂ ಐತಿಹ್ಯವಿದೆ.

ಕವಲೇದುರ್ಗ ಸುಮಾರು ೧೮೮೨ ರವರೆಗೆ ತಾಲೂಕು ಕೇಂದ್ರವಾಗಿದ್ದ ಸ್ಥಳ. ಆನಂತರ ಸಂಪೂರ್ಣವಾಗಿ ತಾಲೂಕಿನ ಎಲ್ಲಾ ಆಡಳಿತ ಕಚೇರಿಗಳು ತೀರ್ಥಹಳ್ಳಿಗೆ ವರ್ಗಾಯಿಸಲ್ಪಟ್ಟು ತಾಲೂಕಿನ ಹೆಸರು ತೀರ್ಥಹಳ್ಳಿ ತಾಲ್ಲೂಕು ಎಂದು ಬದಲಾಯಿತು. ೧೮೧೦ರಲ್ಲಿ ದಿವಾನ್ ಪೂರ್ಣಯ್ಯ ಕವಲೇದುರ್ಗದ ಅಮಲ್ ದಾರನಿಗೆ ಕಳುಹಿಸಿರುವ ನಿರೂಪದಲ್ಲಿ ಅಮಲ್ ದಾರನಿಗೆ ಕೆಲವು ಸಲಹೆಗಳನ್ನು ಮಾಡಿರುವುದನ್ನು ನಾವು ಕಾಣಬಹುದು.

ಈ ಸ್ಥಳದ ದುರ್ಗಮವಾದ ಗುಡ್ಡದಲ್ಲಿ ಕೆಳದಿ ಅರಸರ ಭವ್ಯವಾದ ಕೋಟೆ ಇದೆ. ಭವ್ಯವಾದ ಬಾಗಿಲುಗಳಿಂದ ಕೂಡಿದ ಈ ಕೋಟೆ ಸುಂದರವಾಗಿದೆ. ಚಿತ್ರದುರ್ಗದ ಕೋಟೆಯಂತೆ ಇದು ಏಳು ಸುತ್ತಿನ ಕೋಟೆ. ಕರ್ನಾಟಕದಲ್ಲಿ ಚಿತ್ರದುರ್ಗದ ಕೋಟೆಯನ್ನು ಬಿಟ್ಟರೆ, ಇಷ್ಟು ಭದ್ರವಾದ ಹಾಗೂ ಇಂದಿಗೂ ನೋಡಬಹುದಾದ ಏಳು ಸುತ್ತಿನ ಕೋಟೆ ಇರುವುದು ಕವಲೇದುರ್ಗದಲ್ಲಿ ಮಾತ್ರ. ಏಳು ಸುತ್ತುಗಳಲ್ಲಿ ಎರಡು ಸುತ್ತುಗಳು ಗ್ರಾಮದ ಸುತ್ತಲೂ ಗ್ರಾಮದ ರಕ್ಷಣೆಗಾಗಿ, ಉಳಿದ ಐದು ಸುತ್ತುಗಳು ದುರ್ಗದ ರಕ್ಷಣೆಗಾಗಿ ಇವೆ. ದೊಡ್ಡ ದೊಡ್ಡ ಕಲ್ಲುಗಳಿಂದ ಕಟ್ಟಿರುವ ಗೋಡೆಗಳಲ್ಲಿ ಅಲ್ಲಲ್ಲಿ ಚಿಕ್ಕ ಚಿಕ್ಕ ಬುರುಜುಗಳು ಇವೆ. ಈಗ ಈ ಗೋಡೆಗಳ ಸುತ್ತಮುತ್ತಲು ಮರಗಿಡಬಳ್ಳಿಗಳು ಬೆಳೆದುನಿಂತು ಕಾಡಾಗಿ ಪರಿಣಮಿಸಿದೆ. ಈ ಕೋಟೆಯನ್ನು ಕೆಳದಿ ಅರಸ ಸದಾಶಿವ ನಾಯಕ



ಸುಮಾರು ಸಾವಿರದ ೧೫೫೦ ರಲ್ಲಿ ಕಟ್ಟಿಸಿದನೆಂದು ತಿಳಿದುಬರುತ್ತದೆ. ಅದಲ್ಲದೆ ಈ ಕೋಟೆಯನ್ನು ಕೆಳದಿ ಅರಸರು ಆಗಾಗ ಭದ್ರ ಪಡಿಸುತ್ತಲೇ ಬಂದರು. ಎರಡನೆಯ ಸೋಮಶೇಖರ ನಾಯಕ (೧೭೧೪ –೧೭೩೯) ಈ ಕೋಟೆಯನ್ನು ಜೀರ್ಣೋದ್ಧಾರ ಮಾಡಿದುದಲ್ಲದೆ ಗಾಳಿಯುಪ್ಪರಿಗೆಯನ್ನು ಕಟ್ಟಿಸಿದ. ಈ ಕೋಟೆಯ ಅಂಚಿನಲ್ಲಿ ಕಲ್ಲಿನಿಂದ ಕಟ್ಟಿರುವ ಗೋಡೆಯೊಂದಿದೆ. ಕೋಟೆಯಿಂದ ಹೊರಗಡೆ ಹೋಗಲು ಚಪ್ಪೆ ಬಾಗಿಲು, ಕೌರಿ ಬಾಗಿಲು, ಭದ್ರಾಪುರ ಬಾಗಿಲು, ದಿಡ್ಡಿ ಬಾಗಿಲುಗಳೆಂಬ ಹಲವು ಬಾಗಿಲುಗಳಿವೆ.

ಕವಲೇದುರ್ಗದ ಊರೊಳಗೆ ಅನೇಕ ದೇವತೆಗಳ ಗುಡಿಗಳಿವೆ. ಈ ಗುಡಿಗಳು ದುರ್ಗದ ಹೊರಭಾಗಕ್ಕೆ ದುರ್ಗಕ್ಕೆ ಕಾವಲು ಇರುವಂತೆ ಸುತ್ತಲೂ ಕಂಗೊಳಿಸುತ್ತವೆ. ಇವುಗಳಲ್ಲಿ ಕೆಲವು ಈಗ ಪಾಳು ಬಿದ್ದಿವೆ. ಇಂದಿಗೂ ಈ ಗುಡಿಗಳಲ್ಲಿ ಪೂಜೆ ನಡೆಯುತ್ತದೆ. 'ಭುವನೇಶ್ವರಿ' ಇಂದಿಗೂ ಈ ಊರಿನ ಗ್ರಾಮ ದೇವತೆ. ಈಗ ಈ ದೇವತೆಯನ್ನು ಮಾರಮ್ಮ ಎಂದು ಕರೆಯುತ್ತಾರೆ. ಕೆಳದಿ ಅರಸ ವೆಂಕಟಪ್ಪನಾಯಕನು ಕಟ್ಟಿಸಿದ ಪುರಾತನ ಮಸೀದಿಯು ಇಲ್ಲಿದೆ. ಇವುಗಳಲ್ಲದೆ ಕಲ್ಯಾಣ ಮಂಟಪ, ಟಂಕಶಾಲೆ, ಶಿವಗಂಗಾ ಎಂಬ ಜಲಕ್ರೀಡಾ ಕೊಳಗಳು ಹೇರಳವಾಗಿವೆ. ತಿಮ್ಮಣ್ಣ ನಾಯಕನೆಂಬುವವನು ಕಟ್ಟಿಸಿದ ಕೆರೆ, ಬೀಳಿಗಿ ಅರಸರು ಕಟ್ಟಿಸಿದ ಕೆರೆ ಹಾಗೂ ಶಿಸ್ತುಗಾರ ಶಿವಪ್ಪನಾಯಕನ ಹೆಂಡತಿ ಲಿಂಗಮ್ಮಾಜಿ ಹೆಸರಿನ ಕೆರೆ ಇಲ್ಲಿವೆ. ಪರಿಹಾರಮಠ, ಗವಿಮಠವೆನ್ನಲಾದ ಪಾಳು ಬಿದ್ದಿರುವ ಮಠಗಳೂ ಇಲ್ಲಿವೆ. ತಿಮ್ಮಣ್ಣನಾಯಕನ ಕೆರೆಯ ದಂಡೆಯ ಮೇಲೆ ಮಹಾನವಮಿಯ ಬಯಲು ಎಂದು ಕರೆಯುವ ಬಯಲು ಸ್ಥಳದಲ್ಲಿ ಅಸಂಖ್ಯಾತ ಮಹಾಸತಿ ಕಲ್ಲುಗಳಿವೆ. ಶಾಸನಗಳಿಲ್ಲವಾದರೂ ಇವು ಆಗಿನ ಕಾಲದಲ್ಲಿ ಗ್ರಾಮ ರಕ್ಷಣೆಗೆ ಪ್ರಾಣಾರ್ಪಣೆ ಮಾಡಿದ ಸತಿಪತಿಯರ ಸಾಹಸದ ಕಥೆಯನ್ನು ಮುಕ್ತವಾಗಿ ಸಾರುತ್ತವೆ.

ಕವಲೇದುರ್ಗದ ಬೆಟ್ಟದ ಮೇಲೆ ತೊಲೆತಮ್ಮ, ಮುಂಡಿಗೆ ತಮ್ಮಂದಿರೆಂಬ ಪರಾಕ್ರಮಶಾಲಿಗಳಾದ ಇಬ್ಬರು ಸಹೋದರರು ಸೇನೆಯ ಕಟ್ಟಿ ವಿಶೇಷವಾಗಿ ಮಲೆತು ನಡೆಯುತ್ತಿದ್ದು, ಅವರನ್ನು ವೆಂಕಟಪ್ಪನಾಯಕ ಸದೆಬಡೆದು ಕೋಟೆ

ವಶಪಡಿಸಿಕೊಂಡ ನಂತರ ಇದನ್ನು "ಭುವನಗಿರಿದುರ್ಗ" ಎಂದು ನಾಮಾಂಕಿತ ಮಾಡಿ, ದೊಡ್ಡ ಸಂಕಣ್ಣನಾಯಕ (೧೫೬೬) ಕಾಶೀಕ್ಷೇತ್ರದಿಂದ ತಂದ ದಿವ್ಯಲಿಂಗವನ್ನು 'ವಿಶ್ವೇಶ್ವರಲಿಂಗ' ಎಂದು ಹೆಸರಿಸಿ ಕೋಟೆಯೊಳಗೆ ಅದನ್ನು ಪ್ರತಿಷ್ಠಾಪನೆ ಮಾಡಿಸಿ ಅದಕ್ಕೆ ವಿಶೇಷ ಪೂಜೆ ವ್ಯವಸ್ಥೆ ಮಾಡುತ್ತಾನೆ. ಭಂಡಾರ, ಜ್ಞಾನಶಾಲೆ ಉಗ್ರಾಣ, ಪಣತವಾನೆಯ ಮಹಲು, ಕುದುರೆಲಾಯ ಮುಂತಾದ ಮಹಲುಗಳನ್ನು ಕಟ್ಟಿಸಿದನೆಂದು ಕೆಳದಿ ನೃಪವಿಜಯದಲ್ಲಿ ಹೇಳಿದೆ. ಶಿಖರದಲ್ಲಿ ಕಟ್ಟಿಸಿದ ಈಶ್ವರ ದೇವಾಲಯಕ್ಕೆ ಬೆಟ್ಟದ ಮತ್ತು ಮಂದಿರ ಶಿಖರಗಳ ವಿಶೇಷತೆಯನ್ನು ತೋರಿಸುವದಕ್ಕಾಗಿಯೋ ಏನೋ ಶಿಖರೇಶ್ವರ ದೇವಾಲಯವೆಂದು ಕೆಳದಿ ದೊರೆ ಬಸವಭೂಪಾಲ ತನ್ನ 'ಶಿವತತ್ವರತ್ನಾಕರ' ಎಂಬ ಗ್ರಂಥದಲ್ಲಿ ಹೇಳಿದ್ದಾನೆ. ಇದಲ್ಲದೆ ಲಕ್ಷ್ಮೀನಾರಾಯಣ, ಮೈಲಾರೇಶ್ವರ ಮುಂತಾದ ಗುಡಿಗಳನ್ನು ಕೋಟೆಯ ಒಳಭಾಗದಲ್ಲಿ ಕಟ್ಟಿಸಿದ. ಇವುಗಳಲ್ಲದೇ ಇನ್ನೂ ಅನೇಕ ಪಾಳು ಬಿದ್ದಿರುವ ಗುಡಿಗಳು ಕೋಟೆಯ ಒಳಭಾಗದಲ್ಲಿವೆ. ಇವೆಲ್ಲವೂ ಕೆಳದಿ ಅರಸರು ಕಲಾ ಪ್ರಪಂಚಕ್ಕೆ ಸಲ್ಲಿಸಿದ ಕಾಣಿಕೆ ಕುರುಹುಗಳಾಗಿವೆ. ಕೆಳದಿ ಅರಸರ ಈ ದೇವಾಲಯಗಳು ಈ ಮಲೆನಾಡ ವಾಸ್ತುಶಿಲ್ಪದ ಕೆಲವು ವಿಶಿಷ್ಟ ಮಾದರಿಗಳೆನ್ನಿಸಿವೆ.

ಉತ್ತಮ ಶಿಲ್ಪದಿಂದ ಕೂಡಿದ ಕೆಳದಿ ನಾಯಕರ ಕಾಲದ ಹಲವು ಕಲ್ಯಾಣಿಗಳು ಇಲ್ಲಿವೆ. ಅವುಗಳಲ್ಲಿ ಶಾಂತಗಂಗೆ ಸುಂದರವಾಗಿದೆ. ಬಾಗಿಲು, ಕಲ್ಲಿನ ಚಪ್ಪಡಿಗಳು ಮತ್ತು ಮುರಿದು ಬಿದ್ದಿರುವ ಕಲ್ಲು ಕಂಬಗಳು ಮುಂತಾದ ಅರಸರ ಕಾಲದ ಅರಮನೆಯ ಅವಶೇಷಗಳು ಇಂದಿಗೂ ಉಳಿದು ಬಂದಿವೆ. ಇವುಗಳಲ್ಲಿ ೮ ಅಡಿ ಉದ್ದ ೭ ಅಡಿ ಅಗಲವಿರುವ ಕಲ್ಲಿನ ಮಂಚವು ಒಂದು. ರಾಣಿಯ ಮಂಚವೆಂದು ಹೆಸರಿಸುವ ಈ ಮಂಚವನ್ನು ೧೬೯೪ ರಲ್ಲಿ ನಿರ್ಮಿಸಲಾಯಿತು ಎಂದು ಅದರ ಮೇಲಿರುವ ಶಾಸನದಲ್ಲಿ ಹೇಳಿದೆ. ರೇಖಾ ಚಿತ್ರಗಳಿಂದ ಕೂಡಿದ ತುಂಬಾ ಆಕರ್ಷಕವಾದ ಈ ಮಂಚ ಈಗ ಮೈಸೂರಿನಲ್ಲಿದೆ. ಇವಲ್ಲದೆ, ಮದ್ದು ಗುಂಡುಗಳನ್ನು ಶೇಖರಿಸಿಡುವ ಕೋಣೆಗಳು, ಕಮಂಡಲತೀರ್ಥ (ಗದಾತೀರ್ಥ),ತುಪ್ಪ ಮತ್ತು ಎಣ್ಣೆಯ ಬಾವಿಗಳು, ಕಲ್ಲುಮರಿಗೆಗಳು ಮುಂತಾದವು ಇಲ್ಲಿವೆ.



ಇವುಗಳಲ್ಲದೆ ಕವಲೇದುರ್ಗದ ಕೆಳದಿ ಅರಸರ ಕಾಲದಲ್ಲಿ 'ದುರ್ಗದ ತಿಮ್ಮಣ' ಎಂಬುವವನು ಕಟ್ಟಿಸಿಕೊಟ್ಟ ಮಹಾಮಹತ್ತಿನ ಮಠವೆಂದು ಕರೆಯುವ ಒಂದು ವೀರಶೈವ ಮಠವಿದೆ. ಈ ಮಠದ ವಿಷಯದಲ್ಲಿ ಕೆಳದಿ ವೆಂಕಟಪ್ಪ ನಾಯಕನ ಸೇವೆಯಂತೂ ಅಮೋಘವಾದದ್ದು. ಕೆಳದಿ ಅರಸರಿಗೆ ಸೇರಿದ ಸುಮಾರು ೨೦–೨೫ ತಾಮ್ರ ಶಾಸನಗಳು ಮತ್ತು ಓಲೆಗರಿಗಳು ಇಲ್ಲಿವೆ. ಇಲ್ಲಿರುವ ತಾಮ್ರ ಶಾಸನಗಳ ಪೈಕಿ ಏಳು ಶಾಸನಗಳು ಕೆಳದಿ ಅರಸ ವೆಂಕಟಪ್ಪ ನಾಯಕನಿಗೂ (೧೫೮೬–೧೬೨೯), ಒಂದು ವೀರಪ್ಪನಾಯಕನಿಗೂ (೧೬೩೦), ಹದಿನಾರು ವೀರಭದ್ರನಾಯಕನಿಗೂ (೧೬೨೯–೧೬೪೫), ಒಂದು ಶಿವಪ್ಪನಾಯಕನಿಗೂ (೧೬೪೫–೧೬೬೦), ಮೂರು ಭದ್ರಪ್ಪನಾಯಕನಿಗೂ (೧೬೬೧–೧೬೬೪), ಹದಿನಾರು ಸೋಮಶೇಖರ ನಾಯಕನಿಗೂ (೧೬೬೪–೧೬೭೧), ಹದಿನಾಲ್ಕು ಇದೇ ಸೋಮಶೇಖರನ ಧರ್ಮಪತ್ನಿ ಚನ್ನಾಮಾಜಿಗೂ (೧೬೭೧–೧೬೯೬), ಹನ್ನೆರಡು ಹಿರಿಯ ಬಸಪ್ಪನಾಯಕನಿಗೂ (೧೬೯೭–೧೭೧೪), ಮೂರು ಸೋಮಶೇಖರನಾಯಕನಿಗೂ (೧೭೧೪–೧೭೩೯) ಸೇರಿವೆ. ಇವಲ್ಲದೆ ಬಿಳಗಿ ಘಂಟೆ ವಡೆಯರ ಪೌತ್ರರಾದ ಶಿವಪ್ಪನಾಯಕರ ಪುತ್ರರಾದ ಇಂಮಡಿ ಶಿವಪ್ಪನಾಯಕನಿಗೆ ಸೇರಿದ ಒಂದು ಶಾಸನವು (೧೬೭೪) ಇದೆ. ಮಠಗಳಲ್ಲೇ ಈ ಮಹಾಮತ್ತಿನ ಮಠ ಪ್ರಧಾನ ಆಗಿರುವುದುದರಿಂದ ವಿವಿಧ ಸ್ಥಳಗಳ ಮಠಗಳಿಗೆ ಕೊಟ್ಟ ದತ್ತಿಗಳನ್ನು ಉಲ್ಲೇಖಿಸುವ ಶಾಸನಗಳು ಈ ಮಠದಲ್ಲಿ ಉಳಿದುಕೊಂಡು ಬಂದಿರಬಹುದು.

ಕವಲೇದುರ್ಗ ಗಂಡಾತರ ಪ್ರಸಂಗಗಳಲ್ಲಿ ಕೆಳದಿ ನಾಯಕರಿಗೆ ರಕ್ಷಣೆಯ ಸ್ಥಳವಾಗಿತ್ತು. ಬಿಜಾಪುರದ ಸುಲ್ತಾನ ಮಹಮ್ಮದ ಆದಿಲ್ ಷಾಹನ (೧೬೨೭–೧೬೫೬) ದಂಡನಾಯಕನಾದ ರಣದುಲ್ಲಾಖಾನ್ ಇಕ್ಕೇರಿಯನ್ನು ಜಯಿಸಲು ಹೊರಟಾಗ ವೀರಭದ್ರನಾಯಕನಿಗೆ (೧೬೨೯–೧೬೪೫) ಶತ್ರುಗಳನ್ನು ಎದುರಿಸುವುದು ಕಷ್ಟಕರವಾದಾಗ ಕುಟುಂಬ ಮತ್ತು ಪರಿವಾರ ಸಮೇತನಾಗಿ ಇಕ್ಕೇರಿಯನ್ನು ಬಿಟ್ಟು ಕವಲೇದುರ್ಗಕ್ಕೆ ಬಂದನು. ಆದರೆ ಇಕ್ಕೇರಿ ವಶವಾದ ಆನಂತರ ರಣದುಲ್ಲಾಖಾನ ಕೆಂಗಹನುಮನೆಂಬುವನ ಸಹಾಯದಿಂದ ನಲವತ್ತು ಸಾವಿರ ಕುದುರೆ, ಒಂದು ಲಕ್ಷ ಕಾಲಾಳು ಹಾಗೂ ನಲವತ್ತು ಆನೆಗಳಿದ್ದವು

ಎನ್ನೆಲಾದ  ಬಹುದೊಡ್ಡ ಸೈನ್ಯಸಮೇತನಾಗಿ ಕವಲೇದುರ್ಗವನ್ನು ಮುತ್ತಿಗೆ ಹಾಕಿದಾಗ ವೀರಭದ್ರನಾಯಕ ಶಾಂತಿಯೊಪ್ಪಂದ ಮಾಡಿಕೊಳ್ಳುತ್ತಾನೆ.

## ಬಿದನೂರು

ನಗರಾ, (ನಗರ) ಈಗ ಶಿವಮೊಗ್ಗದಿಂದ ಸುಮಾರು ಇಪ್ಪತ್ತು ಕಿಲೋಮೀಟರ್ ದೂರದಲ್ಲಿರುವ ಒಂದು ಸಣ್ಣ ಪಟ್ಟಣವನ್ನು ಮೊದಲು ಬಿದನೂರು, ಬಿದರೂರು ಮತ್ತು ಸಂಸ್ಕೃತೀಕೃತ ಆವೃತ್ತಿಯಲ್ಲಿ ವೇಣುಪುರ ಎಂದು ಕರೆಯಲಾಗುತ್ತಿತ್ತು. ಇದು ೧೬೪೦ ರ ನಂತರ ಕೆಳದಿ ರಾಜವಂಶದ ರಾಜಧಾನಿಯಾಗಿತ್ತು. ರಾಜಧಾನಿಯಾದ ಕೆಳದಿಯನ್ನು ನಗರಾಕ್ಕೆ ಸ್ಥಳಾಂತರಿಸಲಾಯಿತು. ಈ ಕೆಲಸವನ್ನು ವೀರಭದ್ರ ನಾಯಕನ ಆಳ್ವಿಕೆಯಲ್ಲಿ ಮಾಡಲಾಯಿತು. ಆದರೆ ಬಿದನೂರಿನ ಬೆಳವಣಿಗೆ ಮತ್ತು ಸಂಪತ್ತಿಗೆ ಕಾರಣರಾದ ರಾಜಾ ಶಿವಪ್ಪ ನಾಯ್ಕ ಅವರ ಆಡಳಿತವು ಇಂದಿಗೂ "ಶಿವಪ್ಪನಾಯಕನ ಶಿಸ್ತು" ಎಂದು ವಿವರಿಸುವಷ್ಟು ಶಿಸ್ತುಬದ್ಧವಾಗಿತ್ತು (ಪ್ರಹಾರ ಪತ್ತಿ ಅಥವಾ ಅಡಿಕೆ ಹಳತ್ತು). 'ಶಿಸ್ತು' ಪದವು 'ತೆರಿಗೆ' ಎಂದರ್ಥ. ಭೂ ಆದಾಯವನ್ನು ಅತ್ಯಂತ ವೈಜ್ಞಾನಿಕ ರೀತಿಯಲ್ಲಿ ನಿರ್ಣಯಿಸಿ ಸಂಗ್ರಹಿಸಲಾಗಿದೆ. ಈ ಪಟ್ಟಣವು ಗುಡ್ಡಗಾಡು ಪ್ರದೇಶಗಳಿಂದ (ಮಲೆನಾಡು) ಕರಾವಳಿ ಪ್ರದೇಶಗಳಿಗೆ ಸರಕು ಸಾಗಣೆಗೆ ಅನುಕೂಲವಾಗುವ ವ್ಯಾಪಾರ ಮಾರ್ಗದಲ್ಲಿತ್ತು. ಈ ಅಂಶವು ಅದರ ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಿದೆ. ಕೋಟೆಗಳು ಮತ್ತು ಅರಮನೆಗಳನ್ನು ಹಂತ ಹಂತವಾಗಿ ನಿರ್ಮಿಸಲಾಯಿತು ಮತ್ತು ಬಿದನೂರು ಹನ್ನೆರಡು ಕಿಲೋಮೀಟರ್ ಸುತ್ತಳತೆ ಹೊಂದಿರುವ ಕೋಟೆಯ ಹೆಗ್ಗಳಿಕೆಗೆ ಪಾತ್ರವಾಯಿತು. ಇದು ಹತ್ತು ಪ್ರವೇಶದ್ವಾರಗಳನ್ನು ಹೊಂದಿದ್ದು, ಅದಕ್ಕೆ ವಿವಿಧ ಹೆಸರುಗಳನ್ನು ನೀಡಲಾಗಿದೆ. ಕೋಟೆಯನ್ನು ಎರಡು ಸುತ್ತಿನ ಬುರುಜುಗಳಿಂದ ಬೆಂಬಲಿಸುವ ಗೇಟ್‌ವೇ ಮೂಲಕ ಪ್ರವೇಶಿಸಲಾಗಿದೆ. ಒಳಗಿನ ಅಂಗಳವು ಹಿಂದಿನ ಕಾವಲು ಕೋಣೆಯ ಚಿಹ್ನೆಗಳನ್ನು ತೋರಿಸುತ್ತದೆ. ಮೂರನೇ ಗೋಡೆಯ ಒಳಗೆ ದೊಡ್ಡ ತೆರೆದ ನ್ಯಾಯಾಲಯವು ಕೋಟೆಯ ಮೇಲಿರುವ ಟೆರೇಸ್ ಆಗಿದೆ. ಒಂದು ಸಣ್ಣ ಗುಡ್ಡದ ಮೇಲೆ ಒಂದು ಅರಮನೆ ಇತ್ತು



ಮತ್ತು ಅದನ್ನು ಮತ್ತೊಂದು ಸಣ್ಣ ಕೋಟೆಯು ಸುತ್ತುವರೆದಿತ್ತು. ಬಿದನೂರಿನ ರಾಜರು ನಿರ್ಮಿಸಿದ ದೇವಗಂಗೆ ಎಂಜಿನಿಯರಿಂಗ್ ಅದ್ಭುತವಾಗಿದೆ. ಮೇಲಿನ ಬೆಟ್ಟಗಳಿಂದ ಹರಿಯುವ ನೀರು ವಿವಿಧ ಆಕಾರಗಳ ಏಳು ಕೊಳಗಳಲ್ಲಿ ಸಂಗ್ರಹವಾಗುತ್ತದೆ. ಕಮಲ ಮತ್ತು ನಕ್ಷತ್ರದ ಆಕಾರದಲ್ಲಿರುವ ಎರಡು ಸರೋವರಗಳು ವಿಶೇಷವಾಗಿ ಸುಂದರವಾಗಿವೆ.

ನಗರಾದಲ್ಲಿ ಅನೇಕ ದೇವಾಲಯಗಳಿವೆ, ಅವುಗಳಲ್ಲಿ ನೀಲಕಂಠೇಶ್ವರನು ಸ್ಥಳದ ಹೆಮ್ಮೆಯನ್ನು ಪಡೆಯುತ್ತಾನೆ. ಇದು ಮಲೆನಾಡು ಪ್ರದೇಶಕ್ಕೆ  ವಿಶಿಷ್ಟವಾದ ವಾಸ್ತುಶಿಲ್ಪದ ಶೈಲಿಯಲ್ಲಿ ನಿರ್ಮಿಸಲಾಗಿದೆ. ಆದರೆ ಇದು ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಿಸಲಾದ ಗುಮ್ಮಟವನ್ನು ಹೊಂದಿದೆ. ಗುಡ್ಡೆ ವೆಂಕಟರಮಣ ದೇವಸ್ಥಾನ ಮತ್ತು ಶ್ರೀರಾಮ ದೇವಸ್ಥಾನಗಳು ಹೊಯ್ಸಳ ಶೈಲಿಯಲ್ಲಿ ಮಾಡಿದ ಬಾಗಿಲು ಚೌಕಟ್ಟು ಮತ್ತು ಹಾಲೆಂಡ್‌ನ ಆಮ್ಸ್ಟರ್‌ಡ್ಯಾಮ್‌ನಲ್ಲಿ ತಯಾರಿಸಲಾದ ಗಂಟೆಗಳನ್ನು ಹೊಂದಿವೆ.

ಆದಾಗ್ಯೂ, ಈ ವೈಭವವು ಹೆಚ್ಚು ಕಾಲ ಉಳಿಯಲಿಲ್ಲ.

ಸೈನ್ಯ ಸಮೇತನಾದ ಬಿಜಾಪುರದ ಎರಡನೇ ಆದಿಲ್ ಷಾಹ(೧೬೫೬–೧೬೭೨) ಕೆಳದಿ ಅರಸರ ಮೂರನೆಯ ರಾಜಧಾನಿಯಾದ ಬಿದನೂರಿಗೆ ಮುತ್ತಿಗೆ ಹಾಕಿದಾಗ ಅಲ್ಲಿಯ ದೊರೆ ಭದ್ರಪ್ಪನಾಯಕ (೧೬೬೨–೧೬೬೨) ಶತ್ರುಗಳನ್ನು ಎದುರಿಸಲಾರದೆ ಕವಲೇದುರ್ಗಕ್ಕೆ ಬಂದು ರಕ್ಷಣೆ ಪಡೆದನು. ಅಂಬಲಿಗೊಳ ಎಂಬಲ್ಲಿ ಘೋರವಾದ ಯುದ್ಧವಾಗಿ ಬಿದನೂರು ಸೈನ್ಯ ಸಂಪೂರ್ಣ ಸೋಲನ್ನು ಅನುಭವಿಸಬೇಕಾಯಿತು. ಬಿದನೂರು ಸಂಪೂರ್ಣ ವಶವಾದ ಆನಂತರ ಆದಿಲ್ ಷಾಹನ ಸೈನ್ಯ ಷನ್‌ಜರ್‌ಖಾನನೆಂಬ ದಂಡನಾಯಕನೊಂದಿಗೆ ಕವಲೇದುರ್ಗಕ್ಕೆ ಮುತ್ತಿಗೆ ಹಾಕಿತು. ಆದರೆ ಅಲ್ಲಿದ್ದ ಭದ್ರಪ್ಪನಾಯಕ ಧೈರ್ಯಗೆಡದೆ ಸೈನ್ಯವನ್ನು ಸಜ್ಜು ಮಾಡಿಕೊಂಡು ಕವಲೇದುರ್ಗಕ್ಕೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳನ್ನು ಕಾಲುದಾರಿಗಳನ್ನು ಮುಚ್ಚಿಸಿ ಸಂಪರ್ಕ ಕಡಿದು ಹಾಕಿದನು. ಇದರ ಪರಿಣಾಮವಾಗಿ ಬಿಜಾಪುರದ ಸೈನ್ಯ ಯುದ್ಧರಂಗದಿಂದ ಹಿಂದಕ್ಕೆ ಸರಿಯಿತು. ಆನಂತರ ಭದ್ರಪ್ಪ ನಾಯಕ

ಹೂವಯ್ಯನೆಂಬ ರಾಯಭಾರಿಯನ್ನು ಆದಿಲ್ ಷಾಹನಲ್ಲಿಗೆ ಕಳುಹಿಸಿ ಶಾಂತಿ ಒಪ್ಪಂದವನ್ನು ಮಾಡಿಕೊಂಡನು.

ಹಿರಿಯ ಸೋಮಶೇಖರ ನಾಯಕನ ಆನಂತರ ಕೆಳದಿಯ ಮುಖಂಡರಲ್ಲಿ ಎರಡು ಪಂಗಡಗಳಾಗಿ ದ್ವೇಷಕಾದಾಟಗಳಿಂದ ರಾಜ್ಯದಲ್ಲಿ ಅನಾಯಕತ್ವ, ಅರಾಜಕತೆ ತಲೆದೋರಿದುದರ ಪರಿಣಾಮವಾಗಿ ರಾಣಿ ಚೆನ್ನಮ್ಮಾಜಿ ಪ್ರಾಣಕ್ಕೆ ಅಪಾಯ ಸಂಭವಿಸಬಹುದೆಂದು ತಿಳಿದು ಬಿದನೂರನ್ನು ಬಿಟ್ಟು ಕವಲೇದುರ್ಗಕ್ಕೆ ಬಂದು ತಂಗಿದಳು. ಅಡವಿಗುಡ್ಡಗಳ ನಡುವಿದ್ದ ಕವಲೇದುರ್ಗ ಅವಳ ರಾಜಧಾನಿಯಾಯಿತು. ಬಿಜಾಪುರದ ಸೇನೆಯನ್ನು ಸೋಲಿಸಿದ ಚೆನ್ನಮ್ಮನ ಸಾಮರ್ಥ್ಯದ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿತು. ಕಾಸರಗೋಡು ತಿಮ್ಮಣ್ಣ ನಾಯಕ, ಸುಬ್ಬನೀಸ ಕೃಷ್ಣಪ್ಪನಂತಹ ಮುತ್ಸದಿಗಳು ರಾಣಿಗೆ ನೆರವಾಗಲು ಮುಂದಾದರು. ರಾಣಿ ಇವರೊಡನೆ ಸಮಾಲೋಚನೆ ನಡೆಸಿ ಬಿಕ್ಕಟ್ಟನ್ನು ಪರಿಹರಿಸಿದಳು. ಎಲ್ಲರೂ ರಾಜಿಯಾಗಿ ಕುತ್ಸಿತ ಶಿವಪ್ಪ ನಾಯಕನಿಗೆ ಕೆಳದಿ ರಾಜ್ಯದ ಪಟ್ಟದ ಹಕ್ಕಿಲ್ಲವೆಂದು, ಚೆನ್ನಮ್ಮಾಜಿಯೇ ಪಟ್ಟದ ರಾಣಿ ಎಂದು ತೀರ್ಮಾನಿಸಿದುದರ ಪರಿಣಾಮವಾಗಿ ಇವಳಿಗೆ ೧೬೭೪ರಲ್ಲಿ ಕವಲೇದುರ್ಗದ ಅರಮನೆಯಲ್ಲಿ ಪಟ್ಟವಾಯಿತು. ನಂತರ ಈಕೆ ತನ್ನ ಸೇನೆ ಪರಿವಾರ ಸಮೇತ ಬಿದನೂರಿಗೆ ಹಿಂತಿರುಗಿದಳು. ಚೆನ್ನಮ್ಮಾಜಿಯು ಬಲಾಢ್ಯನಾದ ಮೊಘಲ್ ಚಕ್ರವರ್ತಿ ಔರಂಗಜೇಬನ ಭಾರಿ ಸೈನ್ಯವನ್ನು ಸೋಲಿಸಿದುದು ಈ ರಾಣಿಯ ಆಳ್ವಿಕೆಯಲ್ಲಿ ಜರುಗಿದ ಚಿರಸ್ಮರಣೀಯ ಘಟನೆ. ಶಿವಾಜಿಯ ಮಗನಾದ ರಾಜಾರಾಮನು ಮೊಗಲರನ್ನು ಎದುರಿಸಲು ಯತ್ನಿಸಿದಾಗ ಔರಂಗಜೇಬನು ಅವನ ಮೇಲೆ ಭಾರಿ ಸೈನ್ಯವನ್ನು ಕಳುಹಿಸಿದ. ಆಗ ರಾಜಾರಾಮ ಕೊಲ್ಲಾಪುರದ ಹತ್ತಿರ ಪನ್ಹಳಯಿಂದ ಓಡಿಹೋಗಿ ಕೆಳದಿ ರಾಜ್ಯದಲ್ಲಿ ಮೊರೆಹೊಕ್ಕನು. ಆಗ ಕರುಣಾಮಯಿಯಾದ ರಾಣಿ ಚೆನ್ನಮ್ಮಾಜಿಯು 'ಮೊರೆ ಹೊಕ್ಕವರನ್ನು ಬಿಟ್ಟುಕೊಡುವುದು ರಾಜಧರ್ಮವಲ್ಲ'ವೆಂದು ನಿಶ್ಚಯಿಸಿ ರಾಜಾರಾಮನಿಗೆ ರಕ್ಷಣೆಯ ಭರವಸೆಯನ್ನಿತ್ತಳು.

ಅವನನ್ನು ವೇಷ ಮರೆಸಿ ಕಳಸ, ಖಾಂಡ, ಚಂದಿ ಮುಂತಾದ ಸ್ಥಳಗಳಿಗೆ ಕಳುಹಿಸಿದಳು. ರಾಜಾರಾಮನಿಗೆ ಆಶ್ರಯ ಕೊಟ್ಟದ್ದು ತಪ್ಪೆಂದು ಕ್ರಿ.ಶ. ೧೬೯೦ ರಲ್ಲಿ ಔರಂಗಜೇಬನು ತನ್ನ ಮಗ ಅಜಮತಾರನೊಂದಿಗೆ ದೊಡ್ಡ ಸೈನ್ಯವನ್ನು ಕಳುಹಿಸಿದನು. ಮೊದಲು ಆ ಸೈನ್ಯ ರಕ್ಷಣಾದುರ್ಗವಾದ ಕವಲೇದುರ್ಗವನ್ನು ಮುತ್ತಿತು. ಆಗ ಅಲ್ಲಿದ್ದ ಚೆನ್ನಮ್ಮಾಜಿಯೊಡನೆ ನಡೆದ ಯುದ್ಧದಲ್ಲಿ ಔರಂಗಜೇಬನ ಸೈನ್ಯ ಸೋಲನ್ನು ಅನುಭವಿಸಿತು. ಚೆನ್ನಮ್ಮಾಜಿಯು ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯವಿತ್ತು ಮೊಗಲರನ್ನು ಸೋಲಿಸಿದ ಈ ಮಹಾನ್ ಘಟನೆ ಭಾರತದ ಇತಿಹಾಸದಲ್ಲಿ, ಕನ್ನಡ ನಾಡಿನ ಚರಿತ್ರೆಯಲ್ಲಿ ದಪ್ಪಕ್ಷರಗಳಲ್ಲಿ ಬರೆಯುವಂತಹದ್ದು.

ಹೈದರ್ ಅಲಿಯು ಬಿದನೂರನ್ನ ಮುತ್ತಿಗೆ ಹಾಕಿದಾಗ ಕೋಟೆಯೊಳಗಿದ್ದ ರಾಣಿ ವೀರಮ್ಮಾಜಿ (೧೭೫೭–೧೭೬೩) ನವಾಬನಿಗೆ ಲೂಟಿಯಲ್ಲಿ ಏನು ಸಿಕ್ಕಬಾರದೆಂದು ಅರಮನೆಗೂ ರತ್ನ ಖಚಿತವಾದ ಆಭರಣಗಳಿಗೂ ಬೆಂಕಿ ಇಡಿಸಿ, ನಿಂಬಯ ಮತ್ತು ತನ್ನ ದತ್ತು ಮಗ ಸೋಮಶೇಖರನಾಯಕನೊಡಗೂಡಿ ರಹಸ್ಯವಾಗಿ ಒಳ ಮಾರ್ಗದಲ್ಲಿ ಕವಲೇದುರ್ಗಕ್ಕೆ ಬಂದು ತಂಗಿದಳು. ಉಳಿದ ಬಂಡವಾಳದಿಂದ ಕವಲೇದುರ್ಗದ ಕೋಟೆಯನ್ನು ಭದ್ರಪಡಿಸಿದಳು. ಇದನ್ನು ತಿಳಿದ ಹೈದರ್ ಅಲಿಯು ಕವಲೇದುರ್ಗದ ಕೋಟೆಗೂ ಮುತ್ತಿಗೆ ಹಾಕಿದನು. ಆಗ ಅಲ್ಲಿದ್ದ ರಾಣಿ ಶರಣಾಗತಳಾದಳು. ಇದರ ಪರಿಣಾಮವಾಗಿ ಕ್ರಿ.ಶ ೧೭೬೩ ರಲ್ಲಿ ಕೆಳದಿ ಅರಸು ಮನೆತನದ ಪ್ರಭುತ್ವ ಕೊನೆಗೊಂಡಿತು.

ಕ್ರಿ.ಶ.೧೭೯೯ ರಲ್ಲಿ ನಡೆದ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನನು ಸತ್ತು ಹೋದನು. ಆಗ ಅವನ ರಾಜ್ಯ ಬ್ರಿಟಿಷರ ವಶವಾಯಿತು. ಆಗ ಕವಲೇದುರ್ಗ, ಬಿದನೂರು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು.

ವಿಜಯನಗರ ರಾಜ್ಯಕ್ಕೆ ಅನುಪಮ ಸೇವೆ ಸಲ್ಲಿಸಿ ಅದರ ಸಂಪ್ರದಾಯ ಧ್ಯೇಯಗಳನ್ನು ಸಮರ್ಥವಾಗಿ ಮುಂದುವರೆಸಿ ಚಿಕ್ಕ ಪುಟ್ಟ ಅರಸರಾದ ಸೋಂದೆ, ಬೀಳಗಿ, ತರೀಕೆರೆ, ಬಸವಾಪಟ್ಟಣ, ಚಿತ್ರದುರ್ಗ ಮುಂತಾದವರ ಜೊತೆ ಒಡನಾಟ, ಬಡಿದಾಟಗಳೊಡನೆ ರಾಜ್ಯ ನಿರ್ವಹಣೆ ಮಾಡಿ ಭಾರಿ ಶತ್ರುಗಳಾದ ಆದಿಲ್ ಷಾಹಿ ಅರಸರು, ಮೊಗಲರೊಡನೆ ಯುದ್ಧ ಮಾಡಿ ವಿದೇಶಿಯರಾದ ಪೋರ್ಚುಗೀಸ್, ಡಚ್, ಫ್ರೆಂಚ್ ಮತ್ತು ಇಂಗ್ಲಿಷ್ ರೊಡನೆ

ವ್ಯಾಪಾರಕ್ಕಾಗಿ ಕುಶಲ ವ್ಯವಹಾರ ನಡೆಸಿ ಸುಮಾರು ೨೫೦ ವರ್ಷಗಳ ಕಾಲ ಕರ್ನಾಟಕದ ಪ್ರಬಲ ರಾಜಕೀಯ ಶಕ್ತಿಯಾಗಿದ್ದ ಕೆಳದಿ ರಾಜ್ಯ ಕೊನೆಗೊಂಡಿತು.

ಅವರು ಕಟ್ಟಿಸಿದ ಭವ್ಯವಾದ ಕೋಟೆ, ಸುಸಜ್ಜಿತವಾದ ಅರಮನೆ, ದೇವಾಲಯಗಳು, ಕೊಳಗಳಿಂದ ಕಂಗೊಳಿಸುತ್ತಿದ್ದ, ಕೆಳದಿ ಅರಸರ ಇತಿಹಾಸದಲ್ಲಿ ಮಹತ್ವದ ಪಾತ್ರವಹಿಸಿದ ಕವಲೇದುರ್ಗ ಈಗ ಪ್ರೇಕ್ಷಣೀಯ ಸ್ಥಳವಾಗಿ ಉಳಿದುಕೊಂಡಿದೆ.

❑

ಅಧ್ಯಾಯ ೨

## ನಗರ ರೈತ ದಂಗೆ (೧೮೩೦–೩೧)

ನಗರವು ಸಾಗರ, ನಗರ, ಕೌಲಿದುರ್ಗ, ಕೊಪ್ಪ, ಲಕವಳ್ಳಿ, ಸೊರಬ, ಶಿಕಾರಪುರ, ಶಿವಮೊಗ್ಗ, ಹೊನ್ನಾಳಿ, ಹರಿಹರ, ಚೆನ್ನಗಿರಿ, ತರೀಕೆರೆ, ಕಡೂರು ಮತ್ತು ಚಿಕ್ಕಮಗಳೂರು ತಾಲೂಕುಗಳನ್ನು ಒಳಗೊಂಡಿದೆ. ಅಲ್ಲದೆ, ೫೨೭೭ ಹಳ್ಳಿಗಳು, ೧೨೭೭ ಕುಗ್ರಾಮಗಳು ಇದ್ದವು. ಇದರ ಜನಸಂಖ್ಯೆಯು ೪೫೯,೮೪೨ ಆಗಿತ್ತು. ಇಕ್ಕೇರಿ ರಾಜವಂಶವು ಈ ಪ್ರದೇಶವನ್ನು ಆಳಿತು ಮತ್ತು ವಿಜಯನಗರ ಕಾಲದಿಂದ ೧೮ ನೇ ಅಂತ್ಯದವರೆಗೆ ಸ್ವತಂತ್ರ ವಿಶಿಷ್ಟ ಆಳ್ವಿಕೆಯ ಮೂಲಕ ಗೌರವ ಮತ್ತು ಪ್ರತಿಷ್ಠೆಯನ್ನು ಗಳಿಸಿತು. ೧೭ನೇ ಶತಮಾನದಲ್ಲಿ ಹೈದರ್ ಅಲಿ ಮತ್ತು ಟಿಪ್ಪು ವಶಪಡಿಸಿಕೊಂಡರು. ಈ ಪ್ರದೇಶವು ಹೋರಾಟದ ಸಂಪ್ರದಾಯವನ್ನು ಹೊಂದಿತ್ತು. ಟಿಪ್ಪುವಿನ ಸೋಲಿನ ನಂತರ ಈಸ್ಟ್ ಇಂಡಿಯಾ ಕಂಪನಿಯು ಮೈಸೂರಿನಲ್ಲಿ ಒಡೆಯರ್ ಮತ್ತು ದಿವಾನ್ ಪೂರ್ಣಯ್ಯರನ್ನು ಸ್ಥಾಪಿಸಿದಾಗ, ಈ ಪ್ರದೇಶವು ಭಾರೀ ತೆರಿಗೆಗೆ ಒಳಪಟ್ಟಿತು. ವಾಸ್ತವವಾಗಿ ರಾಜ್ಯದ ಆದಾಯದ ಸುಮಾರು ೬೦% ಈ ಪ್ರದೇಶದಿಂದ ಬರುತ್ತಿತ್ತು. ಮೂರು ದಶಕಗಳ ಕಾಲ, ೧೮೦೦–೧೮೩೦ರ ಕಾಲ ಈ ಜೋಡಿಯ ನಿರಂಕುಶತೆಯಿಂದ ಬಳಲಿದ ನಂತರ, ಈ ಪ್ರದೇಶವು ಒಡೆಯರ್‌ಗಳು ಮತ್ತು ಅವರ ರಕ್ಷಕರ ವಿರುದ್ಧ ದಂಗೆಗೆ ಬಲಿಯಾಯಿತು – "ಕಂಪನಿ ಸರ್ಕಾರ್".

ಆಡಳಿತವು ಸಂಪೂರ್ಣವಾಗಿ ಭ್ರಷ್ಟವಾಗಿತ್ತು ಮತ್ತು ಸ್ವಜನಪಕ್ಷಪಾತ ಮತ್ತು ಜಾತೀಯತೆಯಿಂದ ತುಂಬಿತ್ತು. ಸ್ಥಳೀಯ ನಾಯಕರು ಮತ್ತು ಪಟೇಲರು

ಮತ್ತು ರೈತರುಗಳು ಈ ಸ್ಥಿತಿ ಮತ್ತು ಭಾರೀ ತೆರಿಗೆ ಹೊರೆಯಿಂದ ಬೇಸತ್ತಿದ್ದರು. ಈ ಪರಿಸ್ಥಿತಿಯನ್ನು ಬೂದಿ ಬಸಪ್ಪ ಬಳಸಿಕೊಂಡರು, ಅವರು ದಂಗೆಯ ನಾಯಕತ್ವವನ್ನು ವಹಿಸಿಕೊಂಡರು ಮತ್ತು ಸ್ವತಃ ಹೊಸ ಆಡಳಿತಗಾರ ಎಂದು ಘೋಷಿಸಿಕೊಂಡರು. ಅವರು ಸಾರ್ವಭೌಮತ್ವವನ್ನು ಘೋಷಿಸಿದರು ಮತ್ತು ಸಾಹುಕಾರರಿಗೆ (ಹಣ ಲೇವಾದೇವಿದಾರರಿಗೆ) ಭಾರೀ ತೆರಿಗೆಗಳು ಮತ್ತು ರೈತರ ಸಾಲವನ್ನು ಮನ್ನಾ ಮಾಡಿದರು. ಇದರ ಫಲಿತಾಂಶವು ವಸಾಹತುಶಾಹಿ ಭಾರತದಲ್ಲಿ ನಡೆದ ಅತಿದೊಡ್ಡ ರೈತ ದಂಗೆಗಳಲ್ಲಿ ಒಂದಾಗಿದೆ.

ಡಾ ಸಿದ್ದಲಿಂಗ ಸ್ವಾಮಿ ಅವರ ಪ್ರಕಾರ, ಕೃಷಿಕರಿಗೆ ದೊಡ್ಡ ಹೊರೆ ಎಂದರೆ ಧಾನ್ಯ ಕಟಾವು ಮಾಡುವ ಮೊದಲು ಸರ್ಕಾರಕ್ಕೆ ಹಣವನ್ನು ಮುಂಗಡವಾಗಿ ಪಾವತಿಸುವುದು. ಯಾವುದೇ ಬಾಡಿಗೆದಾರ ಅಥವಾ ಸಾಗುವಳಿದಾರನು ಮುಂಗಡಕ್ಕೆ ಹಣವನ್ನು ಹೊಂದಿಲ್ಲದ ಕಾರಣ, ಅವರು ಸಾಹುಕಾರರನ್ನು ಆಶ್ರಯಿಸಲು ನಿರ್ಬಂಧವನ್ನು ಹೊಂದಿದ್ದರು. ಅವರು ತಿಂಗಳಿಗೆ ಎರಡು ಪ್ರತಿಶತದಷ್ಟು ಹಣವನ್ನು ಮುಂಗಡವಾಗಿ ಮತ್ತು ಮುಂಗಡದ ಮೇಲೆ ಐದು ಪ್ರತಿಶತವನ್ನು ಪಡೆಯುತ್ತಾರೆ. ಎರಡನೇ ಮತ್ತು ಮೂರನೇ ಕಂತಿಗೆ, ಪ್ರಸ್ತುತ ಬೇಡಿಕೆಯಿಲ್ಲ; ಆದರೆ ನಾಲ್ಕನೆಯದು ಕೊಡಬೇಕಾದಾಗ ಬೆಳೆಗಳನ್ನು ಅಡಮಾನ ಇಡಬೇಕಿತ್ತು. ಹೆಚ್ಚಿನ ಸಾಲದಾತರು ತಕ್ಷಣದ ಮಾರಾಟಕ್ಕೆ ಒತ್ತಾಯಿಸಿದರು ಮತ್ತು ಬಜಾರ್ ಬೆಲೆಯಲ್ಲಿ ಸ್ವತಃ ಖರೀದಿದಾರರಾದರು, ಅದು ನಂತರ ಯಾವುದೇ ಅವಧಿಗಿಂತ ಕಡಿಮೆಯಿರುತ್ತದೆ. ಸಾಹುಕಾರರ ವಿರುದ್ಧ ದೂರು ನೀಡಲು ಹಲವು ಸಾಲದ ಹೊರೆ ಹೊತ್ತ ರೈತರು ಸರಕಾರಕ್ಕೆ ಮುಗಿಬಿದ್ದರು. ಆದರೆ ಸಾಹುಕಾರರು ಶಕ್ತಿಶಾಲಿಗಳಾಗಿದ್ದರು. ಸಾಹುಕಾರರಿಗೆ ಸರ್ಕಾರವೂ ದೊಡ್ಡ ಮೊತ್ತದ ಬಾಕಿ ಉಳಿಸಿಕೊಂಡಿತ್ತು.

ಈ ವಿಷಾದನೀಯ ಸ್ಥಿತಿಯು ಭ್ರಷ್ಟ ಅಧಿಕಾರಿಗಳಿಂದ ನಿರ್ವಹಿಸಲ್ಪಡುವ ದುರ್ಬಲ ಮತ್ತು ಅಜ್ಞಾನದ ಸರ್ಕಾರವನ್ನು ಚಿತ್ರಿಸುತ್ತದೆ. ಅದರಲ್ಲಿ ಅಂತರ್ಗತವಾಗಿರುವ ದುಷ್ಟರ ಮೂಲಗಳನ್ನು ಸರಿಪಡಿಸಲು ಸಾಧ್ಯವಾಗಲಿಲ್ಲ. ಒಡೆಯರ್ ಸರ್ಕಾರ ಭ್ರಷ್ಟವಾಗಿದ್ದರಿಂದ ಜಿಲ್ಲಾಧಿಕಾರಿಗಳ ಮೇಲೆ ನಿಯಂತ್ರಣವೇ



ಇರಲಿಲ್ಲ. ಆ ಅಧಿಕಾರಿಗಳ ಅನ್ಯಾಯ ಮತ್ತು ನಿರಂಕುಶ ಕೃತ್ಯಗಳಿಂದ ಸಹಜವಾಗಿಯೇ ಜನ ರೊಚ್ಚಿಗೆದ್ದರು. ದೇಶದಲ್ಲಿ ಸಾರ್ವಜನಿಕರ ದೊಂಬಿಗಳ ದೂರುಗಳನ್ನು ಕೇಳುವ ಯಾವುದೇ ಪ್ರಕ್ರಿಯೆ ಇರಲಿಲ್ಲ. ಇದು ೧೮೩೦ ರಲ್ಲಿ ದಂಗೆಗೆ ಕಾರಣವಾಯಿತು.

**ಕರ್ನಾಟಕದ ಜಲಿಯನ್ ವಾಲಾಬಾಗ್ :**

ಅಮೃತಸರದಲ್ಲಿ ಡೈಯರ್‌ನ ಬಂದೂಕುಗಳು ಗುಂಡಿನ ಮಳೆ ಸುರಿಸುವ ೮೮ ವರ್ಷಗಳ ಹಿಂದೆ ಕರ್ನಾಟಕದ ನೆಲದಲ್ಲಿ ಜಲಿಯನ್‌ವಾಲಾಬಾಗ್ ರೀತಿಯ ಹತ್ಯಾಕಂಡ ನಡೆದಿರುತ್ತದೆ. ಮಂಗಲ್ ಪಾಂಡೆ ೧೮೫೭ ರಲ್ಲಿ ಭಾರತೀಯ ಸ್ವಾತಂತ್ರ್ಯಕ್ಕಾಗಿ ಮೊದಲ ಗುಂಡು ಹಾರಿಸಿದನು ಎಂದು ಇತಿಹಾಸ ಹೇಳುತ್ತದೆ. ಆದರೆ ಅದಕ್ಕೂ ಮೊದಲೆ ರೈತರ ವಿರುದ್ಧ ಬ್ರಿಟಿಷರು ಹಲವಾರು ಬಾರಿ ಅಸ್ತ್ರಗಳನ್ನು ತೆಗೆದುಕೊಂಡಿದ್ದರು. ಭಾರತದ ವಸಾಹತುಶಾಹಿಗಳಿಗೆ ಈ ಆರಂಭಿಕ ಪ್ರತಿರೋಧದಲ್ಲಿ ಕರ್ನಾಟಕವು ಮಹತ್ವದ ಪಾತ್ರವನ್ನು ವಹಿಸಿದೆ. ಟಿಪ್ಪುವಿನ ಮರಣದ ನಂತರ, ಟಿಪ್ಪುವಿನ ಸೈನ್ಯದಲ್ಲಿ ಹೋರಾಡಿದ ದೋಂಡಿಯಾ ವಾಘ್ ತನ್ನದೇ ಆದ ಸೈನ್ಯವನ್ನು ರಚಿಸಿದನು ಮತ್ತು ಮೈಸೂರಿನಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ತೆಗೆದುಕೊಂಡನು. ಶಿವಮೊಗ್ಗದಿಂದ ಆರಂಭವಾದ ನಗರ ಬಂಡಾಯದಲ್ಲಿ ಹಳದಮ್ಮ ದೇವಸ್ಥಾನದಲ್ಲಿ ರೈತರ ಹತ್ಯಾಕಾಂಡ ನಡೆಯುತ್ತದೆ. ದರೋಡೆಕೋರ ರಾಜನಿಂದ ಬ್ರಿಟಿಷರ ವಿರುದ್ಧ ರೈತರು ದಂಗೆಗೆ ಕಾರಣರಾದರು ಎಂದು ಹೇಳಲಾಗುತ್ತದೆ. ಜಮೀನ್ದಾರರು ಮತ್ತು ಬ್ರಿಟಿಷರೆರಡರಿಂದಲೂ ಬೇಸತ್ತ ಬಿದನೂರು–ನಗರ ಪ್ರಾಂತ್ಯದ ರೈತರು ಬೂದಿ ಬಸಪ್ಪ ನಾಯಕನನ್ನು ರಾಜನನ್ನಾಗಿ ಗುರುತಿಸಿದರು. ೧೮೩೦–೩೧ ರ ನಡುವೆ ನಡೆದ ದಂಗೆಯು ಶೀಘ್ರದಲ್ಲೇ ಮೈಸೂರು–ಹೈದರಾಬಾದ್ ಕರ್ನಾಟಕ ಪ್ರಾಂತ್ಯಗಳಿಗೆ ಹರಡಿತು. ಬ್ರಿಟಿಷರ ವಿರುದ್ಧ ದೊಂಡಿಯಾ ವಾಘ್ ಜೊತೆ ಹೋರಾಡಿದ ಸೈನಿಕರು ಬಸಪ್ಪ ನಾಯಕನ ದಂಗೆಯನ್ನು ಬೆಂಬಲಿಸಿದರು. ಬಸಪ್ಪ ಆಗಸ್ಟ್ ೨೩, ೧೮೩೦ ರಂದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆನಂದಪುರಂ ಬಳಿಯ

ಹೊಸಂತೆಯಲ್ಲಿ ಸಾವಿರಾರು ರೈತರ ಸಭೆಯನ್ನು ಆಯೋಜಿಸಿ ಬ್ರಿಟಿಷರ ವಿರುದ್ಧ ದಂಗೆಯೇಳುವಂತೆ ಪ್ರಚೋದಿಸಿದರು. ನಗರದ ರೈಟ್‌ಗಳು ಇತರ ಫೌಜ್‌ದಾರಿಗಳಲ್ಲಿ ಪತ್ರವನ್ನು ಪ್ರಸಾರ ಮಾಡಿದರು, ಇತರ ರೈಟ್‌ಗಳನ್ನು ಕೂಟದಲ್ಲಿ (ಅಸೆಂಬ್ಲಿ) ಒಟ್ಟುಗೂಡಿಸಲು ಆಹ್ವಾನಿಸಿದರು. ಸೆಪ್ಟೆಂಬರ್ ೨೩ ರಂದು ಚೆನ್ನಗಿರಿಯ ರೈಟ್‌ಗಳು ತಮ್ಮ ತೆರಿಗೆಯನ್ನು ಪಾವತಿಸಲು ನಿರಾಕರಿಸಿದರು ಮತ್ತು ನಗರ ಫೌಜ್‌ದಾರಿಯ ಇತರ ತಾಲ್ಲೂಕುಗಳು ಅವರನ್ನು ಅನುಸರಿಸಿದವು. ಡಿಸೆಂಬರ್‌ನಲ್ಲಿ, ಫೌಜ್ದಾರ್ ವೀರರಾಜ್ ಅರಸ್ ಹೊಳೆಹೊನ್ನೂರಿನಲ್ಲಿ ಪ್ರತಿಭಟನಾಕಾರರನ್ನು ಚದುರಿಸಲು ಸೈನ್ಯವನ್ನು ನೇಮಿಸಿದರು.

ಡಿಸೆಂಬರ್ ೨೧, ೧೮೩೦ ರಂದು, ಮೂಳೆಗಳು ಮತ್ತು ಬೇವಿನ ಎಲೆಗಳನ್ನು (ದಂಗೆಯ ಚಿಹ್ನೆಗಳು) ಹೊತ್ತೊಯ್ಯುವ ಎಲ್ಲ ವ್ಯಕ್ತಿಗಳನ್ನು ವಶಪಡಿಸಿಕೊಳ್ಳಲು, ವಿಚಾರಣೆಗೆ ಒಳಪಡಿಸಲು ಮತ್ತು ತಪ್ಪಿತಸ್ಥರಾದರೆ ಗಲ್ಲಿಗೇರಿಸಲು ನಿರ್ದೇಶಿಸುವ ಘೋಷಣೆಯನ್ನು ಹೊರಡಿಸಲಾಯಿತು. ಮರುದಿನ ಬೆಂಗಳೂರಿನ ಫೌಜ್‌ದಾರ್‌ಗೆ ಪ್ರತಿಭಟನಾಕಾರರ ಮೇಲೆ ಗುಂಡು ಹಾರಿಸಲು ಸೂಚನೆಗಳನ್ನು ನೀಡಲಾಯಿತು. ಮತ್ತು ಪ್ರತಿ ತಾಲ್ಲೂಕಿನಲ್ಲಿ ಒಬ್ಬ ಅಥವಾ ಇಬ್ಬರು ಪ್ರತಿಭಟನಾಕಾರರನ್ನು ಹಿಡಿದು ಜನರಲ್ಲಿ ಭಯವನ್ನು ಹರಡಲು ಅವರನ್ನು ಗಲ್ಲಿಗೇರಿಸಲಾಯಿತು. ಅನೇಕ ಬಂಡುಕೋರರನ್ನು ಹಿಡಿದು ಗಲ್ಲಿಗೇರಿಸಲಾಯಿತು. ಕೆಲವು ಬಂಡುಕೋರರ ಮೂಗು ಮತ್ತು ಕಿವಿಗಳನ್ನು ಕತ್ತರಿಸಲಾಯಿತು, ಇದರ ಪರಿಣಾಮವಾಗಿ ಹಲವಾರು ವ್ಯಕ್ತಿಗಳು ಕೆಟ್ಟದಾಗಿ ವಿರೂಪಗೊಂಡರು.

ದಂಗೆಯನ್ನು ಹತ್ತಿಕ್ಕಲು ಈ ಕ್ರಮ ಅನಿವಾರ್ಯವಾಗಿದೆ ಎಂದು ರಾಜಾ ಹೇಳಿದರು. ಇದರ ಪರಿಣಾಮವಾಗಿ ಭೂಪ್ರದೇಶದಾದ್ಯಂತ ಹಲವು ರೈತರನ್ನು ಮರಣದಂಡನೆಗೆ ಆದೇಶ ನೀಡಲಾಯಿತು. ಅವರು ತಮ್ಮ ಸ್ವಂತ ಇಚ್ಛೆಯಿಂದ ವರ್ತಿಸಲಿಲ್ಲ, ಆದರೆ ಬ್ರಿಟಿಷ್ ರೆಸಿಡೆಂಟ್ನ ಸಲಹೆಯನ್ನು ಅನುಸರಿಸುತ್ತಾರೆ ಎಂದು ರಾಜಾ ಪ್ರತಿಪಾದಿಸಿದರು.

ಹೊನ್ನಾಳಿ ತಾಲ್ಲೂಕಿನ (ದಾವಣಗೆರೆ) ಮಾರಿಕೊಪ್ಪದ ಹಳದಮ್ಮ



ದೇವಸ್ಥಾನದೊಳಗೆ ಪ್ರತಿಭಟನೆಯ ಸಮಯದಲ್ಲಿ, ಬ್ರಿಟಿಷ್ ಸೈನಿಕರು ೪೦ ರೈತರನ್ನು ಗುಂಡಿಕ್ಕಿ ಕೊಂದರು.೧೦೦ಕ್ಕೂ ಹೆಚ್ಚು ರೈತರು ಗಾಯಗೊಂಡಿದ್ದು, ೨೦೦ ಮಂದಿಯನ್ನು ಬಂಧಿಸಲಾಯಿತು.

ಬ್ರಿಟಿಷರು ಮಾರ್ಚ್ ೧೫, ೧೮೩೧ ರಂದು ಹರಿಹರದ ತಮ್ಮ ಸೇನಾ ಪ್ರಧಾನ ಕಛೇರಿಯಲ್ಲಿ ವಿಚಾರಣೆ ನಡೆಸಿದರು. ಸುಮಾರು ೧೦೦ ರೈತರನ್ನು ಬಿಡುಗಡೆ ಮಾಡಲಾಗಿದೆ ಎಂದು ದಾಖಲೆಗಳು ತೋರಿಸುತ್ತವೆ. ಆದರೆ ನಂತರ, ಹಳದಮ್ಮ ದೇವಸ್ಥಾನದ ಬಳಿ ೧೫೦ ರೈತರು–ಸೈನಿಕರನ್ನು ಗಲ್ಲಿಗೇರಿಸಲಾಯಿತು. ಮುಂದುವರಿದ ಸೇಡಿನ ಅಮಲಿನಲ್ಲಿ ಹೊನ್ನಾಳಿ–ಶಿಕಾರಿಪುರ ಮುಖ್ಯರಸ್ತೆಯಲ್ಲಿ ಮಾರಿಕೊಪ್ಪದಲ್ಲಿ ಹಲವಾರು ರೈತರು ಆಗಸ್ಟ್ ೨೩ ರಂದು ಮರಗಳಿಗೆ ನೇಣು ಹಾಕಿಕೊಂಡರು.

ಈ ನಡುವೆ ಬೆಂಗಳೂರು ಮತ್ತು ಚಿತ್ರದುರ್ಗ ವಿಭಾಗಗಳಲ್ಲಿ ದಿವಾನ್ ವೆಂಕಟ್ ರಾಜ್ ರವರು ರಾಯರ ಮನವೊಲಿಸಲು ಪ್ರಯತ್ನಿಸಿದರು. ಡಿಸೆಂಬರ್ ೧೮೩೦ ರಲ್ಲಿ ಸ್ವತಃ ಮಹಾರಾಜರು ಕೆಲವು ತಾಲೂಕುಗಳಿಗೆ ಪ್ರವಾಸ ಕೈಗೊಂಡರು. ಆದಾಗ್ಯೂ ಅವರು ಚನ್ನರಾಯಪಟ್ಟಣದಲ್ಲಿ ಮತ್ತು ಇತರ ಹಲವು ಸ್ಥಳಗಳಲ್ಲಿ ರಯಟ್‌ಗಳಿಂದ ಅವಮಾನಕ್ಕೊಳಗಾದರು. ಬಂಡುಕೋರರು ಸೈನ್ಯಕ್ಕೆ ಉತ್ತಮ ಹೋರಾಟವನ್ನು ನೀಡಿದರು. ಅವರು ನಗರದಲ್ಲಿನ ಕೆಲವು ಕೋಟೆಗಳನ್ನು ವಶಪಡಿಸಿಕೊಂಡರು ಮತ್ತು ಅನೇಕ ಸ್ಥಳಗಳಲ್ಲಿ ಅವರು ಮೈಸೂರು ಸೈನ್ಯವನ್ನು ಹಿಮ್ಮೆಟ್ಟಿಸಿದರು.

ಮೈಸೂರು ಪಡೆಗಳಿಗೆ ಹಿಮ್ಮುಖವಾಗಿ ದಂಗೆಯನ್ನು ಹತ್ತಿಕ್ಕಲು ಕಂಪನಿಯ ಪಡೆಗಳ ಉದ್ಯೋಗಕ್ಕೆ ಕಾರಣವಾಯಿತು. ೩೧ ಮೇ ೧೮೩೧ ರಂದು, ಬಂಡುಕೋರರ ಭದ್ರಕೋಟೆಯಾದ ನಗರವನ್ನು ವಶಪಡಿಸಿಕೊಳ್ಳಲಾಯಿತು ಮತ್ತು ದಂಗೆಯನ್ನು ಪ್ರಾಯೋಗಿಕವಾಗಿ ಶಮನಗೊಳಿಸಲಾಯಿತು. ಆದರೆ ದಂಗೆಯ ದಾರಿತಪ್ಪಿ ಗುಂಪುಗಳು ೧೮೩೨ ರವರೆಗೆ ಮುಂದುವರೆದು, ನಂತರ ಸಂಪೂರ್ಣವಾಗಿ ನಿಗ್ರಹಿಸಲ್ಪಟ್ಟಿತು.

ದಂಗೆಯು ಸ್ವಯಂಪ್ರೇರಿತವಾಗಿತ್ತು ಮತ್ತು ದೂರದೃಷ್ಟಿಯ ನಾಯಕತ್ವವನ್ನು ಹೊಂದಿರಲಿಲ್ಲ. ಆದರೆ ಇದು ಬ್ರಿಟಿಷ್ ಆಡಳಿತದ ವಿರುದ್ಧ ಕನ್ನಡಿಗರ ವಿವಿಧ ವಿಭಾಗಗಳಲ್ಲಿ ವ್ಯಾಪಕ ಕೋಪವನ್ನು ಪ್ರದರ್ಶಿಸಿತು. ಒಡೆಯರ್ ಮತ್ತು ಪೂರ್ಣಯ್ಯ ಅವರ ಕೈಗೊಂಬೆಗಳೆಂದು ನಿರೂಪಿಸಿತು. ಆದಾಗ್ಯೂ ಕಂಪನಿಯು ಒಡೆಯರ್‌ಗಳು ಮತ್ತು ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್ ಅವರಿಂದ ಸ್ವಾಯತ್ತತೆಯ ಯಾವುದೇ ಅಂಶವನ್ನು ತೆಗೆದುಹಾಕಲು ಈ ಸಂದರ್ಭವನ್ನು ಬಳಸಿಕೊಂಡಿತು, ಮುಂದೆ ಈ ಪ್ರದೇಶವನ್ನು ನಿರ್ವಹಿಸಲು ಆಯುಕ್ತರನ್ನು ನೇಮಿಸಲಾಯಿತು.

❑

ಅಧ್ಯಾಯ ೩

## ಗಾಂಧೀಜಿ ಪ್ರವಾಸ ಮತ್ತು ಪ್ರಭಾವ

೧೯೨೭ ಆಗಸ್ಟ್ ೨೭ ಅಂದು ತೀರ್ಥಹಳ್ಳಿಯ ತುಂಬೆಲ್ಲ ಗಡಿಬಿಡಿಯ ವಾತಾವರಣ. ಏಕೆಂದರೆ ಊರಿನ ಜನರೆಲ್ಲ ಮಹಾಸೇನಾನಿ ಮಹಾತ್ಮ ಗಾಂಧೀಜಿ ಬರುವನ್ನ ನಿರೀಕ್ಷಿಸುತ್ತಿದ್ದರು. ಸ್ವಾಗತ ಸಮಿತಿಯಲ್ಲಿ ಅಂಡೆಕುಳಿ ಮಂಜಪ್ಪ, ಬಾವಿಕಟ್ಟೆ ನಾಗಭಟ್ಟರು, ಕಾಳಿಂಗಯ್ಯ ರಾಘವೇಂದ್ರರಾಯರು, ಜ್ಞಾನೇಂದ್ರ ಪ್ರಭು, ವೈ ವಾಸಪ್ಪ, ಜವಳಿ ಮಾಧವರಾವ್, ಜವಳಿ ಭಾಸ್ಕರ ರಾವ್, ನಾಲೂರು ಶಂಕರಪ್ಪಗೌಡ, ಜವಳಿ ರಘುಪತಿರಾವ್ ಮಂತಾದವರಿದ್ದರು. ಈಗಿನ ತೀರ್ಥಹಳ್ಳಿಯ ಬಸ್ಟಾಂಡಿನ ಹಿಂಬಾಗದಲ್ಲಿ ಸಿಲ್ವರ್ ಜ್ಯುಬಿಲಿ ರೀಡಿಂಗ್ ರೂಮ್ ಇತ್ತು. ಅಲ್ಲಿ ಗಾಂಧೀಜಿಯವರು ಸ್ವಲ್ಪ ಕಾಲ ತಂಗುವ, ವಿಶ್ರಾಂತಿ ತೆಗೆದುಕೊಳ್ಳುವ ಯೋಜನೆಯಾಗಿತ್ತು. ಪ್ರಭಾತ್ ಫೇರಿ ಮುಗಿಯುವುದರೊಳಗೆ ಅಲ್ಲಿ ಜನ ಜಾತ್ರೆ ಸೇರಿತ್ತು. ಯಡೆಹಳ್ಳಿ ವಾಸಪ್ಪನವರು ಶುದ್ಧ ಕಂಠದಿಂದ ಪ್ರಭಾತ್ ಫೇರಿ ಹಾಡುಗಳನ್ನು ಹೇಳಿಕೊಡುತ್ತಿದ್ದರು. ಹನ್ನೆರಡು ಘಂಟೆಯ ವೇಳೆಗೆ ಗಾಂಧೀಜಿಯವರ ಕಾರ್ ಅಲ್ಲಿಗೆ ಬಂದಿತು. ಜಯಘೊಷ ಭೋರ್ಗರೆಯಿತು. ಸಾಲಾಗಿ ನಿಂತಿದ್ದ ಜನ ಕಮಗೋಡು ನರಸಿಂಹಶಾಸ್ತ್ರಿಗಳು ಆ ಸಂದರ್ಭಕ್ಕೆಂದೇ ಬರೆದ ಪ್ರಾಸಬದ್ಧ, ಲಯಬದ್ಧ ಕವನವನ್ನು ಹಾಡುಲು ಶುರುಮಾಡಿದರು:

**ಜಯ ಜಯ ಪಾವನಚರಿತನೆ ।**
**ಜಯ ಭಾರತ ಭಾಗ್ಯೋದಯ ಗಾಂಧೀ ॥**
**ಮಕ್ಕಳ ಕಾಸನು ಕೊಳ್ವನು ಗಾಂಧೀ ।**
**ಮನೆಯಂಗಳದೊಳು ಬರುವನು ಗಾಂಧೀ ॥**
**॥ ಜಯ ಜಯ ॥**

ಗಾಂಧಿಯ ಜೊತೆಗೆ ಬಂದಿದ್ದ ಗಾಂಧೀಟೋಪಿಧಾರಿಗಳೊಬ್ಬರು ಹೊರಗೆ ಬರುತ್ತಾರೆ. ಹೊರಗೆ ಬಂದವರೇ ಏಕಾ ಏಕಿ, ಹತ್ತಿರದಲ್ಲಿದ್ದ ಟೇಬಲ್ ಒಂದನ್ನು ಹತ್ತಿ ಭಾಷಣ ಪ್ರಾರಂಭ ಮಾಡಿದರು. ಅಲ್ಲಿ ಸೇರಿದ್ದ ಅನೇಕ ಹದಿಹರೆಯದವರು ಕೇಳಿದ ಮೊದಲ ರಾಜಕೀಯ ಭಾಷಣ ಅದು. ಆ ಕಂಚಿನ ಕಂಠ ಭಾಷಣ ದೇಶಪಾಂಡೆ ಗಂಗಾಧರರಾಯರದು. ಆನಂತರ ಸಿ ರಾಜಗೋಪಾಲಚಾರ್ಯರು ಭಾಷಣ ಮಾಡುತ್ತಾರೆ. ಅವರು ಖಾದಿ ಟೋಪಿ ಧರಿಸಿರುವುದಿಲ್ಲ, ಪಂಚೆ, ಬನಿಯನ್, ಮೇಲೊಂದು ಅಂಗವಸ್ತ್ರ, ಬೋಳುತಲೆಯ ನಡುವೆ ಪಿಳ್ಳಂಜುಟ್ಟು. ಮಧ್ಯಾಹ್ನ ವೈ.ಶೇಷಪ್ಪನವರ ನಾಟಕದ ಗೇಟಿನ ಥಿಯೇಟರಿನಲ್ಲಿ ಗಾಂಧೀಜಿ ಅವರ ಭಾಷಣ ಇದೆ ಅಲ್ಲಿ ಎಲ್ಲರೂ ಬರ್ರಿ ಎಂದು ಮಧ್ಯದಲ್ಲಿ ಮಾತುಗಳು ಕೇಳಿ ಬರುತ್ತವೆ. ಎಲ್ಲರೂ ವೈ ಶೇಷಪ್ಪನವರ ಥಿಯೇಟರಿಗೆ ಓಡುತ್ತಾರೆ.

ಮಂಜುನಾಥಯ್ಯನವರು ಹೊಸ ಮನೆಯೊಂದನ್ನು ಕಟ್ಟಿಸುತ್ತಿದ್ದು ಹೆಚ್ಚಿನ ಕೆಲಸಗಳು ಮುಗಿದಿದ್ದವು, ಗೃಹಪ್ರವೇಶಕ್ಕೆ ಮುಹೂರ್ತ ಹುಡುಕುತ್ತಿದ್ದರು, ಅದೇ ವೇಳೆಗೆ ಸರಿಯಾಗಿ ಗಾಂಧೀಜಿಯವರ ಕಾರ್ಯಕ್ರಮ ತೀರ್ಥಹಳ್ಳಿಗೆ ಕೂಡಿ ಬಂದಿತ್ತು. ಗಾಂಧೀಜಿಯವರು ತೀರ್ಥಹಳ್ಳಿಗೆ ಆಶ್ಚರ್ಯವಾಗುವಂತೆ ಮಂಜುನಾಥಯ್ಯನವರ ಮನೆಯ ಗೃಹ ಪ್ರವೇಶವನ್ನು ತಮ್ಮ ಅಮೃತ ಹಸ್ತದಿಂದ ನೆರವೇರಿಸಿಕೊಡಲು ಒಪ್ಪಿಕೊಳ್ಳುತ್ತಾರೆ. ಆಗ ಕಾಂಟ್ರಾಕ್ಟರ್ ಆಗಿದ್ದ ಚಲೋ ಶೆಟ್ಟಿ ಎಂಬ ಪರಮಧಾರ್ಮಿಕ ಗಾಂಧೀ ಭಕ್ತರು, ನೂರಾರು ಜನ ಸರ್ಪಕಡಿದವರಿಗೆ ಧರ್ಮಾರ್ಥ ಚಿಕಿತ್ಸೆ ನಡೆಸಿ ಗುಣಪಡಿಸುತ್ತಿದ್ದ ಇವರು ಮಂಜುನಾಥಯ್ಯನವರಿಗೆ ಗೃಹ ಪ್ರವೇಶ ಕಾರ್ಯದಲ್ಲಿ ಎಲ್ಲ ರೀತಿಯ ಸಹಾಯ ಮಾಡುತ್ತಾರೆ.

ಮಧ್ಯಾಹ್ನ ೩:೩೦ ಗಂಟೆ ಆಗೇ ಹೋಯಿತು. "ಓಹ್ಹೋಹ್ಹೋ ! ಬಂದರು ಬಂದರು ಗಾಂಧೀಜಿಯವರ ಬಂದರು!" ಎನ್ನುತ್ತಿರುವಾಗಲೇ ಶೇಷಪ್ಪನವರ ಥಿಯೇಟರ್ ಕಾರ್ಯಕ್ರಮವನ್ನು ಮುಗಿಸಿ ಗಾಂಧೀಜಿಯವರು ಕಾರಿನಲ್ಲಿ ಮಂಜುನಾಥಯ್ಯನವರ ಮನೆ ಮುಂದೆ ಬಂದು ಕಾರ್ ನಿಲ್ಲಿಸುತ್ತಾರೆ. ಮನೆಯ ಜನರೆಲ್ಲ ಗಡಿಬಿಡಿಯಲ್ಲಿ ದಿಕ್ಕೆಟ್ಟು ಅತ್ತಿತ್ತ ಓಡಾಡುತ್ತಿರುವಾಗ ಬಾಪೂಜಿ ಯವರು ತಡಮಾಡದೆ ಕಾಂಪೌಂಡಿನ ಬಾಗಿಲನ್ನು ದಾಟಿ ಖಾದೀದಾರಿ ವಕೀಲ



ಮಾಳೂರು ಸುಬ್ಬರಾಯರ ಜತೆಯಲ್ಲಿ ಏನೋ ಮಾತುಗಳನ್ನಾಡುತ್ತಾ, ವಿಚಾರಿಸುತ್ತಾ ಜಗುಲಿ ಹತ್ತಿದರು.

ಮಂಜುನಾಥಯ್ಯನವರು ಭಯ ಭಕ್ತಿಯಿಂದ ಹರಿವಾಣ ಒಂದರಲ್ಲಿ ಒಂದು ನೂರು ರೂಪಾಯಿಗಳನ್ನು ಮಾಲೂರು ಸುಬ್ಬರಾಯರ ಆಶಯದಂತೆ ತುಳಸಿದಳ ದೊಂದಿಗೆ ಆ ನೂರು ರೂಪಾಯಿಯನ್ನ ಹಣ್ಣುಗಳ ಸಮೇತ ಮಗ ಯು.ಶ್ರೀನಿವಾಸ್ ರಾವ್ ನೊಡನೆ ಗಾಂಧೀಜಿಗೆ ಅರ್ಪಿಸಿದರು. ಧರ್ಮಪತ್ನಿ ಗಂಗಮ್ಮನವರು ಯಾವುದೋ ಒಂದು ಬಂಗಾರದ ಚೂರನ್ನು, ಅಕ್ಕ ಲಕ್ಷ್ಮಮ್ಮ ಮಂಗಲಸೂತ್ರ ತಾಳಿಯನ್ನು ಗಾಂಧೀಜಿಗೆ ಅರ್ಪಿಸುತ್ತಾರೆ. ( ಲಕ್ಷ್ಮಮ್ಮರ ಗಂಡ ತೀರಿಹೋಗಿ ಕೆಲವೆ ದಿನಗಳಾಗಿರುತ್ತದೆ ). ಹರಿವಾಣವನ್ನು ಬಾಪೂಜಿ ಅವರು ತಮ್ಮ ಹಿಂದೆ ಬರುತ್ತಿದ್ದ ಒಬ್ಬರ ಕೈಯಲ್ಲಿಟ್ಟು ಬಂಗಾರಗಳನ್ನು ಬೇರೊಬ್ಬರ ಕೈಯಲ್ಲಿ ಕೊಟ್ಟು. ಪುರೋಹಿತರು ಕೊಟ್ಟ ಅಕ್ಷತೆ ಕಾಳುಗಳನ್ನು ಹಾಕಿ ಬಾಗಿಲು ತೆಗೆಯುತ್ತಾರೆ. ಬಲಗಡೆಯ ಕೋಣೆಗೆ ನಡೆದು. ಅಲ್ಲಿ ಮಂಚದ ಫಾಸಿಗಳನ್ನು ಬಿಡಿಸಿದ್ದರ ಮೇಲೆ ಸ್ವಲ್ಪ ಕುಳಿತಂತೆ ಮಾಡಿ. ದೇಶಕ್ಕಾಗಿ ತ್ಯಾಗ ಮಾಡಬೇಕೆಂದು ಮನೆಯವರ ಕಡೆ ತಿರುಗಿ ಹೇಳುತ್ತಾರೆ. ಮತ್ತೊಂದು ನಿಮಿಷದಲ್ಲಿ ಅವರಿಗೆ ಅರ್ಪಿಸಿದ್ದ ತಟ್ಟೆಯಲ್ಲಿದ್ದ ಕಿತ್ತಲೆಹಣ್ಣನ್ನು ತೆಗೆದು ಹತ್ತಿರದಲ್ಲಿದ್ದ ಶಾರದಮ್ಮನಿಗೆ ಕೊಟ್ಟು ಹೊರನಡೆಯುತ್ತಾರೆ. ಅಂದು ಗಾಂಧೀಜಿಯವರು ಆ ಮನೆಯಲ್ಲಿ ಕೊಟ್ಟ ಆಜ್ಞೆಯಂತೆ ಮುಂದೆ ಇಡೀ ಕುಟುಂಬವೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿತು.

ಈ ಮನೆತನದ ಸ್ವಾತಂತ್ರ್ಯ ಸಂಗ್ರಾಮದ ಮೊದಲನೆಯ ಬಲಿ ನವವಿವಾಹಿತ ತರುಣ, ಯು. ಶ್ರೀನಿವಾಸರಾವ್ ಸತ್ಯಾಗ್ರಹದ ಕಾರಣಕ್ಕಾಗಿ ಕಠಿಣ ಶಿಕ್ಷೆಗೆ ಒಳಪಡಿಸುತ್ತಾರೆ. ಬೈರಮಂಗಲ ಕೆರೆಯಲ್ಲಿ ಸುಡುಬಿಸಿಲಿನಲ್ಲಿ ಅವರನ್ನು ಬರಿಗಾಲಿನಲ್ಲಿ ಮಣ್ಣು ಹೊರಲಿಕ್ಕೆ ಹಚ್ಚುತ್ತಾರೆ. ಮಂಜುನಾಥಯ್ಯನವರು ಮತ್ತೆ ಸೆರೆಮನೆ ಸೇರಿ ಆನಂತರ ಬಿಡುಗಡೆಯಾಗಿ ಗಡಿಪಾರ್ ಶಿಕ್ಷೆಗೆ ಗುರಿಯಾಗುತ್ತಾರೆ. ಮಂಜುನಾಥಯ್ಯನವರ ಪತ್ನಿ ಗಂಗಮ್ಮನವರು ಸ್ವಯಂಸೇವಕರಿಗೆ ಸಹಕಾರ, ರಕ್ಷಣೆ ಕಾರ್ಯಗಳನ್ನು ನಡೆಸುತ್ತಿರುತ್ತಾರೆ. ಶಿವಮೊಗ್ಗದಲ್ಲಿದ್ದ ಇವರ ಜ್ವರಾರಿ ಕಂಪನಿಯೇ ಭೂಗತರ ಚಳುವಳಿಯ ಕೇಂದ್ರವಾಗಿತ್ತು. ಅಡಗಿ ಕುಳಿತುಕೊಂಡು,

ಅಂಗಡಿಗೆ ಬರುವ ಸಿ.ಐ.ಡಿ ಗಳ ಮೇಲೆ ಕಣ್ಣಿಡಲು, ಒಂದು ಗಟ್ಟಿ ತೊಟ್ಟಿಲ್ಲನ್ನೇ ಔಷಧಗಳನ್ನು ತುಂಬಿದ ಬೀರುಗಳ ಹಿಂದುಗಡೆ ನೇತುಬಿಡಲಾಗಿತ್ತು. ಅದರಿಂದಾಗಿ, ಎಷ್ಟು ಸಾರಿ ಜ್ವರಾರಿ ಕಂಪನಿಯನ್ನು ಜಪ್ತಿ ಮಾಡಿದರೂ ಯಾವ ಭೂಗತರೂ ಅಲ್ಲಿ ಅವರ ಕೈಗೆ ಸಿಕ್ಕಿರಲಿಲ್ಲ. ಮಂಜುನಾಥಯ್ಯನವರ ಅಳಿಯ ಟಿ.ಭಾಸ್ಕರರಾವ್ ಸತ್ಯಾಗ್ರಹಿಯಾಗಿ, ಶಿಕ್ಷೆ ಅನುಭವಿಸಿ ತಾಮ್ರಪತ್ರ ಪಡೆಯುತ್ತಾರೆ. ಟಿ ವಿಶ್ವನಾಥ್ ರಾವ್ ಅನೇಕ ಸಾರಿ ಭೂಗತ ಕಾರ್ಯ ನಡೆಸಿ ಶಾಂತಿಕಾಲದಲ್ಲಿ ಹೆಚ್ಚಿನ ರಚನಾತ್ಮಕ ಕಾರ್ಯದಲ್ಲಿ ಭಾಗವಹಿಸುತ್ತಾರೆ. ಇದಕ್ಕೆ ಶಿವಮೊಗ್ಗದ ಮಂಜುನಾಥಯ್ಯನವರ ಸ್ನೇಹಿತ ನಾರಾಯಣರಾಯರು ತುಂಬಾ ಸಹಕಾರ ನೀಡುತ್ತಾರೆ ಆಗ ಶಿವಮೊಗ್ಗದಲ್ಲಿ ದುಡಿಯುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರ ಎಂ.ಸಿ.ಮಾತಂಡ್ ರೊಡನೆ, ವಿಶ್ವನಾಥರನ್ನು  ವಾರವಾರವೂ ಖಾದಿಯನ್ನು ಹೊತ್ತು ಮನೆ ಮನೆಗೆ ಮಾರಲಿಕ್ಕೂ, 'ವಂದೇ ಮಾತರಂ' ಎಂದು ಮನೆ ಮನೆ ಬೇಡಿ ನಿಧಿ ಸಂಗ್ರಹಿಸಲಿಕ್ಕೂ ಕಳುಹಿಸುತ್ತಿದ್ದರು. ಜೈಲಿನಲ್ಲಿ ವಿಪರೀತ ಕಷ್ಟದ ಜೀವನ ನಡೆಸಿ ಹೊರಗೆ ಬಂದ ಯು. ಶ್ರೀನಿವಾಸರಾವ್ ಮುಂದೆ ಬಹಳ ವರ್ಷ ಬದುಕಲೇ ಇಲ್ಲ. ಚಿಕ್ಕಚಿಕ್ಕ ಮಕ್ಕಳನ್ನು ಅಜ್ಜ–ಅಜ್ಜಿ ತಾಯಿಯವರ ಸ್ವಾಧೀನಕ್ಕೆ ಒಪ್ಪಿಸಿ ತಾರುಣ್ಯದಲ್ಲಿಯೇ ಅಸುನೀಗಿದರು. ಮೊಮ್ಮಕ್ಕಳನ್ನು ಹಾಕಿಕೊಂಡು ಮಂಜುನಾಥಯ್ಯನವರು ಆನಂತರ ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸಿ, ಸೆರೆವಾಸವನ್ನು ಅನುಭವಿಸಿ, ಎಲ್ಲಾ ಕಷ್ಟಗಳಿಗೂ ಗುರಿಯಾಗಿ ದುಡಿಮೆಯನ್ನು ನಡೆಸಿ ಜರ್ಝರಿತರಾಗಿ, ಎಲ್ಲ ಜವಾಬ್ದಾರಿಯನ್ನು ಪತ್ನಿ ಗಂಗಮ್ಮ ನವರಿಗೆ ಬಿಟ್ಟು ಪರಲೋಕ ವಾಸಿಗಳಾದರು. ಗಂಗಮ್ಮ ನವರು ಜರ್ಝರಿತರಾಗಿದ್ದರು ಮಕ್ಕಳ ವಿದ್ಯಾಭ್ಯಾಸ ಹೊಲ–ಮನೆ ನಿಭಾವಣೆ, ಅಂಗಡಿ ವ್ಯಾಪಾರ, ಕಾರ್ಯಗಳನ್ನೆಲ್ಲಾ ನೋಡಿಕೊಂಡು ಬಹಳವರ್ಷ ಬದುಕಲಾರದೆ ಗತಿಸಿದರು. ಭಾಸ್ಕರ ರಾಯರು ೫೦ ವರ್ಷದೊಳಗೆ ಮುದುಕರಂತಾಗಿ ದೃಷ್ಟಿ ಮಾಂದ್ಯಕ್ಕೆ ಗುರಿಯಾಗಿ ಬಹಳ ಕಷ್ಟದ ಜೀವನ ನಡೆಸುತ್ತಾರೆ. ಎಲ್ಲರಿಗೂ ಜ್ವರಾರಿ ಕಂಪನಿಯ ತ್ಯಾಗ ಸೇವೆಗಳು ತಿಳಿದಿದ್ದರು ಮುಂದೆ ಯಾರೂ ಅವರನ್ನು ಯಾವ ಕಾರ್ಯಕ್ರಮಗಳಿಗೂ ಆಹ್ವಾನಿಸದೆ ಇದ್ದುದು ದುರಂತವೇ ಸರಿ. ಶ್ರೀನಿವಾಸರಾಯರ ಮಕ್ಕಳು ಎಲ್ಲೆಲ್ಲೂ ಹೆಸರಿಲ್ಲದವರಂತೆ ಇದ್ದಾರೆ. ಯಾರೂ



ಇವರನ್ನು ವಿಚಾರಿಸಿಕೊಳ್ಳದಿದ್ದರು, ಕಡಿದಾಳ ಮಂಜಪ್ಪನವರು ಮಾತ್ರ ಊರಿಗೆ ಬಂದಾಗಲೆಲ್ಲಾ ಈ ತಬ್ಬಲಿ ಮಕ್ಕಳನ್ನು ವಿಚಾರಿಸಿ, ಯೋಗಕ್ಷೇಮವನ್ನು ಕೇಳದೆ ಹೋಗುತ್ತಿರಲಿಲ್ಲ.

ಗಾಂಧೀಜಿಯವರ ತೀರ್ಥಹಳ್ಳಿ ಪ್ರವಾಸ ಅನೇಕರ ಮೇಲೆ ಪ್ರಭಾವಬೀರಿ ಮುಂದೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗುತ್ತಾರೆ. ಶಿವರಾಮ ಐತಾಳರು ಡಾ। ಹರ್ಡೀಕರರ ಸೇವಾದಳ ಸೇರಿ ಪ್ರತಿ ಸೋಮವಾರ ಮನೆಮನೆಗೆ ಭೇಟಿ ನೀಡಿ ಪ್ರಚಾರ ನಡೆಸುವ ಕೆಲಸದಲ್ಲಿ ಪಾಲ್ಗೊಂಡರು. ಕಾಂಗ್ರೆಸ್ ಕನ್ವೆನ್ಷನ್ ನಂತರ ಎಲ್ಲೆಡೆ ಪ್ರತಿಬಂಧಕಾಜ್ಞೆ ಹೇರಿದಾಗ ಶಿವರಾಮ ಐತಾಳ ಮತ್ತು ಪಾಂಡುರಂಗ ಭಟ್ಟರ ಮೇಲೆ ಪ್ರತಿಬಂಧ ಜಾರಿಮಾಡಲು ಅವರು ಕೊಪ್ಪಕ್ಕೆ ಹೋಗಿ ಕಾಂಗ್ರೆಸ್ ಕೆಲಸ ಮಾಡಿದರು. ಇದೇ ಕಾಲಕ್ಕೆ ನ್ಯಾಯವಿಧಾಯಕ ಸಭೆಗೆ ಪಾತ್ರೆ ಅಂಗಡಿ ಎಸ್. ಆರ್. ಸುಬ್ರಾವ್ ಹಾಗೂ ಪ್ರಜಾಪ್ರತಿನಿಧಿ ಸಭೆಗೆ ಭೂಪಾಳಂ ಪುಟ್ಟನಂಜಪ್ಪ  ಆರಿಸಿ ಬರುವಂತೆ ಶ್ರಮಿಸುತ್ತಾರೆ.

ಒಂದು ತಾಲ್ಲೂಕು ಕೇಂದ್ರದಲ್ಲಿ ಪತ್ರಿಕೆಗಳು ನಡೆಯುವುದೇ ಕಷ್ಟವಿರುವ ಸಂದರ್ಭದಲ್ಲಿ ತೀರ್ಥಹಳ್ಳಿಯಲ್ಲಿ ಆ ಕಾಲಕ್ಕೆ ಎರಡು ಪತ್ರಿಕೆಗಳು ನಡೆಯುತ್ತಿದ್ದವು.

ಗಾಂಧೀಜಿಯವರ ತೀರ್ಥಹಳ್ಳಿಯ ಪ್ರವಾಸ ಒಂದು ಹೊಸ ಚೇತನದ ಬುಗ್ಗೆಯನ್ನೇ ಹೊಮ್ಮಿಸಿತು. ಇದರ ಪ್ರತೀಕವೆ ' ಜನ್ಮಭೂಮಿ' ವಾರಪತ್ರಿಕೆ, 'ಆಯುರ್ವೇದ' ಮಾಸಪತ್ರಿಕೆ. 'ಜನ್ಮಭೂಮಿ'ಗೆ ಚಿನ್ನದ ಭಂಡಾರದ ಸುಬ್ಬರಾಯರು ಸಂಪಾದಕರಾದರೆ, 'ಆಯುರ್ವೇದ'ಕ್ಕೆ ಸಟ್ಟಗೆರೆ ಸೂರ್ಯನಾರಾಯಣ ಶಾಸ್ತ್ರಿಗಳು ಸಂಪಾದಕರಾಗಿದ್ದರು. ಸೂರ್ಯನಾರಾಯಣ ಶಾಸ್ತ್ರಿಗಳು ಪ್ರಕಾಂಡ ಪಂಡಿತರಾಗಿದ್ದುದು, ಅಲ್ಲದೇ ಕಟ್ಟಾ ಗಾಂಧೀವಾದಿಗಳಾಗಿದ್ದರು. ಆರ್ಯುವೇದ ಗ್ರಂಥಗಳಲ್ಲಿನ ಅವರ ಜ್ಞಾನ, ಸಂಸ್ಕೃತ ವೈದುಷ್ಯ ಅಪಾರ. ಚಿನ್ನದ ಭಂಡಾರದ ಸುಬ್ಬರಾಯರು ಅಂಥ ಪಾಂಡಿತ್ಯವನ್ನು ಹೊಂದಿರದಿದ್ದರೂ ಸರಳಜೀವಿಗಳಾಗಿದ್ದು, ನಿಷ್ಠಾವಂತ ಕೆಲಸಗಾರರಾಗಿದ್ದರು. ಇವರಿಬ್ಬರೂ ಅವರ ಹೃದಯಗಳಿಗೆ ಖಾದಿಯನ್ನು ತೊಡಿಸಿಕೊಂಡಿದ್ದರು. ಸುಬ್ಬರಾಯರು ಖಾದಿ ಟೋಪಿಯನ್ನ

ಧರಿಸಿ, ಹೆಗಲಿಗೊಂದು ಚೀಲವನ್ನು ಸಿಕ್ಕಿಸಿಕೊಂಡು, ಪತ್ರಿಕಾವ್ಯವಸಾಯಕ್ಕೆ ಹೊರಡುತ್ತಿದ್ದರೆ, ಶಾಸ್ತ್ರಿಗಳದ್ದು ಪಿಳ್ಳಂಜುಟ್ಟು, ಶಾಲನ್ನು ಹೊದ್ದುಕೊಂಡು ಕಾರ್ಯೋನ್ಮುಖರಾಗುತ್ತಿದ್ದರು. ತಾಲ್ಲೂಕಿನ ಹಳ್ಳಿಗಳಲ್ಲಿ ಸಂಚರಿಸಿ, ಸ್ವಾತಂತ್ರ್ಯದ ಪ್ರಚಾರ ಮಾಡುತ್ತಿದ್ದರು.

ಆಗ ತೀರ್ಥಹಳ್ಳಿಯಲ್ಲಿ ಆಯುರ್ವೇದ ಅಭಿಮಾನ ಮೂರ್ತಿಭವಿಸಿಬಿಟ್ಟಿತ್ತು. ಏಕಮೂಲಿಕಾವೈದ್ಯರಾದರೂ ಅವರಲ್ಲಿ ಕಿಂಚಿತ್ತೂ ಕೀಳರಿಮೆ ಇರಲಿಲ್ಲ. ಹಲಸಿನ ಹಳ್ಳಿ ಸುಬ್ಬಣಾಚಾರ್ ಎಂಬುವರು ರೇಶ್ಮೆ ಜ್ವರ ಚಿಕಿತ್ಸೆಯಲ್ಲಿ ತಾಲ್ಲೂಕಿನಲ್ಲಿಯೆ ಪ್ರಸಿದ್ಧರಾಗಿದ್ದರು, ಮಕ್ಕಿಮನೆ ರಾಮಚಂದ್ರ ರಾಯರು ಬಾವಿನ ಚಿಕಿತ್ಸೆಯ ಎಣ್ಣೆ, ಬೇರು, ಗುಳಿಗೆಗಳಿಗೆ ಹೆಸರುವಾಸಿಯಾಗಿದ್ದರು. ಬೆಟ್ಟಮಕ್ಕಿಯವರು ಮೂಳೆಯ ಮುರಿತಗಳನ್ನು ಕಟ್ಟಿ ಸರಿಪಡಿಸುವುದರಲ್ಲಿ ಹೆಸರುಗಳಿಸಿದ್ದರು. ಸುಬ್ಬರಾಯರಿಗೆ ತಾಲ್ಲೂಕೇ ಆಶ್ರಯ ಕೊಟ್ಟಿತ್ತು. ಪತ್ರಿಕಾ ಪ್ರಚಾರ ಒಂದಂಶವಾದರೆ, ಖಾದೀ ಪ್ರಚಾರ, ಸ್ವಾತಂತ್ರ್ಯ ಸಂಗ್ರಾಮದ ಸಿದ್ಧತೆಗಳ ಪ್ರಚಾರ ಇನ್ನೆರಡು ಅಂಶಗಳು.

ಕ್ರಮೇಣ ಈ ಪತ್ರಿಕೆಗಳು ವ್ಯಾಪ್ತಿ ಜಿಲ್ಲಾ ಮಟ್ಟದವರೆಗೆ ತಲುಪಿತು. ಮಾಧವನಿದಾನ, ಶಾರ್ಙ್ಗಧರಸಂಹಿತೆ ಎಂಬ ಉದ್ಗ್ರಂಥಗಳ ಅನುವಾದವಾಯಿತು. ಕೆಲವು ವರ್ಷಗಳ ನಂತರ ಈ ಪತ್ರಿಕೆಗಳು ಮುಕ್ತಿಯನ್ನು ಕಂಡರೂ ಅವುಗಳ ಸ್ಮರಣೆ ರಾಷ್ಟ್ರೀಯ ಹೋರಾಟದ ಸ್ಮೃತಿಗಳಲ್ಲಿರಬೇಕಾದುದು ಸೂಕ್ತವಲ್ಲವೆ.

ಗಾಂಧೀಜಿಯವರು ತೀರ್ಥಹಳ್ಳಿಗೆ ಬರಲು ಮುಖ್ಯಕಾರಣ ಅಂಡೆಕುಳಿ ಮಂಜಯ್ಯನವರು. ತೀರ್ಥಹಳ್ಳಿಯ ಮಂಜಯ್ಯನವರು ೧೯೧೮ರಿಂದ ಕಾಂಗ್ರೆಸ್ಸಿನ ವಿಚಾರದಲ್ಲಿ ಆಸ್ಥೆ ಉಳ್ಳವರು. ಕೊಪ್ಪಳ ಜಯರಾಮಾಚಾರ್ಯ ಹರಿಕಥೆ ಯಿಂದ ಪ್ರಭಾವಿತರಾಗಿ ೧೯೨೧– ೨೨ರಲ್ಲಿ ತಮ್ಮ ಭಾರಿ ಜವಳಿ ಅಂಗಡಿಯಲ್ಲಿದ್ದ ಸುಮಾರು ಇಪ್ಪತ್ತು ಇಪ್ಪತ್ತೈದು ಸಾವಿರ ಬೆಲೆಯ ಬಟ್ಟೆಯನ್ನು ನಾರಾಯಣನಿಗೆ ಆಹುತಿ ಮಾಡಿದ್ದರು. ಇದು ಅನೇಕರ ಮೇಲೆ ಭಾರಿ ಪ್ರಭಾವ ಬೀರಿತ್ತು. ಮಂಜಯ್ಯನವರು ಬಸವಾನಿಯಲ್ಲಿ ಖಾದಿ ಉತ್ಪಾದನಾ ಕೇಂದ್ರ ಸ್ಥಾಪಿಸುತ್ತಾರೆ. ಇದರಿಂದ ಊರಿನ ಯುವಕರಿಗೆ ಉದ್ಯೋಗಾವಕಾಶ ದೊರೆಯುತ್ತದೆ.



ಗಾಂಧೀಜಿಯವರ ಪ್ರೇರಣೆಯಿಂದ ಇವರು ತೀರ್ಥಹಳ್ಳಿ ಸಮೀಪದ ಬಾಳೆಬಯಲಿನಲ್ಲಿ ಸಾಬರಮತಿ ಮಾದರಿಯ ಬ್ರಹ್ಮಚರ್ಯಾಶ್ರಮವನ್ನು ವಸಿಷ್ಠ ಕುಲದ ಅನಂತಶರ್ಮರ ನೇತೃತ್ವದಲ್ಲಿ ಸ್ಥಾಪಿಸಿ. ಅದಕ್ಕಾಗಿ ಸಾವಿರಾರು ರೂ ವೆಚ್ಚ ಮಾಡಿದರು. ಕಾಂಗ್ರೆಸ್ಸಿನ ಎಲ್ಲಾ ಅಧಿವೇಶನಗಳಿಗೆ ಹೋಗಿಬರುತ್ತಿದ್ದ ಅವರು ಎಐಸಿಸಿ ಸದಸ್ಯರು ಆದರೂ ಕೆಲವು ಕಾಲ ಡಿ.ಸಿ.ಸಿ.ಯ ಅಧ್ಯಕ್ಷರು ಆಗಿದ್ದರು. ಡಾ। ಹರ್ಡೀಕರ್, ಡಾ।ಪಾರ್ಥನಾರಾಯಣ ಪಂಡಿತ್ ಮುಂತಾದವರು ಮಿತ್ರರಾಗಿದ್ದು ಸೇವದಳದ ಕೆಲಸಗಳಿಗೆ ಕೈ ಜೋಡಿಸಿ ಧನಸಹಾಯ ಮಾಡುತ್ತಿದ್ದರು. ಸಂತ್ರಸ್ತ ಸತ್ಯಾಗ್ರಹಿಗಳ ಕುಟುಂಬ ಪೋಷಣೆಗೂ ವೆಚ್ಚ ಮಾಡುತ್ತಿದ್ದರು. ಡಾ। ಡಿ.ಕೆ. ಭಾರದ್ವಾಜರು ಸೆರೆಮನೆಯಲ್ಲಿದ್ದಾಗ ಅವರ ಕುಟುಂದವರೆಲ್ಲ ಮಂಜಯ್ಯನವರ ಮನೆಯಲ್ಲೇ ಇದ್ದರು. ಕಾಂಗ್ರೆಸ್ಸಿನ ವಿವಿಧ ಕೆಲಸಗಳಿಗೆ ತ್ಯಾಗ ಮಾಡಿ ಸುಮಾರು ೨ ಲಕ್ಷ ರೂ ಬೆಲೆಯ ಇವರ ಆಸ್ತಿ ಮುಂದೆ ಸಾಲಿಗರ ಪಾಲಾಯಿತು. ೧೯೩೦ರಲ್ಲಿ ಅಂಕೋಲಾ ಸತ್ಯಾಗ್ರಹದಲ್ಲಿ ಬಂಧಿತರಾಗಿ ವಿಜಾಪುರ ಹಿಂಡಲಗಾ ಜೈಲುಗಳಲ್ಲಿ ಕಠಿಣ ಶಿಕ್ಷೆ ಅನುಭವಿಸಿದ್ದರು. ಮುಂದೆ ೧೯೩೨ ,೩೩ರಲ್ಲಿ ಒಂದು ವರ್ಷ ಕಾರವಾರ ಜೈಲಿನಲ್ಲಿದ್ದರು. ಸೆರೆಮನೆಯಲ್ಲಿದ್ದಾಗ ಅನಾರೋಗ್ಯಕ್ಕೆ ಒಳಪಟ್ಟು ಗುಣಮುಖರಾಗದೆ ೧೯೩೫ರಲ್ಲಿ ಸ್ವರ್ಗಸ್ಥರಾದರು.

ಅಂಡೆಕುಳಿ ಮಂಜಯ್ಯನವರ ಚಟುವಟಿಕೆಗಳು ಅನೇಕರ ಮೇಲೆ ಪ್ರಭಾವ ಬೀರುತ್ತವೆ. ಅವರಿಂದ ಸ್ಫೂರ್ತಿ ಪಡೆದದವರಲ್ಲಿ ಬಸವಾನಿ ರಾಮಶರ್ಮರ ಕುಟುಂವೂ ಒಂದು. ರಾಮಶರ್ಮರು ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳೆರಡರಲ್ಲೂ ಕಾಂಗ್ರೆಸ್ ಕೆಲಸ ಮಾಡುತ್ತಾರೆ. ಅವರ ಪತ್ನಿ ಸಾವಿತ್ರಮ್ಮ ಕೂಡ ತೀರ್ಥಹಳ್ಳಿ ತಾ॥ ಕಚೇರಿಯಲ್ಲಿ ಪಿಕೆಟಿಂಗ್ ನಾಯಕತ್ವ ವಹಿಸಿ ಜೈಲು ಸೇರುತ್ತಾರೆ. ರಾಮಶರ್ಮರು ಚಳುವಳಿಯಲ್ಲಿ ಭಾಗವಹಿಸಿ ೧೯೪೭ ರಲ್ಲಿ ಜೈಲು ಸೇರಿ ಹೊರಬರುವಾಗ ಅಡಿಕೆ ಧಾರಣೆ ಇಳಿದು ೬೦–೭೦ ಸಾವಿರ ನಷ್ಟ ಅನುಭವಿಸುತ್ತಾರೆ ಆದರೂ ಎದೆಗುಂದದೆ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾರೆ.

❑

ಅಧ್ಯಾಯ ೪

## ೧೯೪೨ ರ ಕ್ವಿಟ್ ಇಂಡಿಯಾ ಚಳುವಳಿ

೧೯೪೨ ಆಗಸ್ಟ್ ಒಂಬತ್ತನೇ ತಾರೀಕು ಮುಂಬೈಯಲ್ಲಿ ಮಹಾತ್ಮಗಾಂಧೀಜಿ, ಆಜಾದರು, ಪಂಡಿತ ಜವಾಹರಲಾಲ್ ನೆಹರೂರವರು ಮತ್ತು ಇತರ ಮುಖಂಡರು ದಸ್ತಗಿರಿಯಾದ ನಂತರ ಮೈಸೂರು ಸಂಸ್ಥಾನದ ಅನೇಕ ಕಾಂಗ್ರೆಸ್ ಮುಖಂಡರ ಬಂಧನವು ಪ್ರಾರಂಭವಾಯಿತು. ಈ ಸುದ್ದಿ ದೇಶದ ಮೂಲೆಮೂಲೆಗೂ ಹರಡಿದ ಪರಿಣಾಮವಾಗಿ ಶಿವಮೊಗ್ಗ ಜಿಲ್ಲೆಯ ವಿದ್ಯಾರ್ಥಿಗಳು, ಕೂಲಿಕಾರರು, ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು ಅನೇಕ ಬಹಿರಂಗ ಸಭೆಗಳು, ಹರತಾಳ, ಮುಷ್ಕರ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು. ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿಯೂ ಅಹಿಂಸಾತ್ಮಕ ತತ್ವದ ಮೇಲೆ ಸರ್ಕಾರವನ್ನು ಪ್ರತಿಭಟಿಸಲಾಯಿತು. ನಾನು ಕಾಂಗ್ರೆಸ್ಸಿಗನೂ ನಾನು ಅಲ್ಲವೆಂಬ ಯಾವುದೇ ಭೇದಭಾವವಿಲ್ಲದೆ ಸರ್ಕಾರದ ದಬ್ಬಾಳಿಕೆಯನ್ನು ಪ್ರತಿಭಟಿಸಿದರು.

ಈ ಸಂಸ್ಥಾನದ ಇತರ ಕಡೆಗಳಲ್ಲಿ ನಡೆಸದಂತೆ ಜಿಲ್ಲೆಯ ವಿದ್ಯಾರ್ಥಿಗಳು ಧೈರ್ಯದಿಂದ ಮುಂದೆ ಬಂದು ಕಾಂಗ್ರೆಸ್ ಸಂಸ್ಥೆ ಜತೆ ಸಹಕರಿಸಿ ಅಹಿಂಸಾತತ್ವದಲ್ಲಿಯೇ ಸರ್ಕಾರದ ದಬ್ಬಾಳಿಕೆಯನ್ನು ಎದುರಿಸಿದರು. ವಿದ್ಯಾರ್ಥಿಗಳು ಶಾಲೆಗಳನ್ನು ಬಹಿಷ್ಕರಿಸಿ ಚಳುವಳಿಗೆ ಸೇರಿದರು. ವಿದ್ಯಾರ್ಥಿಗಳ ಸೈನ್ಯವನ್ನು ದಸ್ತಗಿರಿ ಮಾಡಲು ಹೆದರಿದ ಪೋಲಿಸರು ವಿದ್ಯಾರ್ಥಿಗಳು ಏನು ಮಾಡಿದರೂ ಸುಮ್ಮನಿದ್ದರು. ಪ್ರಭಾತಫೇರಿಗಳೂ, ಬಹಿರಂಗ ಸಭೆಗಳು, ಖಂಡನಾ ಸಭೆಗಳು ನಿಧಿ ಸಂಗ್ರಹ ಕಾರ್ಯ ಮೊದಲಾದ ಕೆಲಸಗಳನ್ನು ವಿದ್ಯಾರ್ಥಿಗಳು ಮುಂದುವರಿಸಿ ಕಾಂಗ್ರೆಸ್ಸನ್ನು ಬಲಪಡಿಸಿದರು. ಶಿವಮೊಗ್ಗ, ತೀರ್ಥಹಳ್ಳಿ, ಸಾಗರ, ನ್ಯಾಮತಿ ಈ ಸ್ಥಳದಲ್ಲಿ ಮುಖ್ಯಪಾತ್ರವನ್ನು ವಿದ್ಯಾರ್ಥಿಗಳ ವಹಿಸಿದರು. ತಂದೆತಾಯಿಗಳ ವಿರುದ್ಧವೂ ನಡೆದು ಈ ಚಳುವಳಿಯಲ್ಲಿ ದುಡಿದರು. ವಿದ್ಯಾರ್ಥಿಗಳ ಕಾರ್ಯ ನಿಲ್ಲದೇ ಇದ್ದಾಗ ಪೋಲಿಸರು ಇವರನ್ನು ದಸ್ತಗಿರಿ ಮಾಡಲು ಶುರು ಮಾಡಿದರು. ಅಂದು ವಿದ್ಯಾರ್ಥಿಗಳು ಕಾಂಗ್ರೆಸ್ ಧ್ವಜ ಪತಾಕೆಯನ್ನು ಎತ್ತಿ ಹಿಡಿದು ಸಂಸ್ಥೆಯ ಗೌರವವನ್ನು ಕಾಪಾಡಿದರು.

ಈ ಚಳುವಳಿಯಲ್ಲಿ ಕೂಲಿಕಾರರ ಪಾತ್ರ ಮಹತ್ವದ್ದು. ಭದ್ರಾವತಿ ಕೈಗಾರಿಕಾ ಸ್ಥಳದಲ್ಲಿ ಕೂಲಿಕಾರರು ಆತ್ಮ ಪ್ರೇರಣೆಯಿಂದ ಮುಷ್ಕರವನ್ನು ಹೂಡಿದರು. ಈ ಮುಷ್ಕರ ಪ್ರಾರಂಭವಾದೊಡನೆ ಸರ್ಕಾರದವರು ತಾವಾಗಿಯೇ ಕಾರ್ಖಾನೆಗಳನ್ನು ಮುಚ್ಚಿದರು. ಕೂಲಿಕಾರರ ಸಂಸ್ಥೆಯನ್ನು ನ್ಯಾಯಬಾಹಿರ ಸಂಸ್ಥೆ ಎಂದು ಸಾರಿದರು. ಕೂಲಿಕಾರರನ್ನು ಸಮಾಧಾನಗೊಳಿಸಿ ಅವರೊಡನೆ ಒಪ್ಪಂದಕ್ಕೆ ಬಾರದೆ ಸುಮ್ಮನೆ ಕೆಣಕಿದರು. ಕೂಲಿಕಾರರ ಕಾರ್ಯಕಾರಿ ಸಮಿತಿಯವರು ಕೆಲಸಕ್ಕೆ ಹೋಗಬೇಕೆಂದು ತೀರ್ಮಾನಿಸಿ ಬಹಿರಂಗ ಸಭೆಯನ್ನು ಮುಂದೂಡಿ, ಬಹಿರಂಗ ಸಭೆಯು ಸರ್ಕಾರದ ವರ್ತನೆಯನ್ನು ಖಂಡಿಸಿ ಕೂಲಿಕಾರರೊಡನೆ ಒಪ್ಪಂದ ಮಾಡಿಕೊಳ್ಳಬೇಕು. ಅವರ ಬೇಡಿಕೆಗಳನ್ನು ಒಪ್ಪುವುದಾದರೆ ಕೆಲಸಕ್ಕೆ ಹೋಗಬೇಕೆಂದು, ಮುಷ್ಕರವನ್ನು ಮುಂದುವರಿಸಬೇಕೆಂದು ಕಾರ್ಯಕಾರಿ ಸದಸ್ಯರು ನಿರ್ಧರಿಸಿದರು ಒಂದೆರಡು ದಿನಗಳಲ್ಲಿ ಮುಷ್ಕರವನ್ನು ನಿಲ್ಲಿಸುವ ಯೋಚನೆ ಮಾಡಿದ್ದರು. ಕಾರಣವಿಲ್ಲದೆ ಕೂಲಿಕಾರರನ್ನು ದಸ್ತಗಿರಿ ಮಾಡಲು ಶುರುಮಾಡಿದರು. ಶಾಂತಿಯುತವಾಗಿ ನಡೆಯುತ್ತಿದ್ದ ಪ್ರತಿಭಟನೆಯನ್ನು ಸರ್ಕಾರಿ ಅಧಿಕಾರಿಗಳೇ ದೌರ್ಜನ್ಯ ಕೃತ್ಯಗಳು ಮೂಲಕ ಹಿಂಸಾತ್ಮಕವಾಗಿ ಮಾಡಿದರು ಮನೆಯವರಿಗೆ ತಿಳಿಸುವಂತೆ ಕೆಲಸಗಾರರನ್ನು ಗಡಿಪಾರು ಮಾಡಿದರು. ಹೆಂಗಸರು ಮಕ್ಕಳನ್ನು ಕಂಪನಿ ಮನೆಗಳಿಂದ ಹೊರಗೆ ಕಳುಹಿಸಿದರು. ಕಾರಣಗಳನ್ನು ಹೇಳದೆ ಹೊರಗೆ ಹೋಗಲು ಅವಕಾಶಗಳನ್ನು ಕೊಡದೆ ಕಿರುಕುಳವನ್ನು ಕೊಟ್ಟರು. ಈ ಕಾರಣಗಳಿಂದಾಗಿ ಕೆಲವೇ ದಿನಗಳಲ್ಲಿ ನಿಲ್ಲಬೇಕಿದ್ದ ಮುಷ್ಕರ ಸುಮಾರು ೨೩ ತಿಂಗಳು ನಡೆಯಿತು. ಸುಮಾರು ೯೬ ಜನರನ್ನು ಕೆಲಸದಿಂದ ತೆಗೆದುಹಾಕಿದರು,

೩೪ ಜನರನ್ನು ದಸ್ತಗಿರಿ ಮಾಡಿದರು, ೬ ಜನರನ್ನು ಗಡಿಪಾರು ಮಾಡಿದರು. ಕೂಲಿಕಾರರ ಅಲ್ಲದ ಇತರೆ ಕಾಂಗ್ರೆಸ್ ಮುಖಂಡರನ್ನು ದಸ್ತಗಿರಿ ಮಾಡಿದರು. ಸರ್ಕಾರದ ಈ ಕಾರ್ಯವನ್ನು ನಿಲ್ಲಿಸಲು ನೂರಾರು ಜನ ಮಿಲಿಟರಿಯವರವನ್ನು ತಂದು ಕುದುರೆಗಳ ಮೇಲೆ ಭರ್ಚಿ, ಬಂದೂಕು, ವಗೈರೆ ಆಯುಧಗಳನ್ನು ತೋರಿಸುತ್ತಾ ಮನೆಮನೆಗೆ ಹೋಗಿ ಕೂಲಿ ಕಾರ್ಮಿಕರನ್ನು ಹೆದರಿಸಿ ಕೆಲಸಕ್ಕೆ ಕರೆದು ನೂರಾರು ಜನ ಗುಪ್ತಚಾರರನ್ನು ಇಟ್ಟು, ಪಂಗಡಗಳನ್ನು ಮಾಡಿ, ನಿರ್ಬಂಧಕಾಜ್ಞೆಗಳನ್ನು ಹಾಕಿ ಜನರು ಚಳುವಳಿ ವಿಚಾರವನ್ನೇ ಮಾತನಾಡದೆ ಇರುವಂತೆ ಮಾಡಿದರು.

ಸರ್ಕಾರವು ಜಿಲ್ಲೆಯಲ್ಲಿ ಯಾವ ನಿಷೇಧಾಜ್ಞೆ ಜಾರಿ ಮಾಡಲಿಲ್ಲ. ಮುಖಂಡರ, ದಸ್ತಗಿರಿ ದಿನಾಚರಣೆ ಹರತಾಳಗಳು, ಖಂಡನಾ ಸಭೆಗಳು, ಅಹಿಂಸಾತ್ಮಕ ಚಳವಳಿಯನ್ನು ಹೂಡಲು ಬಹಿರಂಗ ಭಾಷಣಗಳು ಹಳ್ಳಿಗಳ ಪ್ರಚಾರ ಎಲ್ಲವೂ ಇಲ್ಲಿ ಬಿರುಸಾಗಿ ನಡೆಯುತ್ತಿತ್ತು. ಹೆಂಡದ ಅಂಗಡಿ ಪಿಕೆಟಿಂಗ್ ಶಾಲೆಗಳ ಬಹಿಷ್ಕಾರವು ತಿಂಗಳುಗಟ್ಟಲೆ ನಡೆಯಿತು. ಜಿಲ್ಲೆಯಲ್ಲಿ ಯಾರನ್ನು ದಸ್ತಗಿರಿ ಮಾಡಲು ಹೋದರೂ ಕೆಚ್ಚೆದೆಯಿಂದ ಅಧಿಕಾರಿಗಳ ವಶ ಆಗುತ್ತಿದ್ದರು. ಜೈಲುಗಳು ಭರ್ತಿಯಾದವು ಸ್ಥಳವು ಇಲ್ಲದಾಗಿ ಸಂಸ್ಥಾನದ ಯಾವ ಜೈಲು ನೋಡಿದರು ಶಿವಮೊಗ್ಗ ಜಿಲ್ಲೆಯ ಕಾಂಗ್ರೆಸ್ ಹಿತೈಷಿಗಳು ವಿದ್ಯಾರ್ಥಿಗಳು ಕೂಲಿಕಾರರೇ ಇದ್ದರು. ಜಿಲ್ಲೆಯ ಜನರು ಜೈಲನ್ನು ಸೇರಲು ಹೆದರದೆ ಇರುವುದನ್ನು ಕಂಡು ದಸ್ತಗಿರಿಗಳು ನಿಂತವು. ೧೯೪೨ರ ಅಕ್ಟೋಬರ್ ಗಾಂಧಿಜಯಂತಿ ಸಾರ್ವಜನಿಕರನ್ನು ಆಕರ್ಷಿಸಿತು. ಕಾಂಗ್ರೆಸ್ ಹಾಗೂ ಗಾಂಧೀಜಿಯವರ ಮೇಲಿದ್ದ ಪ್ರೀತಿ ವಿಶ್ವಾಸಗಳುನ್ನು ವ್ಯಕ್ತಪಡಿಸಿ ಜನರು ಬೆಂಬಲವಿತ್ತರು. ಕಾಂಗ್ರೆಸ್ ಹಿತೈಷಿಗಳು ಧನಸಹಾಯ ಮಾಡಿದರು. ಸೊರಬ ತಾಲ್ಲೂಕಿನಲ್ಲಿ ಪಟೇಲರ ರಾಜೀನಾಮೆಯು ಭರದಿಂದ ಸಾಗುತ್ತಿತ್ತು. ಸರ್ಕಾರದವರು ನಡೆಸಿದ ಈಸೂರು ಗೋಲಿಬಾರ್ ಆದ ನಂತರ ಇದರಿಂದ ಮನನೊಂದ ೧೫ ಗ್ರಾಮಗಳ ಪಟೇಲರು ತಮ್ಮ ಹುದ್ದೆಗೆ ರಾಜಿನಾಮೆ ಕೊಟ್ಟಿದ್ದರಿಂದ ಅವರುಗಳ ದಸ್ತಗಿರಿಯಾಯಿತು. ಅನೇಕ ಮುಖಂಡರ ದಸ್ತಗಿರಿಯಾಯಿತು. ಕೆಲಸಗಾರರು ಕಾಂಗ್ರೆಸ್ ಭಕ್ತರು ಜೈಲು ಸೇರಿದರು ಮಳಲಗದ್ದೆ ಪುಟ್ಟಪ್ಪಗೌಡ ಜಿಲ್ಲೆಯಿಂದ ಗಡಿಪಾರು ಮಾಡಿದ್ದರು.



ತೆಲಗುಂದ ಮಲ್ಲನಗೌಡರಿಗೆ ಕಂಡಲ್ಲಿ ಗುಂಡು ಹಾಕಲು ಆಜ್ಞೆಯಾಗಿತ್ತು. ಆದರೆ ಅವರು ಪೊಲೀಸರಿಗೆ ಸಿಗಲಿಲ್ಲ. ಸಾಗರ ತಾಲ್ಲೂಕಿನಲ್ಲಿ ಮಿಲಿಟರಿಯವರ ಓಡಾಟ ಹೆಚ್ಚಾಗಿತ್ತು ಕಾರಣ ಸಿದ್ಧಾಪುರ ತಾಲ್ಲೂಕು ಸಂಪರ್ಕವನ್ನು ಕಡಿಮೆ ಮಾಡುವುದಕ್ಕೂ ಮತ್ತು ಮೈಸೂರಿಗೆ ಸಹಾಯ ಬರದಂತೆ ನೋಡಿಕೊಳ್ಳುವುದು ಹಾಗೂ ಮಲೆನಾಡಿನಲ್ಲಿ ಒಂದೊಂದೇ ಮನೆಗಳಿದ್ದು ಅವರನ್ನು ಎದುರಿಸುವುದಕ್ಕೂ ಪೋಲೀಸ್ ವ್ಯಾನುಗಳು ತಿರುಗಾಡುತ್ತಿದ್ದವು. ಆದರೆ ಜನ ಧೈರ್ಯದಿಂದಿದ್ದರು ನಗರ ತಾಲ್ಲೂಕು ಮಲೆನಾಡು ಪ್ರಾಂತ್ಯ ಆದ್ದರಿಂದ ಹೆಚ್ಚು ಕಾರ್ಯಕ್ರಮಗಳು ನಡೆಯಲಿಲ್ಲ. ಬಹಿರಂಗ ಸಭೆಗಳು ಪ್ರಭಾತ್ ಫೇರಿ ಕಾರ್ಯಕ್ರಮಗಳು ಹೊಸನಗರ ನಗರದಲ್ಲಿ ನಡೆದು ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಹುಂಚ, ವಗೈರೆ ಸ್ಥಳಗಳಿಲ್ಲಿದ್ದ ಕೆಲಸಗಾರರನ್ನು ಬಂಧಿಸಿದರು. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಬಗನಿಯ ಮರಗಳನ್ನು ಕಡಿಯುವುದು ಹೆಂಡದಂಗಡಿ ಮತ್ತು ಜನಜಾಗೃತಿ ಭಾಷಣಗಳು ನಡೆದವು. ತೀರ್ಥಹಳ್ಳಿಯ ಸರ್ಕಾರಿ ಅಧಿಕಾರಿಗಳಿಗೆ ಅಸಹಕಾರವನ್ನು ಇಡೀ ಊರಿನವರೇ ತೋರಿಸಿದರು. ಅಧಿಕಾರಿಗಳು ಹೆದರಿದರು ಶಾಲೆಗಳು ಮುಚ್ಚಿದ್ದವು ವಿದ್ಯಾರ್ಥಿಗಳು ಸತತವಾಗಿ ಕಾರ್ಯಕ್ರಮಗಳನ್ನು ಕೈಗೊಂಡು ಮುಂದೆ ನುಗ್ಗಿ ದಸ್ತಗಿರಿ ಆದರು. ತೀರ್ಥಹಳ್ಳಿ ಹರತಾಳ ಜಿಲ್ಲೆಗೆ ಪ್ರಸಿದ್ಧಿಯನ್ನು ಪಡೆಯಿತು. ಒಂದು ನಯಾಪೈಸೆ ವ್ಯಾಪಾರವಿರಲಿಲ್ಲ. ಬಹಿರಂಗ ಸಭೆಯೆಂದರೆ ಹೆಂಗಸರು ಮಕ್ಕಳು ಮುದುಕರು ಹೀಗೆ ಎಲ್ಲ ವಯಸ್ಸಿನವರೂ ಬರುತ್ತಿದ್ದರು. ಜಿಲ್ಲಾಧಿಕಾರಿಗಳು ರಸ್ತೆಯಲ್ಲಿ ತಿರುಗಾಡಬೇಕಾದರೆ ಹೆದರಿ ೫೦ ಜನ ಪೋಲಿಸರೊಡನೆ ಹೋಗುತ್ತಿದ್ದರು. ಒಬ್ಬರನ್ನು ದಸ್ತಗಿರಿ ಮಾಡುವುದಕ್ಕೂ ಹೆದರುತ್ತಿದ್ದರು. ಅನೇಕ ಬಾರಿ ಮೋಸದಿಂದ ದಸ್ತಗಿರಿ ನಡೆಸುತ್ತಿದ್ದರು. ಜಿಲ್ಲೆಗೆ ತೀರ್ಥಹಳ್ಳಿಯು ಅಹಿಂಸಾ ಪಥದಲ್ಲಿ ಸಾಗಿ ಜನಜಾಗೃತಿಯನ್ನು ಹೆಚ್ಚಿಸಿತು. ಯಾವ ಅಧಿಕಾರಿ ಬಂದರು ಇಲ್ಲಿ ಅವರ ಆಟ ಏನೂ ನಡೆಯದೆ ಬಾಲ ಮುದುರಿಕೊಂಡು ಇರುತ್ತಿದ್ದರು.

❑

ಅಧ್ಯಾಯ ೫

## ಅರಣ್ಯ ಸತ್ಯಾಗ್ರಹ

ಸೆಪ್ಟಂಬರ್ ೧೯೩೯ ಸಾಗರದ ಬಳಿ ಸಣ್ಣಮನೆಹಳ್ಳದ ಪಕ್ಕದಲ್ಲಿ ಕೆ.ಜಿ.ಒಡೆಯರ್ ರ ನೇತೃತ್ವದಲ್ಲಿ ಕಾಂಗ್ರೆಸ್ ಕ್ಯಾಂಪ್ ನಡೆಯುತ್ತಿರುತ್ತದೆ. ಬಿ.ಕೆ. ಶಿವಪ್ಪಗೌಡ ಶಿಬಿರದ ವ್ಯವಸ್ಥಾಪಕರಾಗಿ, ಬಿ.ವೆಂಕಟರಾವ್ ಟಪ್ಪಾಲು ವ್ಯವಸ್ಥೆ ನೋಡುವ ಕೆಲಸವನ್ನು ವಹಿಸಿಕೊಂಡಿರುತ್ತಾರೆ. ಪ್ರತಿನಿತ್ಯ ಪ್ರಭಾತಪೇರಿ, ಹರಿಜನ ಕೇರಿಗೆ ಭೇಟಿ, ಹೆಂಡದಂಗಡಿ ಪಿಕೆಟಿಂಗ್ ಹಾಗೂ ಸುತ್ತಲ ಹಳ್ಳಿಗಳಿಂದ ಹಣಕಾಸು ಸಂಗ್ರಹ ಕಾರ್ಯಕ್ರಮ ನಡೆಯುತ್ತಿರುತ್ತದೆ. ಸರ್ಕಾರಿ ಕಚೇರಿಗಳ ಮೇಲೆ ಧ್ವಜಾರೋಹಣವನ್ನೂ ಮಾಡುತ್ತಿರುತ್ತಾರೆ. ಅನೇಕ ದಿನ ಈ ಚಟುವಟಿಕೆ ಆದರೂ ಯಾರದು ಬಂಧನ ಆಗಲಿಲ್ಲ. ಕಡೆಗೆ ಬಲವಾದ ಹೋರಾಟ ಮಾಡಬೇಕೆಂದು ನಿರ್ಧರಿಸಿ. ಯೋಜನೆ ರೂಪಿಸುತ್ತಾರೆ. ೧೦.೧೦ ೧೯೩೯ ರಂದು ಕೆ.ಜಿ.ಒಡೆಯರ್ ನೇತೃತ್ವದಲ್ಲಿ ಕಲಕೊಪ್ಪ ಮನ್ನಾ ಜಂಗಲಿನಲ್ಲಿ ಮರ ಕಡಿದು ಸತ್ಯಾಗ್ರಹ ಮಾಡುತ್ತಾರೆ. ವಿಷಯ ತಿಳಿದ ಕೂಡಲೇ ಸ್ಥಳಕ್ಕಾಗಮಿಸಿದ ಪೋಲೀಸರು ಸತ್ಯಾಗ್ರಹಿಗಳನ್ನು ಬಂಧಿಸುತ್ತಾರೆ. ಮತ್ತೊಂದು ೧೬ ಜನರ ತಂಡ ೧೨-೧೦-೧೯೩೯ ರಂದು ಕೊಪ್ಪ ಮನ್ನಾ ಜಂಗಲಿಗೆ ರಾಷ್ಟ್ರಗೀತೆಗಳೊಡನೆ ಕೊಡಲಿ, ಕಂದರ ಸಹಿತ ಹೋಗಿ ಬಗನೆ ಮರ, ಭರಣಿಗೆ ಮರಗಳನ್ನು ಕಡಿದು ಬಂಧಿತರಾಗುತ್ತಾರೆ.

ಸಾಗರ ಲಾಕಪ್ ನಲ್ಲಿ ಇವರಿಗೆ ಎರಡು ಮೂರು ದಿನ ಅನ್ನ ನೀರು ಕೊಡದೆ ಬಹಳ ಹಿಂಸೆ ಕೊಟ್ಟು ಅಪಾಲಜಿ ಕೇಳಲು ಒತ್ತಾಯಿಸುತ್ತಾರೆ. ತಂಡದ ಹತ್ತು ಜನರನ್ನು ಹೊರಗೆ ಒಯ್ದು ಹೊಡೆದು ಬಡಿದು ಹಿಂಸೆ



ಕೊಟ್ಟು ಅಪಾಲಜಿ ಕೇಳುವಂತೆ ಮಾಡುತ್ತಾರೆ. ಉಳಿದ ಆರು ಜನರಿಗೆ ೧೬-೧೦-೧೯೩೯ ರಲ್ಲಿ ಶಿಕ್ಷೆ ಆಗುತ್ತದೆ. ಬಿ.ಕೆ. ಶಿವಪ್ಪಗೌಡ, ಬೈರನಾಯ್ಕ, ಶ್ಯಾಮರಾವ್, ಕನ್ನಪ್ಪ, ಮಾಸ್ತಿ ಇವರಿಗೆ ೮ ತಿಂಗಳ ಶಿಕ್ಷೆ, ೧೦೦ ರೂ ದಂಡ ಹಾಗೂ ದಂಡದ ಬದಲಿಗೆ ಮತ್ತೆ ಒಂದೂವರೆ ತಿಂಗಳು ಶಿಕ್ಷೆ ವಿಧಿಸುತ್ತಾರೆ. ಅಕ್ಟೋಬರ್ ೨೪ ರಂದು ಶಿವಮೊಗ್ಗ ಜೈಲಿಗೆ ರವಾನಿಸುತ್ತಾರೆ. ಜೈಲಿನಲ್ಲಿ ಇವರಿಗೆ ಯಾವುದೇ ಸೌಕರ್ಯವಿರುವುದಿಲ್ಲ. ಹುಳುಕು ಅಕ್ಕಿ, ಮುಗ್ಗಲು ಕಾರದ ಪುಡಿ ಮುಂತಾದ ಅಸಹ್ಯಕರವಾದ ರೇಷನ್ ನಿಂದ ಎಲ್ಲರಿಗೂ ಆರೋಗ್ಯ ಸಮಸ್ಯೆ ಉಂಟಾಗುತ್ತದೆ. ಜೈಲಿನ ಕೋಣೆ ಗಲೀಜಿನಿಂದ ಕೂಡಿರುತ್ತವೆ. ಚಳಿಗಾಲದಲ್ಲಿ ಒಂದು ಗೋಣಿತಟ್ಟು, ಒಂದು ಜಿಡ್ಡು ಕಂಬಳಿ ಮಾತ್ರ ಇದ್ದು , ಚಳಿ ತಡೆದುಕೊಳ್ಳಲಾಗದೆ ಇವರೆಲ್ಲ ಪ್ರತಿಭಟಿಸುತ್ತಾರೆ ಆಗ ಒಂದು ಉಣ್ಣೆ ಅಂಗಿ ಒಂದು ಬ್ಲಾಂಕೆಟ್ ಕೊಡುತ್ತಾರೆ. ಕಳಪೆ ಊಟಕ್ಕೆ ಇವರಿಗೆ ರಕ್ತ ಭೇದಿಯ ಜೊತೆ ಮೈಕಡಿತವೂ ಉಂಟಾಗಿ ಮೈಗದ್ದಲ ಕಟ್ಟುತ್ತದೆ. ಕಡೆಗೆ ೧೫-೨೦ ದಿನ ಆಸ್ಪತ್ರೆಗೆ ರವಾನಿಸಿದರೂ ಅಲ್ಲಿ ವೈದ್ಯರಿಂದ ಸಮಾಧಾನಕರ ಚಿಕಿತ್ಸೆ ದೊರೆಯುವುದಿಲ್ಲ. ಪಥ್ಯದ ಬ್ರೆಡ್ , ಹಾಲು ಕೇಳಿದರೆ "ನಿಮ್ಮ ಅಪ್ಪನ ಮನೇದಲ್ಲ" ಎಂದು ಉತ್ತರಿಸುತ್ತಾರೆ. ಕೆಲವರು ಕ್ಷಮೆ ಕೇಳಿ ಹೋದರೂ ಶಿವಪ್ಪಗೌಡರು ಮತ್ತು ಅವರ ಬ್ಯಾಚಿನ ನಾಲ್ವರು ಪೂರ್ಣ ಶಿಕ್ಷೆ ಅನುಭವಿಸಿ ೬-೭-೧೯೪೦ ಕ್ಕೆ ಬಿಡುಗಡೆ ಆಗುತ್ತಾರೆ. ಸಾಗರದಲ್ಲಿ ಇವರನ್ನ ವಿಜೃಂಭಣೆಯಿಂದ ಸ್ವಾಗತಿಸಿ ಮೆರವಣಿಗೆ ಮಾಡುತ್ತಾರೆ.

೧೯೩೯ ರ ಅರಣ್ಯ ಸತ್ಯಾಗ್ರಹದಿಂದ ಅನೇಕರು ಜೈಲು ಸೇರುತ್ತಾರೆ ಮತ್ತು ಈ ಸತ್ಯಾಗ್ರಹದ ಮೂಲಕವಾಗಿಯೇ ಅನೇಕರು ಕಾಂಗ್ರೆಸ್ ಚಟುವಟಿಕೆಯಲ್ಲಿ ಜೋಡಿಸಿಕೊಳ್ಳುತ್ತಾರೆ. ಆ ವರ್ಷ ಸೆಪ್ಟಂಬರ್ ನಲ್ಲಿ ಸಾಗರ ಕಾಂಗ್ರೆಸ್ ಆಫೀಸ್ ಮುಚ್ಚಲ್ಪಟ್ಟು ಎಲ್ಲ ನಾಯಕರ ಬಂಧನವಾಯಿತು. ಕಾರ್ಯಕರ್ತರು ಆಗ ಪಡುಗೋಡಿಯಲ್ಲಿ ಮರೂರು ರುದ್ರಪ್ಪಗೌಡರ ಮನೆಯಲ್ಲಿ ಚಟುವಟಿಕೆಗಳು ಶುರು ಆದವು. ಎಲ್ಲ ಯೋಜನೆಗಳು, ತಯಾರಿಗಳು ಅಲ್ಲಿಂದಲೇ ನಡೆಯುತ್ತಿದ್ದವು. ಅವರ ಮನ ಮೇಲೂ ಕಣ್ಣು ಬಿದ್ದು ಗಣ್ಯ ಕಾರ್ಯಕರ್ತರಾಗಿದ್ದ ರುದ್ರಗೌಡರೂ ಅವರ ಸೋದರ ವೀರಭದ್ರಪ್ಪ ಗೌಡರೂ ಬಂಧಿತರಾದರು. ಆಗ ಪ.ರಾ. ನರಸಿಂಹಯ್ಯನವರ ಮನೆಯಿಂದ ಎಲ್ಲಾ ಕೆಲಸ ಕಾರ್ಯ

ನಡೆಸಲು ತೀರ್ಮಾನಿಸಿದರು. ಅರಣ್ಯ ಸತ್ಯಾಗ್ರಹಕ್ಕೆ ಜನರನ್ನು ಹುರಿದುಂಬಿಸುವುದು ಹಾಗೂ ಕರಪತ್ರಗಳನ್ನು ಬರೆದು ಹಳ್ಳಿಹಳ್ಳಿ ಮನೆಮನೆಗೆ ಮುಟ್ಟಿಸುವುದು, ಹಳ್ಳಿಗಳಿಂದ ಸತ್ಯಾಗ್ರಹಿಗಳನ್ನು ಕಳುಹಿಸುವುದು ನಡೆಯುತ್ತಿತ್ತು. ಕಡೆಗೆ ಇವರ ಮನೆಯ ಮೇಲೂ ಪೋಲಿಸರ ಕಣ್ಣು ಬೀಳಲು ಆಫೀಸನ್ನು ಪಡಂವಗೋಡಿ ಹತ್ತಿರದ ಮರೂರು ಪುಟ್ಟಣ್ಣ ಗೌಡರ ಮನೆಗೆ ವರ್ಗಾಯಿಸಿದರು. ದಿನಕ್ಕೊಂದು ಬ್ಯಾಚು ಸತ್ಯಾಗ್ರಹಿಗಳನ್ನು ಕಳುಹಿಸಲೇಬೇಕಾಗಿದ್ದು ಆಗ ಪ್ರಮುಖ ನಾಯಕ ಶಿರವಂತೆ ವೀರಭದ್ರಪ್ಪ ಗೌಡ ಹಾಗೂ ಬಿ.ಗಂಗಾಧರಪ್ಪ ಗೌಡ ಇವರಷ್ಟೇ ಹೊರಗುಳಿದಿದ್ದರು. ಅವರು ಬಂಧಿತರಾಗದಂತೆ ಎಲ್ಲರೂ ನೋಡಿಕೊಳ್ಳಬೇಕಿತ್ತು. ಒಮ್ಮೆ ಸತ್ಯಾಗ್ರಹಿಗಳ ಪಂಗಡಕ್ಕೆ ಲೀಡರ್ ಇಲ್ಲದಂತೆ ಆಗಲು ಆ ಗ್ರಾಮದ ಪಟೇಲರು ಆಗಿದ್ದ ಗುಪ್ತವಾಗಿ ಕೆಲಸ ಮಾಡುತ್ತಿದ್ದ ಪ.ರಾ.ನರಸಿಂಹಯ್ಯನವರು ಸೆಪ್ಟೆಂಬರ್ ೧೫ಕ್ಕೆ ಸತ್ಯಾಗ್ರಹದ ನಾಯಕರಾಗಲು ನಿರ್ಧರಿಸಿದರು.

ಪಡಂವಗೋಡಿಯ ಮೂರನೆಯ ಮೈಲಿನ ಕಾಡಿನಲ್ಲಿ ೧೨ ಜನ ತಂಡ ಮೊದಲೇ ಪೋಲೀಸರಿಗೆ ತಿಳಿಸಿ ಸತ್ಯಾಗ್ರಹ ಮಾಡಲು ನಿರ್ಧರಿಸಿದರು. ಅವರು ಊರಿಂದ ಅರ್ಧ ಮೈಲು ದೂರ ಸಾಗುವಷ್ಟರಲ್ಲಿ ಪೋಲಿಸ್ ವ್ಯಾನ್ ಬಂದು ಅವರನ್ನು ಬಂಧಿಸಿ ಬೇರೆಬೇರೆ ಕಡೆ ಚಿಕ್ಕಪುಟ್ಟ ಪೊಲೀಸ್ ಠಾಣೆಗಳಲ್ಲಿ ಇಕ್ಕಟ್ಟಿನ ಜಾಗಗಳಲ್ಲಿ ಇಟ್ಟು ಹಿಂಸಿಸಿದರು. ಮುಂದೆ ಅವರನ್ನು ಉಳಿದ ಸತ್ಯಾಗ್ರಹಿಗಳಿಂದ ಬೇರ್ಪಡಿಸಿದರು. ಕಡೆಗೆ, ಪ್ರತ್ಯೇಕವಾಗಿ ಬಂಧಿತರಾಗಿ ಬಂದಿದ್ದ ಬಸವರಾಜಪ್ಪಗೌಡ ಮತ್ತು ಚಿಪ್ಪಳ್ಳಿ ನಾರ್ಣಪ್ಪ ಅವರನ್ನು, ನರಸಿಂಹಯ್ಯರವರನ್ನು ೯–೧೧–೧೯೩೯ರಂದು ಸಾಗರದಲ್ಲಿ ವಿಚಾರಣೆಗೆ ಒಳಪಡಿಸಿ, ಬಸವರಾಜಪ್ಪ ಮತ್ತು ನಾರ್ಣಪ್ಪನವರಿಗೆ ೧೧ ತಿಂಗಳು, ನರಸಿಂಹಯ್ಯರಿಗೆ ೧೫ ತಿಂಗಳ ಶಿಕ್ಷೆ, ೨೦೦ ರೂ ದಂಡ ವಿಧಿಸಿದರಲ್ಲದೆ ಪಟೇಲಿಕೆ ಸಸ್ಪೆಂಡ್ ಮಾಡಿದರು. ಎಲ್ಲರನ್ನೂ ಶಿವಮೊಗ್ಗ ಸಬ್ ಜೈಲಿಗೆ ಕಳುಹಿಸಿದರು. ಬೇರೆ ಬೇರೆ ಕಡೆಯಿಂದ ಬಂದ ೩೦– ೪೦ ಬೇರೆ ಸತ್ಯಾಗ್ರಹಿಗಳು ಆ ದಿನ ಇವರ ಜೊತೆ ಸಾಗರದಿಂದ ಶಿವಮೊಗ್ಗ ಜೈಲಿಗೆ ಬಂದರು. ಜೈಲಿನ ಉಟೋಪಚಾರಕ್ಕೆ ನರಸಿಂಹಯ್ಯರಿಗೆ ಡೀಸೆಂಟ್ರಿ ಶುರು ಆಗಿ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿದರು. ಮಹದೇವಭಾಯಿ ದೇಸಾಯಿ ಅವರು ಜೈಲುಗಳ ಪರೀಕ್ಷೆಗೆ ಬಂದವರು ಆಸ್ಪತ್ರೆಗೂ ಬಂದು



ಇವರನ್ನು ವಿಚಾರಿಸಿಕೊಂಡು ಹೋದರು. ಒಂದು ತಿಂಗಳು ಆಸ್ಪತ್ರೆಯಲ್ಲಿ ಔಷಧಿ ಉಪಚಾರ ಆದರೂ ಇವರಿಗೆ ಸೌಖ್ಯ ಆಗದೆ, ಸ್ನೇಹಿತರನ್ನು ಬಿಟ್ಟಿರಲಿಕ್ಕೂ ಆಗದೆ, ಒಂದು ದಿನ ಬದುಕುವ ಆಸೆ ತೊರೆದು ವಾಪಸ್ ಜೈಲಿಗೆ ಹೋಗಲು ಒತ್ತಾಯಿಸಿದರು. ಕಾಯಿಲೆ ಉಲ್ಬಣಿಸಿದ್ದರಿಂದ ಜೀವ ಹೋದರೆ ಜೈಲಿನಲ್ಲೇ ಹೋಗಲಿ ಎಂದುಕೊಂಡು ಪೇದೆಯ ಹೆಗಲು ಹಿಡಿದು, ಆಸ್ಪತ್ರೆ ಅಧಿಕಾರಿಗಳ ಸಮ್ಮತಿಪಡೆದು ವಾಪಸ್ ಜೈಲಿಗೆ ಬರುತ್ತಾರೆ. ಆ ಕಾಲಕ್ಕೆ ಟಿ.ಸುಬ್ರಮಣ್ಯಂ, ಪಾರ್ಥನಾರಾಯಣ ಪಂಡಿತ್ ಮುಂತಾದ ಕೆಲವರನ್ನು ಶಿವಮೊಗ್ಗ ಜೈಲಿಗೆ ವರ್ಗಾಯಿಸದ್ದರು. ಪಾರ್ಥನಾರಾಯಣ ಪಂಡಿತ್ ರವರ ಔಷಧೋಪಚಾರದಿಂದ ನರಸಿಂಹಯ್ಯನವರು ಗುಣಮುಖರಾದರು. ಮೂರು ತಿಂಗಳು ಕಳೆಯುವದರಲ್ಲಿ ಜನರಲ್ ರಿಂದ ಬಿಡುಗಡೆ ಆರ್ಡರ್ ಬಂದು ಎಲ್ಲರ ಬಿಡುಗಡೆಯಾಗುತ್ತದೆ.

೧೯೩೮ ರಲ್ಲಿ ಟಿ.ಸಿದ್ದಲಿಂಗಯ್ಯನವರು ಅಧ್ಯಕ್ಷರಾಗಿ ಮೈಸೂರು ಕಾಂಗ್ರೆಸ್ ಸ್ಥಾಪನೆಗೊಂಡ ನಂತರ ಸೊರಬ ಭಾಗದಲ್ಲೂ ಚಟುವಟಿಕೆಗಳು ಚುರುಕಾಗುತ್ತವೆ. ೧೯೩೯ರ ಅರಣ್ಯ ಸತ್ಯಾಗ್ರಹ ನಡೆದಾಗ ಕೋಡಿಕೊಪ್ಪದ ಕೆ.ಪಿ.ರುದ್ರಪ್ಪಗೌಡರು ಬೆಳಗಾವಿಯಲ್ಲಿ ಲಾ ಓದುತ್ತಿದ್ದವರು ಶಿಕ್ಷಣವನ್ನ ಅರ್ಧಕ್ಕೆ ನಿಲ್ಲಿಸಿ ಊರಿಗೆ ಬರುತ್ತಾರೆ. ಹಿಂದೆ ಅವರು ಹಂಸಭಾವಿಯಲ್ಲಿ ಕೆಲವು ಕಾಲ ಇತಿಹಾಸ ಪ್ರಾಧ್ಯಾಪಕರಾಗಿದ್ದರು. ರುದ್ರಪ್ಪಗೌಡರೂ ಮತ್ತು ಇದೇ ಕಾಲಕ್ಕೆ ತಾಲೂಕಿಗೆ ಬಂದ ಮೈಲಾರ ಮಹಾದೇವಪ್ಪನವರೂ ಸತ್ಯಾಗ್ರಹದ ಯಶಸ್ಸಿಗೆ ಶ್ರಮಿಸುತ್ತಾರೆ. ಬೆಟ್ಟದ ಕೂರ್ಲಿ ಬೂದಿ ಬಸಪ್ಪ ಗೌಡರು ಹಾಗೂ ನೆಲ್ಲಿಕೊಪ್ಪದ ವೀರಪ್ಪಗೌಡರು ಮೈಲಾರರ ಸ್ನೇಹಿತರಾಗಿದ್ದರು. ಬೆಟ್ಟದಕೂರ್ಲಿಯನ್ನು ಕೇಂದ್ರವಾಗಿಟ್ಟುಕೊಂಡು ಚಳುವಳಿ ಸಂಘಟನೆಯ ಯತ್ನ ಆಯಿತು. ಜಡೆ, ಆನವಟ್ಟಿ ಹೋಬಳಿಗಳಲ್ಲಿ ಕೆ.ಪಿ.ರುದ್ರಪ್ಪಗೌಡರು ಜನ ಜಾಗೃತಿಗೆ ಶ್ರಮಿಸಿದರು. ಅಲ್ಲದೆ ಈ ಭಾಗದಲ್ಲಿ ನೇಸ್ವಿ, ಹಳ್ಳಿಕೇರಿ ಗುದ್ಲೆಪ್ಪ ಮತ್ತು ಎಚ್ ಸಿದ್ದಯ್ಯನವರ ಗಮನವೂ ಇತ್ತು. ಮಳಲಗದ್ದೆ ಬಸವಣ್ಣೆಗೌಡರ ಮನೆತನ ೧೯೩೧–೩೨ ರ ಸಿದ್ದಾಪುರ ಚಳುವಳಿಯ ಕಾಲದಿಂದ ಚಳುವಳಿಯಲ್ಲಿ ಇತ್ತು. ಕೋಡಿಕೊಪ್ಪ, ತೆಲುಗುಂದ, ಸಾಲಿಗೆ, ಜಡೆ, ಮೂಡಿ, ನೆಲ್ಲಿಕೊಪ್ಪ, ದಡ್ಡಿಕೊಪ್ಪ, ಎಲಿವಾಳ, ಕಮನವಳ್ಳಿ, ಎಣ್ಣೇಕೊಪ್ಪ, ಬೆಟ್ಟದಕೂರ್ಲಿ, ಹಳೇ ನೆಲ್ಲಿಕೊಪ್ಪ, ಚಿಕ್ಕಡಗೋಡು

ಗ್ರಾಮಗಳಿಂದ ಅರಣ್ಯ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುತ್ತಾರೆ. ಸತ್ಯಾಗ್ರಹಿಗಳ ಮೇಲೆ ಪೋಲಿಸ್ ದಾಳಿಯಾಗುತ್ತದೆ. ಪೋಲೀಸರು ಗಂಡಸರು, ಹೆಂಗಸರು ಎಂದು ನೋಡದೆ ಯದ್ವಾ ತದ್ವಾ ಬಾರಿಸುತ್ತಾರೆ. ಬೂಟಿನ ಏಟು, ಲಾಠೀ ಏಟು, ಹಿಂಸಾಚಾರ ತಾಳಲಾರದೆ ಕೆಲವು ಸತ್ಯಾಗ್ರಹಿಗಳು ಕ್ಷಮೆ ಕೇಳಿ ಮನೆಗೆ ತೆರಳುತ್ತಾರೆ. ಆದರೂ ಅನೇಕರು ಕಡೆ ತನಕ ಧೀರತನದಿಂದ ಎಲ್ಲ ಹಿಂಸೆಯನ್ನು ಸಹಿಸಿಕೊಂಡು ಜೈಲುವಾಸ ಅನುಭವಿಸುತ್ತಾರೆ. ಅವರೆಂದರೆ ಬೂದಿಬಸಪ್ಪಗೌಡ್ರು, ಹಳೇನೆಲ್ಲಿಕೊಪ್ಪದ ವೀರಪ್ಪಗೌಡ್ರು, ಎಲಿವಾಳದ ಕೊಟ್ರಪ್ಪನವರು, ಗೊಗ್ಗನಾಳ ರುದ್ರಪ್ಪನವರು, ಸಾಲಿಗೆಯ ಎಚ್. ಮಲ್ಲಪ್ಪ ಗೌಡರು. ತೆಲಗುಂದದ ಟಿ.ಕೆ. ಮಲ್ಲಪ್ಪ ಗೌಡರು, ದಡ್ಡಿ ಕೊಪ್ಪದ ಬಸವಣ್ಣಪ್ಪ ಸಜ್ಜನಶೆಟ್ಟರು, ನೆಲ್ಲಿಕೊಪ್ಪ ಮರ್ಶಿ ಬಸವಣ್ಣಪ್ಪ, ದಡ್ಡಿಕೊಪ್ಪ ಮಲ್ಲಪ್ಪ ಕೊಸನೂರ, ದಡ್ಡಿಕೊಪ್ಪ ಡಿ.ಕೆ.ಮಲ್ಲಿಕಾರ್ಜುನಪ್ಪ, ತಳವಾರ ಗುಡ್ಡಪ್ಪ, ಚನ್ನಬಸಪ್ಪಗೌಡರು, ಎಡವಟ್ಟ ಮಹಾದೇವಪ್ಪ, ಗುದ್ಲೆಪ್ಪ ಹಿತ್ತಲಮನಿ (ನಾಲ್ವರು ನೆಲ್ಲಿಕೊಪ್ಪದವರು) ಎಂ.ಕೆ. ವೀರಪ್ಪ ಗೌಡ (ಮಳಲಗದ್ದೆ), ಎ. ಚನ್ನಬಸಪ್ಪ (ಅಗಸನ ಹಳ್ಳಿ), ಗುಡ್ಡಪ್ಪ ಮಾಸ್ತರ (ಮೂಡಿ ನೆಲ್ಲಿಕೊಪ್ಪ), ಮಹಾದೇವಪ್ಪ ಬಣಕರ (ನೆಲ್ಲಿಕೊಪ್ಪ), ಕಡ್ಲೆಪ್ಪ (ಮೂಡಿ ನೆಲ್ಲಿಕೊಪ್ಪ), ಚನ್ನಬಸಪ್ಪಗೌಡ್ರು (ಮೂಡಿ ನೆಲ್ಲಿಕೊಪ್ಪ), ಎಲ್.ಎಸ್. ಚಂದ್ರಪ್ಪ(ಜಡೆ), ಬಂಗಾರ್ಯಪ್ಪ ಸಿರಪಟ್ಟೆ (ಜಡೆ), ರಂಗಪ್ಪ ನಾಯ್ಕ(ಭಾರಂಗಿ), ಮಲ್ಲಿಕಾರ್ಜುನಪ್ಪ (ಹುರುಳಿ), ಕುಸುನೂರ ಮಲ್ಲಪ್ಪ (ಮೂಡಿ), ಗಿಂಡಿ ಸೋಮನಗೌಡ, ಸೂರಣಗಿ ಬಂಗಾರ್ಯಪ್ಪ ಗೌಡ, ಎಂ.ವಿ. ರಾಮಚಂದ್ರ ಭಟ್ (ಬನದಕೊಪ್ಪ). ಇವರೆಲ್ಲರೂ ೧೯೩೯ ರ ಜಂಗಲ್ ಸತ್ಯಾಗ್ರಹದ ವಿವಿಧ ಅವಧಿಯ ಶಿಕ್ಷೆ ಅನುಭವಿಸಿದ ಸೊರಬ ತಾಲೂಕಿನವರು.

❑

ಅಧ್ಯಾಯ ೬

# ಕರನಿರಾಕರಣ ಚಳುವಳಿ

೧೯೩೦ರ ಪರದೇಶಿ, ವಸ್ತ್ರದಹನ, ಹೆಂಡದಂಗಡಿಗಳ ಪಿಕೆಟಿಂಗ್, ಅರಣ್ಯ ಸತ್ಯಾಗ್ರಹ, ಕರನಿರಾಕರಣ ಚಳುವಳಿಗಳಲ್ಲಿ ಕರ್ನಾಟಕ ಪ್ರಮುಖ ಪಾತ್ರ ವಹಿಸಿತ್ತು. ಉತ್ತರ ಕನ್ನಡ ಜಿಲ್ಲೆಯ ಶಿರಸಿ–ಸಿದ್ದಾಪುರಗಳಲ್ಲಿ ಚಿರಸ್ಮರಣೀಯವಾದ ರೀತಿಯಲ್ಲಿ ಕರನಿರಾಕರಣ ಚಳುವಳಿ ನಡೆಯಿತು. ಕೆ.ಟಿ. ಭಾಷ್ಯಂ ಮತ್ತು ಟಿ. ಸುಬ್ರಹ್ಮಣ್ಯ ಇವರುಗಳು ಒಂದೊಂದು ಕೇಂದ್ರದಿಂದ ತಮ್ಮ ಕಾರ್ಯಾಚರಣೆ ಆರಂಭಿಸತಕ್ಕದೆಂದೂ ಸರ್ದಾರ್ ಕೆ.ಎ. ವೆಂಕಟರಾಮಯ್ಯನವರು ಈ ಚಳುವಳಿಯ ಸೂತ್ರಧಾರರಾಗಿ ಮೇಲ್ವಿಚಾರಕರಾಗಿ ಇರತಕ್ಕದ್ದು ಎಂದು ಕೆ.ಪಿ.ಸಿ.ಸಿ ತೀರ್ಮಾನಿಸಿತು. ಮೈಸೂರಿನ ಇತರೆ ನಾಯಕರು ಅಖಿಲ ಭಾರತ ಚಳುವಳಿಗೆ ಧುಮುಕಿದರು.

ಅಂಕೋಲಾ – ಸಿದ್ದಾಪುರಗಳಲ್ಲಿನ ಕರನಿರಾಕರಣ ಚಳುವಳಿಯ ಬಿಸಿ ಸಾಗರ ಮತ್ತು ಇತರೆ ಪ್ರದೇಶದ ಜನಗಳಿಗೂ ತಟ್ಟುತ್ತದೆ. ಕಾಂಗ್ರೆಸ್ ಸಂಘಟನೆಗೆ ದುಡಿಯುತ್ತಿದ್ದ ಕೆ.ಎ. ವೆಂಕಟರಾಮಯ್ಯನವರೂ, ದೊಡ್ಮನೆ ನಾಗೇಶ್ ಹೆಗ್ಡೆಯವರೂ ಅದೇ ಜಿಲ್ಲೆಯಲ್ಲೇ ಇದ್ದು ಚಳುವಳಿಯ ಚಟುವಟಿಕೆಗಳನ್ನು ನಡೆಸುತ್ತಿದ್ದರಿಂದ ಎಂ. ಮಹಾಬಲೇಶ್ವರ ಭಟ್ಟರು ಕರನಿರಾಕರಣ ಚಟುವಟಿಕೆಗಳಿಲ್ಲಿ ಸೇರಿ, ಉತ್ತರ ಕನ್ನಡ ಜಿಲ್ಲೆಗೆ ಹೋಗಿ ಕೆಲಸ ಮಾಡಲಾರಂಭಿಸಿದರು. ೧೯೩೨ ರ ಜನವರಿ ಹೊತ್ತಿಗೆ ಬಿರುಸಾಗಿ ಚಳುವಳಿ ಸಾಗಿ ಸಿದ್ದಾಪುರದ ಬೂತಕಟ್ಟೆ ಎಂಬಲ್ಲಿ ಇದ್ದು ಸುತ್ತ ಪ್ರವಾಸ ಮಾಡುತ್ತಿದ್ದರು. ಅಲ್ಲಿಗೆ ಜನ ಬರಲು ಹೆದರುತ್ತಿದ್ದರಿಂದ ಇವರು ಸಾಮಾನುಗಳನ್ನು ಇಡಲು ಅದೇ ಪ್ರಶಸ್ತ ಸ್ಥಳವಾಗಿತ್ತು.

ಕೆಲವು ಸ್ವಯಂಸೇವಕರ ತಂಡ ಕಟ್ಟಿಕೊಂಡ ಮಹಾಬಲೇಶ್ವರರು ಹಳ್ಳಿಗಳಿಗೆ ಹೋಗಿ ಕಂದಾಯ ಕೊಡಬಾರದೆಂದು ಪ್ರಚಾರ ಮಾಡುತ್ತಿದ್ದರು. ಬಿಳಗಿ ಹತ್ತಿರದ ತಾರಖಂಡದ ಸೀತಾರಾಮ ಹೆಗ್ಡೆ ಅವರು ಇವರಿಗೆ ವಿಶೇಷ ಸಹಕಾರ ನೀಡುತ್ತಿದ್ದರು. ಒಮ್ಮೆ ಈ ತಂಡ ಪ್ರಚಾರ ಮಾಡುತ್ತಾ ಹೋದಾಗ ಪೋಲಿಸರ ಕಣ್ಣಿಗೆ ಬಿದ್ದು ಹಿಡಿಯಲು ಬೆನ್ನೇರಿದರು. ಆಗ ಸೀತಾರಾಮರ ಮನೆ ಹೊಕ್ಕು ಅವಿತಿಟ್ಟುಕೊಂಡರು. ಸೀತಾರಾಮರ ಪತ್ನಿ ಬಹಳ ಧೈರ್ಯದಿಂದ ಇವರನ್ನು ಪಾರು ಮಾಡಿದರು. ಶಿರಸಿ ಕಡೆ ಸಿದ್ದಾಪುರದ ಗಡಿಯಲ್ಲಿ ಹೋಬಳಿ ಗಣಪತಿ ಭಟ್ಟರ ಮನೆ ಇನ್ನೊಂದು ಇಂಥದೇ ಕೇಂದ್ರವಾಗಿತ್ತು. ಅಲ್ಲಿಗೆ ಚಳುವಳಿಯ ವರ್ತಮಾನಗಳನ್ನು ಸಂಗ್ರಹಿಸಲು ಮಹಾಬಲೇಶ್ವರರು ಹೋಗಬೇಕಾಗುತ್ತಿತ್ತು.

ಬೆನ್ನೂರು, ಸೊರಬ ಪ್ರದೇಶದಿಂದಲೂ ಅನೇಕರು ಉತ್ತರ ಕನ್ನಡದ ಕರನಿರಾಕರಣೆಯಲ್ಲಿ ಭಾಗವಹಿಸಿದರು.ವಾಗಡಿ ಸಾಗರ ತಾಲ್ಲೂಕಿನ ಗುಪ್ತಕೇಂದ್ರಗಳಲ್ಲಿ ಒಂದು. ಇಲ್ಲಿಂದ ಮರಿಸ್ವಾಮಿ ಹಿರೇಮಠರ ತಾಯಿ, ನೇಸ್ವಿಯವರ ತಾಯಿ ಮತ್ತು ಚನ್ನವೀರಪ್ಪ ಗೌಡರ ತಾಯಿ ಉತ್ತರಕನ್ನಡಕ್ಕೆ ಹೋಗಿ ಚಳುವಳಿಯಲ್ಲಿ ಭಾಗವಗಹಿಸಿ ಆರು ತಿಂಗಳ ಶಿಕ್ಷೆ ಅನುಭವಿಸುತ್ತಾರೆ. ಚನ್ನವೀರಪ್ಪಗೌಡರ ತಂದೆಯವರು, ತಮ್ಮ ಐವತ್ತು ವರ್ಷದ ಪತ್ನಿ ಜೈಲಿಗೆ ಹೋದ ವಿಚಾರ ಕೇಳಿ ಬುದ್ಧಿ ಭ್ರಮಣೆಗೊಂಡು ತೀರಿಕೊಳ್ಳುತ್ತಾರೆ. ಅಲ್ಲದೆ ಮಳಲಗದ್ದೆ ಬಸವಣ್ಣಗೌಡರ ಸಹೋದರ ಚನ್ನಪ್ಪಗೌಡರೂ ಈ ಚಳುವಳಿಯಲ್ಲಿ ಭಾಗವಹಿಸಿ ೬ ತಿಂಗಳು ಜೈಲುವಾಸಿಯಾಗುತ್ತಾರೆ.

❑

ಅಧ್ಯಾಯ ೮

## ಹೋರಾಟ–ಸೊರಬ

೧೯೩೮ ರ ಹರಿಪುರ ಕಾಂಗ್ರೆಸ್ಸಗೆ ಆನವಟ್ಟಿ ಸರ್ಕಾರಿ ಆಸ್ಪತ್ರೆಯ ವೈದ್ಯರಾದ ಡಾ॥ ಶ್ರೀನಿವಾಸ ಅಯ್ಯರರು ಮತ್ತು ಅವರ ಜೊತೆ ಎಣ್ಣೆಕೊಪ್ಪದ ಮಲ್ಲಿಕಾರ್ಜುನಪ್ಪ ಗೌಡರೂ ತೆರಳಿದ್ದರು. ಅದರಿಂದ ಪ್ರಭಾವಿತರಾದ ಮಲ್ಲಿಕಾರ್ಜುನಪ್ಪಗೌಡರು ೧೯೩೯ರ ಜಂಗಲ್ ಸತ್ಯಾಗ್ರಹಕ್ಕೆ ಶ್ರಮಿಸಿದರು. ೧೯೪೨ರ ಚಳುವಳಿಗೆ ಇವರೆ ನಾಯಕರು. ಆಗ ಊರಿಗೆ ಬಂದ ಸಂಗಪ್ಪ ನಾಯ್ಕರು ೧೯೩೯ರ ಸತ್ಯಾಗ್ರಹಿಗಳಾದ ಬೂದಿ ಬಸಪ್ಪಗೌಡರು, ಹಳೇನೆಲ್ಲಿಕೊಪ್ಪದ ವೀರಪ್ಪಗೌಡರನ್ನು ಕಂಡು ಮುಂದಿನ ಚಟುವಟಿಕೆ ಬಗ್ಗೆ ವಿಚಾರವಿನಿಮಯ ಮಾಡಿದರು. ಹಿರೇಚೌಟ ಶಿವಾಜಿಗೌಡರು ಈ ಚಳುವಳಿಯ ಪ್ರಮುಖರು. ಇವರೆಲ್ಲರ ನೆರವಿನಿಂದ ಸಂಗಪ್ಪ ನಾಯ್ಕರು ಬೇರೆ ಬೇರೆ ಕಡೆ ಸಭೆ ನಡೆಸಿ ಚಳುವಳಿಯ ಯೋಜನೆಗಳನ್ನು ರೂಪಿಸತ್ತಾರೆ. ಆನವಟ್ಟಿ ಮಾಧ್ಯಮಿಕ ಶಾಲೆ ಮುಚ್ಚಿಸಲೂ ಪ್ರಯತ್ನ ನಡೆಸಲಾಗುತ್ತದೆ. ಆ ಊರಲ್ಲಿ ಮಲ್ಲಿಕಾರ್ಜುನಪ್ಪ ಗೌಡರ ಅಧ್ಯಕ್ಷತೆಯಲ್ಲಿ  ಸಂತೆ ಮೈದಾನದಲ್ಲಿ ಸಭೆ ಸೇರಿಸಿ ಸಂಗಪ್ಪ ನಾಯ್ಕರು, ಡಿ.ಸಿ ಒಡೆಯರ್ ಭಾಷಣ ಮಾಡುತ್ತಾರೆ. ಸಂಗಪ್ಪರ ಮೊದಲ ಭಾಷಣ ಅದು. ಮುಂದೆ ಕೆಲವೇ ದಿನಗಳಲ್ಲಿ ಹಳೇ ನೆಲ್ಲಿಕೊಪ್ಪದ ವೀರಪ್ಪ ಗೌಡ್ರು, ಎಲಿವಾಳದ ಕೊಟ್ಟಪ್ಪನವರು ಹಾಗೂ ದ್ಯಾವನಹಳ್ಳಿ ವಿರೂಪಾಕ್ಷಗೌಡ ದೇಸಾಯಿ ಅವರನ್ನು ಬಂಧಿಸಲಾಯಿತು.

ನಂತರ ಪಟೇಲರ ರಾಜಿನಾಮೆ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳುತ್ತಾರೆ.

ಅದರ ಫಲವಾಗಿ ತಲೂರಿನ ಟಿ.ವಿ.ಪುಟ್ಟಪ್ಪನವರು ಮೊದಲು ಪಟೇಲಿಕೆಗೆ ರಾಜಿನಾಮೆ ಕೊಟ್ಟು ಚಳುವಳಿಯನ್ನು ಸೇರಿ ಎಲ್ಲ ಕಾರ್ಯಕ್ರಮಗಳಲ್ಲಿ ಹುಮ್ಮಸ್ಸಿನಿಂದ ಭಾಗವಹಿಸುತ್ತಾರೆ. ಅಲ್ಲಿಯ ತನಕ ಸಣ್ಣವನೆಂದು ಕಡೆಗಣಿಸಿದ್ದ ಸಂಗಪ್ಪ ನಾಯ್ಕರ ಮೇಲೆ ಪೋಲಿಸರ ಕಣ್ಣು ಬೀಳುತ್ತದೆ. ಸಂಗಪ್ಪ, ಬೂದಿ ಬಸಪ್ಪಗೌಡರು, ಪುಟ್ಟಪ್ಪನಾಯ್ಕರು ಹಾಗೂ ಹಿರೇಚೌಟಯ ಶಿವಾಜಿಗೌಡರು ಸೇರಿ ಹಿರೇಇಡಗೋಡ ಚನ್ನಬಸಪ್ಪ ಗೌಡರು, ಚಿಕ್ಕಿಡ ಗೋಡಿನ ಚನ್ನವೀರಪ್ಪಗೌಡರು, ಹುನಸವಳ್ಳಿ ವೀರಭದ್ರಪ್ಪ ಗೌಡರು, ಕಾಮನಹಳ್ಳಿ ಬಸಪ್ಪಗೌಡರು ಹಾಗು ಮಾವಲಿ ಅಣ್ಣಾಜಿ ಗೌಡರುಗಳಿಂದ ಪಟೇಲಿಕೆಗೆ ರಾಜೀನಾಮೆ ಕೊಡಿಸುತ್ತಾರೆ. ಕಾಮನಹಳ್ಳಿ ಬಸಪ್ಪಗೌಡರ ವಿನಾ ಇನ್ನೆಲ್ಲರೂ ಬಂಧನಕ್ಕೆ ಒಳಗಾಗುತ್ತಾರೆ. ಇದೇ ಕಾಲದಲ್ಲಿ ಸಂಗಪ್ಪರು ಕ್ರಾಂತಿಕಾರಿ ಎನ್.ಆರ್. ಗಿರಿಮಾಜಿಯವರ ಭೇಟಿ ಆಗಿ ಅವರ ಕ್ರಾಂತಿಕಾರಿ ವಿಚಾರಗಳ ಕಾರ್ಯಾಚರಣೆಗೆ ದುಡಿಯುತ್ತಾರೆ. ಅವರ ಸಲಹೆಯಂತೆ 'ಸ್ವಾತಂತ್ರ್ಯ' ಎಂಬ ಕೈ ಬರಹದ ಬುಲೆಟಿನ್ ಆರಂಭಿಸುತ್ತಾರೆ. ಅದರ ಸಂಪಾದಕರು ಹಿರೇಚೌಟ ಶಿವಾಜಿಗೌಡರು. ಸಂಗಪ್ಪರು ಇದರಲ್ಲಿ ಬರೆಯುತ್ತಿರುತ್ತಾರೆ. ಅದರಲ್ಲಿ ಅವರ ಹೆಸರುಗಳು ಇದ್ದುದರಿಂದ ಪೋಲಿಸ್ ನಿಗಾ ಹೆಚ್ಚುತ್ತದೆ. ಸಂಗಪ್ಪರ ಅಣ್ಣ ಉಪಾಧ್ಯಾಯರಾಗಿದ್ದ ಟಿ.ವಿ. ಬಸಪ್ಪನಾಯ್ಕರಿಗೆ ಶಾಲಾ ಇನ್ಸ್ಪೆಕ್ಟರರು ತಮ್ಮನಿಗೆ ಚಳುವಳಿಯಿಂದ ಹಿಂಜರಿಯುವಂತೆ ಬುದ್ಧಿ ಹೇಳಲು ಪ್ರೇರೇಪಿಸುತ್ತಾರೆ. ಮತ್ತು ಹಾಗೆ ಮಾಡಿದರೆ ಸಂಗಪ್ಪರಿಗೆ ಉಪಾಧ್ಯಾಯ ವೃತ್ತಿ ಕೊಡಿಸುವುದಾಗಿ ಹೇಳುತ್ತಾರೆ. ಅಲ್ಲದೆ ತಮ್ಮ ನೌಕರಿಗೆ ಸಂಗಪ್ಪರ ಚಟುವಟಿಕೆಗಳಿಂದ ತೊಂದರೆ ಆದೀತೆಂದು ಹೆದರಿಸುತ್ತಾರೆ. ಆದರೆ ಸಂಗಪ್ಪರು ಇದ್ಯಾವುದಕ್ಕೂ ಮಣಿಯುವುದಿಲ್ಲ. ಉಳವಿ ಹೋಬಳಿಯಲ್ಲಿ ಮಳಲಗದ್ದೆಯ ಎಂ.ಕೆ.ವೀರಪ್ಪಗೌಡರನ್ನು ಅವರ ಮಾಡುವ ಚಟುವಟಿಕೆಗಳಿಗಾಗಿ ಗಡಿಪಾರು ಮಾಡುತ್ತಾರೆ. ಇದರಿಂದ ಆ ಭಾಗದಲ್ಲಿ ಚಳುವಳಿ ತಣ್ಣಗಾಗುತ್ತದೆ. ಜಡೇ ಭಾಗದಲ್ಲಿ ಸಭೆ, ಮೆರವಣಿಗೆ ನಡೆದರೂ ಚಳುವಳಿ ಬಲವಾಗಲಿಲ್ಲ. ಸಂಗಪ್ಪರು, ಪುಟ್ಟಪ್ಪ ನಾಯ್ಕರು, ಬೂದಿ ಬಸಪ್ಪಗೌಡರು ತಾಲ್ಲೂಕಿನ ಬಹುಭಾಗದಲ್ಲಿ ಸಂಚರಿಸುತ್ತಾರೆ. ಪುಟ್ಟಪ್ಪನಾಯ್ಕರು, ಶಿವಾಜಿಗೌಡರು ಹಾಗೂ ಸಂಗಪ್ಪರನ್ನು ಒಟ್ಟಿಗೆ ಬಂಧಿಸಿದ್ದರಿಂದ ಈ ಭಾಗದಲ್ಲಿ ಚಳುವಳಿ



ಬಹುತೇಕ ಸ್ತಬ್ಧವಾದಂತೆ ಆಯಿತು. ೧೯೪೨ ಚಳುವಳಿಯಲ್ಲಿ ಶಿಕ್ಷೆಗೊಂಡ ಸೊರಬ ತಾಲ್ಲೂಕಿನ ವ್ಯಕ್ತಿಗಳೆಂದರೆ ವೀರಭದ್ರಗೌಡರು (ಹುನಸವಳ್ಳಿ), ಚನ್ನಬಸಪ್ಪಗೌಡರು (ಹಿರೇಯಿಡಗೋಡ), ಅಣ್ಣಾಜಿಗೌಡರು( ಮಾವಲಿ), ಎಚ್.ಶಿವಾಜಿಗೌಡರು (ಹಿರಿಚೌಟ), ಮರ್ಶಿ ಬಸವಣ್ಣಪ್ಪ ( ಮೂಡಿ ನೆಲ್ಲಿಕೊಪ್ಪ), ಮಲ್ಲಿಕಾರ್ಜುನಪ್ಪ ಗೌಡರು (ಎಣ್ಣೆ ಕೊಪ್ಪ), ವೀರಪ್ಪಗೌಡರು ( ಹಳೇನೆಲ್ಲಿಕೊಪ್ಪ), ಬೂದಿ ಬಸಪ್ಪಗೌಡರು (ಬೆಟ್ಟದಕೂರ್ಲಿ), ಕೊಟ್ರಗೌಡ (ಎಲಿವಾಳ), ಎಂ.ಕೆ. ವೀರಪ್ಪಗೌಡ (ಮಳಲಗದ್ದೆ), ಟಿ.ವಿ. ಸಂಗಪ್ಪನಾಯ್ಕ(ಬೆನ್ನೂರು), ವಿರೂಪಾಕ್ಷಪ್ಪಗೌಡ (ದ್ಯಾವನಹಳ್ಳಿ), ಬಸವಣ್ಣಪ್ಪ ಸಜ್ಜನ ಶೆಟ್ಟರು (ದೊಡ್ಡಿ ಕೊಪ್ಪ), ನಾಡಿಗ ಕೃಷ್ಣಮೂರ್ತಿ (ಆನವಟ್ಟಿ), ಸಿದ್ದರಾಮಪ್ಪ (ತುಮ್ಮಿ ಕಟ್ಟೆ ) ಹಾಗೂ ಪರಶುರಾಮಪ್ಪ ಬಿನ್ ವೀರಪ್ಪ (ಆನವಟ್ಟಿ), ಎಸ್.ಬಿ.ನೆಜೂರ (ಜಡೆ), ಲೋಕೇಶಪ್ಪ ಬಿನ್ ಸಂಗಪ್ಪ (ಆನವಟ್ಟಿ).

೧೨-೧೨-೧೯೪೩ ಬಿಡುಗಡೆಯ ನಂತರ ಸಂಗಪ್ಪನವರು ಅಣ್ಣನ ಪ್ರೋತ್ಸಾಹದಿಂದ ಧಾರವಾಡಕ್ಕೆ ಹೋಗುತ್ತಾರೆ ಆದರೆ ಶಾಲೆಗೆ ಸೇರದಂತೆ ಮೂರು ವರ್ಷ ಡಿಬಾರ್ ಮಾಡಿದ್ದು ತಿಳಿಯುತ್ತದೆ. ನಂತರ ಸ್ನೇಹಿತರ ಸಲಹೆಯಂತೆ ಬೆಂಗಳೂರಲ್ಲಿ ಕಾಂಪೌಂಡರ್ ಟ್ರೈನಿಂಗ್ ಮುಗಿಸಿ ತೀರ್ಥಹಳ್ಳಿ ತಾಲೂಕಿನ ಮೇಗರವಳ್ಳಿಯಲ್ಲಿ ಕೆಲಸಕ್ಕೆ ಸೇರುತ್ತಾರೆ. ಆಗಲೂ ಆಗುಂಬೆ ಪೊಲೀಸ್ ಠಾಣೆಯಿಂದ ಸಂಗಪ್ಪರ ಬಗ್ಗೆ ಗುಪ್ತ ವರದಿ ಹೋಗುತ್ತಿದ್ದ ವಿಚಾರ ತಿಳಿಯುತ್ತದೆ. ಕೆಲಸದ ಬಗ್ಗೆ ಜಿಗುಪ್ಸೆ ಹುಟ್ಟುತ್ತದೆ. ಸೀನಿಯರ್ ಸರ್ಜನ್ ಮಾಂಟ್ಗೊ ಮರಿಯವರ ಸಂದರ್ಶನ ಅಲ್ಲಿ ಆದಾಗಿನಿಂದ ಸ್ವಾಭಿಮಾನ ಇನ್ನಷ್ಟು ಕೆರಳಿ ರಾಜೀನಾಮೆ ಬರೆಯುತ್ತಾರೆ. ಐದು ವರ್ಷ ಸರ್ವೀಸಿನಲ್ಲಿ ಇರಬೇಕೆಂದು ಬಾಂಡ್ ಕೊಟ್ಟಿದ್ದರಿಂದ ರಾಜೀನಾಮೆ ಸ್ವೀಕಾರ ಆಗುವುದಿಲ್ಲ. ಒಂದು ವಾರ ರಜಾ ಹಾಕಿ ಊರಿಗೆ ಬರುತ್ತಾರೆ. ಆಗ ಸ್ವಾತಂತ್ರ್ಯ ಬಂದು ಜವಾಬ್ದಾರಿ ಸರಕಾರದ ಚಳುವಳಿ ಆರಂಭವಾಗಿರುತ್ತದೆ. 'ಕೂಡಲೇ ಕೆಲಸಕ್ಕೆ ಬರಬೇಕು, ರಜಾ ಸ್ವೀಕರಿಸಲಾಗದೆಂದು' ಪತ್ರ ಬಂದಾಗ 'ಜವಾಬ್ದಾರಿ ಸರಕಾರದ ಹೋರಾಟ ಮುಗಿಯುವವರೆಗೆ ಕೆಲಸಕ್ಕೆ ರಾಜಿನಾಮೆ' ಎಂದು ಬರೆದಿಟ್ಟು ಚಳುವಳಿಗೆ ಧುಮುಕುತ್ತಾರೆ. ಸೆಪ್ಟೆಂಬರ್ ೧ಕ್ಕೆ ಮಲ್ಲಿಕಾರ್ಜುನಪ್ಪ ಗೌಡರನ್ನು,

ವೀರಪ್ಪಗೌಡರನ್ನೂ ಮುನ್ನೆಚ್ಚರಿಕೆ ಕ್ರಮವಾಗಿ ಬಂಧಿಸುತ್ತಾರೆ. ಆನವಟ್ಟಿ ಶಿಬಿರದ ಮೇಲ್ವಿಚಾರಣೆಯನ್ನು ಎಂ.ಈಶ್ವರಪ್ಪ ಶೆಟ್ಟರು ನೋಡಿಕೊಳ್ಳುತ್ತಿದ್ದರು. ಆಗ ಟಿ.ವಿ. ಪುಟ್ಟಪ್ಪ ನಾಯಕರು ಶಿಬಿರದ ಹೊಣೆಗಾರಿಕೆ ಹೊತ್ತಿದ್ದರು. ಚಳವಳಿ ಸೇರಲು ಹೆಚ್. ಚೆನ್ನಬಸಪ್ಪ ಗೌಡರು ಉಪಾಧ್ಯಾಯ ವೃತ್ತಿ ಗೆ ರಾಜೀನಾಮೆ ಕೊಟ್ಟಿದ್ದರು. ತೊರವಂದ ವೀರಬಸಪ್ಪ ಬಂಗಾರ ಸ್ವಾಮಿ ಕುಬಟೂರ ಪ್ರಮುಖರಾಗಿದ್ದರು ಇವರುಗಳ ಬಂಧನ ಆಗುತ್ತದೆ. ಸಂಗಪ್ಪರು, ಪುಟ್ಟಪ್ಪ ನಾಯ್ಕರು ಹಣ ಸಂಗ್ರಹಿಸಲೂ ಓಡಾಡುತ್ತಿರುತ್ತಾರೆ. ಆನವಟ್ಟಿ ಶಿಬಿರದ ಸತ್ಯಾಗ್ರಹಿಗಳ ಸಂಖ್ಯೆ ಹೆಚ್ಚುತ್ತಿತ್ತು. ಸತ್ಯಾಗ್ರಹ ಮಾಡಿದವರನ್ನು ಹಿಡಿಯುತ್ತಿರಲಿಲ್ಲ . ಹಿಡಿದರೂ ಹೊಡೆದು ಬಿಡುತ್ತಿದ್ದರು. ಪೋಲಿಸರಿಗೆ ಬೇಕಾದವರು ಸಿಗುತ್ತಿರಲಿಲ್ಲ. ಜಡೆ ಆನವಟ್ಟಿ ಭಾಗದಲ್ಲಿ ಪೊಲೀಸರ ದಬ್ಬಾಳಿಕೆ ಹೆಚ್ಚಿತ್ತು. ಕಾತವಳ್ಳಿ ಬೆನ್ನೂರಿನ ಕರಿಯಪ್ಪ ಗೌಡರನ್ನು ಬಂಧಿಸಿ, ಅವರನ್ನು ಬೆತ್ತಲೆಗೊಳಿಸಿ ಹೊಡೆದರಲ್ಲದೆ ಪೊಲೀಸರು ಅವರ ಖಾದಿ ಬಟ್ಟೆಗಳನ್ನು ಸುಟ್ಟರು. ಗಡಿ ಗ್ರಾಮವಾದ ಹುಲಗಡ್ಡಿ, ಕಿರುವಾಡಿ, ತಿಳವಳ್ಳಿಗಳಿಂದ ಸಂಗಪ್ಪ ಕೆಲಸ ಮಾಡುತ್ತಿರುತ್ತಾರೆ.ಹುಲಗಡ್ಡಿಯ ಶಿವಬಸಪ್ಪ ಪಾಟೀಲ್ ಸೋದರರು, ಕಿರುವಾಡಿ ರುದ್ರಗೌಡರು, ತಿಳವಳ್ಳಿಯ ವಿ.ಎಸ್.ಒಡೆಯರ್ ವಿಶೇಷ ಸಹಕಾರ ನೀಡುತ್ತಾರೆ. ನಡುವೆ ಪುಟ್ಟಪ್ಪ ನಾಯ್ಕರ, ಅಕ್ಕಸಾಲಿ ಕಾಳಪ್ಪನವರು ಒಟ್ಟಿಗೆ ಬಂಧಿತರಾಗುತ್ತಾರೆ. ಇವರಿಬ್ಬರಿಗೂ ಅಮಲ್ದಾರರೆದುರೇ ವಿಪರೀತ ಹೊಡೆದು ಚಿತ್ರಹಿಂಸೆ ಕೊಡುತ್ತಾರೆ.

೧೯೪೭ ರಲ್ಲಿ ಮೂರು ತಿಂಗಳ ಶಿಕ್ಷೆಗೆ ಒಳಗಾದವರೆಂದರೆ ಹುರುಳಿಯ ಚನ್ನಬಸಪ್ಪ ಗೌಡ್ರು, ತೋರವಂದ ವೀರಭದ್ರಪ್ಪನವರು, ಕೆ.ಪಿ. ಬಂಗಾರ ಸ್ವಾಮಿ, ಅಗಸನಹಳ್ಳಿ ಶಂಕರಪ್ಪ, ಹುರುಳಿಯವರಾದ ಯಳಗೇರಿ ಬಸವಣ್ಣಪ್ಪ ಹಾಗೂ ರುದ್ರಪ್ಪ, ನಡಹಳ್ಳಿ ಎನ್ ಮಂಜಪ್ಪ, ಸೊರಬದವರಾದ ವಾಸಪ್ಪ ಬಿನ್ ಪುಟ್ಟಪ್ಪ, ರಂಗನಾಥಪ್ಪ ಬಿನ್ ರುದ್ರಪ್ಪ, ಭೋವಿ ಗುತ್ಯಪ್ಪ, ಎಂ.ಮೈಲಾರಪ್ಪ, ಭೂಪಾಲಪ್ಪ ಹಾಗೂ ಶಿವನಂದಪ್ಪ, ಕೊಡಕಣಿ ಯವರಾದ ಗೌಡನ ವೀರಪ್ಪ,ಕೂರಪ್ಪ ಹಾಗೂ ಕರಿಯಪ್ಪ, ನೆಲ್ಲಿಕೊಪ್ಪದ ಚನ್ನಬಸಪ್ಪ, ವೀರಭದ್ರಪ್ಪ ತಮ್ಮನ ಗೌಡ, ಮಲ್ಲಪ್ಪ ಹಾಗೂ ಶಿವಪ್ಪ, ಸಮಾನ ವಳ್ಳಿಯ ಕುರುಗೋಡು ರೇವಣಪ್ಪ, ಕುಬಟೂರ ನರಸಪ್ಪ, ಕಮನವಳ್ಳಿ ಚನ್ನಬಸವಯ್ಯ, ಕಾತವಳ್ಳಿ ಬೆನ್ನೂರ ರಂಗಪ್ಪ, ಕಮನವಳ್ಳಿ ಕೆ.ವೀರಪ್ಪ ಇದಲ್ಲದೆ ಇನ್ನೂ ಅನೇಕರು ಬಂಧನಕ್ಕೆ ಒಳಗಾಗಿದ್ದರು.



ಹೊಸನಗರ ತಾಲೂಕಿನ ಹುಂಚಾ ಹೋಬಳಿಯ ತ್ರಿಣಿವೆ ಗ್ರಾಮದ ಎನ್.ಎಸ್. ವಾಸುದೇವಯ್ಯ ನವರು ಆ ಭಾಗದ ಜನರಿಗೆ ಮಾರ್ಗದರ್ಶಕರು. ಇವರು 'ತ್ರಿಣಿವೆಯ ಬಾಪೂಜಿ' ಎಂದೇ ಪ್ರಸಿದ್ಧರು. ಇವರ ನಾಯಕತ್ವದಲ್ಲಿ ಅನೇಕ ಹೋರಾಟಗಳಲ್ಲಿ ಭಾಗವಹಿಸಿದ ಮಹನೀಯರೆಂದರೆ ರಾಮಯ್ಯ ಬಿನ್ ಸುಬ್ಬಯ್ಯ, ಜಿ.ಗಂಗಾಧರಪ್ಪ ಬಿನ್ ಬಸಪ್ಪ ಗೌಡ, ಹನುಮಂತಪ್ಪ ಬಿನ್ ಬಸಪ್ಪ, ವೈಕುಂಠರಾಮದಾಸ್ ಬಿನ್ ನಾಗಪ್ಪ ದಾಸ್, ದೇವಪ್ಪ ಬಿನ್ ನಾಗಪ್ಪ. ಇವರುಗಳು ಸತ್ಯಾಗ್ರಹದಲ್ಲಿ ಪಾಲ್ಗೊಂಡು ಸಾಗರದ ಸಬ್ ಜೈಲಿನಲ್ಲಿ, ಶಿವಮೊಗ್ಗ ಜೈಲುವಾಸ ಅನುಭವಿಸಿದ್ದಾರೆ.

೫೦ ನೇ ವರ್ಷ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ತ್ರಿಣಿವೆ ಗ್ರಾಮದ ಜನ ರಸ್ತೆಗೆ 'ವಾಸುದೇವ ಬಡಾವಣೆ' ಎಂದು ನಾಮಕರಣ ಮಾಡಿ ಗೌರವ ಸಲ್ಲಿಸುತ್ತಾರೆ.

**ಘಟನೆ ೧:**

೧೯೪೨ ರಲ್ಲಿ ಸಾಗರದಿಂದ ನಾಲ್ಕೇ ಮೈಲು ದೂರದಲ್ಲಿರುವ ಕಾಗೋಡಿನಲ್ಲಿ ಕೆಲಸಗಾರರೆಲ್ಲ ಕೆ.ಜಿ. ಒಡೆಯರ್ ಮನೆಯಲ್ಲಿ ಸೇರುತ್ತಿದ್ದರು. ಅಲ್ಲಿ ನದೀ ದಂಡೆಯಲ್ಲಿ ಒಡೆಯರ್ ಮನೆ ಇದ್ದು ಎಲ್ಲರನ್ನು ನೋಡಿಕೊಳ್ಳುವ ಜವಾಬ್ದಾರಿ ಒಡೆಯರೂ ಮತ್ತು ಅವರ ಶ್ರೀಮತಿ ನಿರ್ವಹಿಸುತ್ತಿದ್ದರು. ಅಲ್ಲಿ ಚಳುವಳಿಯ ರೂಪರೇಷೆ, ಮುಂದಿನ ಯೋಜನೆಗಳ ಬಗ್ಗೆ ಚರ್ಚೆ ಎಲ್ಲವೂ ನಡೆಯುತ್ತಿತ್ತು. ಆ ಊರಿನ ಕೋಟ್ಯಾ ಎಂಬವನೊಬ್ಬ ತಾಳಗೊಪ್ಪ ಪೋಲಿಸರಿಗೆ ದಿನಾಲು ಸುದ್ದಿ ಮುಟ್ಟಿಸುತ್ತಿದ್ದ. ಒಮ್ಮೆ ಪೋಲಿಸರು ಪೂರ್ವ ತಯಾರಿ ನಡೆಸಿ ಶಿಬಿರದ ಮೇಲೆ ದಿಢೀರ್ ದಾಳಿ ಮಾಡಿದರು. ಪೋಲೀಸರ ಆಗಮನ ಗಮನಿಸಿದ ಕೆಲವರು ತಕ್ಷಣ ಸುದ್ದಿ ತಿಳಿಸಿದರು. ಎಲ್ಲರೂ ದಿಕ್ಕಾಪಾಲಗಿ ಓಡಿ ಹೊಳೆಗೆ ಹಾರಿ ಈಜಿ ದಡ ಸೇರಿ ತಪ್ಪಿಸಿಕೊಂಡರು.

## ಘಟನೆ ೨:

ತೀರ್ಥಹಳ್ಳಿಯ ಸಾರಸ್ವತ ಜನಾಂಗದ ಹಿರಿಯರು ಸೇರಿ ರಥಬೀದಿಯ ನಡುವೆ ಒಂದು ರಾಮಮಂದಿರವನ್ನು ನಿರ್ಮಿಸಿಕೊಂಡು, ಪ್ರತಿವರ್ಷವೂ ರಾಮನವಮಿಯಂದು ಮಹೋತ್ಸವವನ್ನು ನಡೆಸಿ ಪಾನಕ, ಪನಿವಾರ ಗಳನ್ನು ವಿತರಣೆ ಮಾಡುತ್ತಿದ್ದರು. ರಾಮಮಂದಿರ ಸಾರಸ್ವತ ಜನಾಂಗದ ಹಿರಿಯರ ಕುಟುಂಬವೊಂದರ ವೈಯಕ್ತಿಕ ಆಸ್ತಿ ಆಗಿದ್ದರೂ, ರಾಷ್ಟ್ರೀಯ ಆಂದೋಲನದಲ್ಲಿ ಸಾರ್ವಜನಿಕರು ಈ ರಾಮಮಂದಿರದ ಉಪಯೋಗವನ್ನು ಸ್ಮರಣೀಯವಾಗಿ ಮಾಡಿಕೊಂಡರು. ತೀರ್ಥಹಳ್ಳಿಗೆ ಯಾರೇ ರಾಜಕಾರಣಿ, ಚಳುವಳಿಯ ಮುಂದಾಳುಗಳು ಬಂದರು ಅವರಿಗೆಲ್ಲ ಭಾಷಣ ಮಾಡುವ ಸ್ಥಳ ಶ್ರೀರಾಮಮಂದಿರವೇ ಆಗಿತ್ತು. ಸಾಮಾನ್ಯವಾಗಿ ಬಹಿರಂಗ ಸಭೆಗಳನ್ನು ನಡೆಸಲು ಹೊರಗೆ ಯಾವಾಗಲೂ ಪ್ರತಿಬಂಧಕಾಜ್ಞೆ ಗಳಿರುತ್ತಿದ್ದರಿಂದ ವೈಯಕ್ತಿಕ ಆಸ್ತಿ ಶ್ರೀರಾಮ ಮಂದಿರವನ್ನೇ ಎಲ್ಲರೂ ಆಶ್ರಯಿಸುತ್ತಿದ್ದರು. ಅಲ್ಲದೆ ಈ ರಾಮಮಂದಿರಕ್ಕೆ ಹಿಂದೆ ಬಾಗಿಲು ಇದ್ದದ್ದು ಅನುಕೂಲವಾಗಿತ್ತು. ಒಂದು ಬಾರಿ ಜವಾಹರ್ ಲಾಲ್ ನೆಹರುರವರು ಎಲ್ಲಿಗೂ ಹೋಗುವಾಗ ತೀರ್ಥಹಳ್ಳಿಗೆ ಬಂದರು. ಅವರನ್ನು ಜನ ಎದುರುಗೊಂಡದು ರಾಮಮಂದಿರದಲ್ಲಿ. ಅವರ ಜೊತೆಯಲ್ಲಿ ಡಾ।ಹರಡಿಕರ್ ಇದ್ದರು. ಅಂದು ಕೇವಲ ೪೦ ಜನ ಸೇರಿದ್ದರು. ಟಿ ವಿಶ್ವನಾಥ್, ಪರಶುರಾಮ ಸ್ವಯಂಸೇವಕ ಶಿಕ್ಷಣ ಶಿಬಿರದವರು, ಶ್ರೀರಾಮ ಮಂದಿರದಲ್ಲಿ ನೆಹರು ಅವರನ್ನು ಸ್ವಾಗತಿಸುತ್ತಾರೆ. ಲೇಜೀಮಿನ ಕವಾಯತಿಯೊಡನೆ ಪಂಡಿತ ಶ್ರೀ ಕಮಗೋಡು ನರಸಿಂಹ ಶಾಸ್ತ್ರಿಗಳು ಬರೆದುಕೊಟ್ಟ ಪದ್ಯ:

**ಆಗಮಿಸಿಹ ವರ ಭಾರತವೀರರ।**
**ಸ್ವಾಗತಗೈಯಲು ಬಾಗಿ ನಮಿಸುವೆವು॥**

**"ಏಕ್, ದೋ, ತೀನ್, ಚಾರ್; ಏಕ್, ದೋ, ತೀನ್, ಚಾರ್"**

ಎಂದು ಹೇಳತ್ತಾ ಸ್ವಯಂಸೇವಕರು ಸುಂದರವಾಗಿ ಕವಾಯತು ಮಾಡುತ್ತಾರೆ. ಅವರ ಶಿಕ್ಷಕರಾಗಿದ್ದ ಅ.ಬಾ. ಮಹಾಶಬ್ದೆ ಯವರು ಚಂದ್ರಶೇಖರ್ ರೊಡನೆ



ಲಕಡೀ ಡ್ರಿಲ್ ಅನ್ನು ಮಾಡಿ ತೋರಿಸುತ್ತಾರೆ. ಕವಾಯತು ನೋಡಿ ನೆಹರು ಹರ್ಷಗೊಳ್ಳುತ್ತಾರೆ. ಆನಂತರದ ಕಾಲದಲ್ಲಿ ಯಾರು ಯಾರು ಕಾಂಗ್ರೆಸ್ ಚಳುವಳಿಯಲ್ಲಿ ಭಾಗವಹಿಸಿದ್ದರೂ ಆ ಮುಂದಾಳುಗಳೆಲ್ಲ ಈ ಶ್ರೀ ರಾಮ ಮಂದಿರವನ್ನ ತಮ್ಮ ಭಾಷಣಗಳ ಸಭಾಸ್ಥಳವಾಗಿ ಉಪಯೋಗಿಸಿಕೊಂಡಿದ್ದಾರೆ. ವೀರಕೇಸರಿ ಸೀತಾ ರಾಮಶಾಸ್ತ್ರಿ, ತಗಡೂರು ರಾಮಚಂದ್ರರಾವ್, ಟಿ.ಟಿ. ಶರ್ಮ, ಇವರೆಲ್ಲ ತಮ್ಮ ಕಂಚಿನ ಕಂಠದಿಂದ ರಾಮ ಮಂದಿರ ಸಭಾಂಗಣ ನಡುಗುವಂತೆ ಭಾಷಣ ಮಾಡಿದ್ದರು. ಇವರು ಭಾಷಣಗಳು ಜನಜಾಗೃತಿ ಮೂಡಿಸಿದ್ದವು. ಕಡಿದಾಳ ಮಂಜಪ್ಪ, ಕಾಳಿಂಗೈನ ರಾಘವೇಂದ್ರರಾವ್ ಸೋದರರು ಸಹ ಇಲ್ಲಿ ಭಾಷಣ ಮಾಡಿದ್ದರು. ರಾಷ್ಟ್ರೀಯ ಹರಿಕಥೆಗಳು ನಡೆದಿದ್ದವು. ಇಲ್ಲಿನ ಪ್ರತಿಯೊಬ್ಬ ಸತ್ಯಾಗ್ರಹಿಯು ಇಲ್ಲಿಂದಲೇ ಹಾರತುರಾಯಿಗಳನ್ನು ಧರಿಸಿ ಹೊರಡುತ್ತಿದ್ದರು.

ಹೀಗಾಗಿ ಶ್ರೀ ರಾಮಮಂದಿರ ತೀರ್ಥಹಳ್ಳಿಯ ಆಕಾಲದ ಸ್ವಾತಂತ್ರ್ಯ ಚಳುವಳಿಯ ಕಾರ್ಯಕರ್ತರಿಗೆ ಒಂದು ಅವಿಸ್ಮರಣೀಯ ಸಭಾಂಗಣವಾಗಿತ್ತು. ಶ್ರೀರಾಮಮಂದಿರದ ನಡುವೆಯಿದ್ದ ಶ್ರೀರಾಮ ದೇವಾಲಯವು ಧಾರ್ಮಿಕ ಮನೋಭಾವನೆಯನ್ನು ಉಂಟುಮಾಡುತ್ತಿತ್ತು.

## ಘಟನೆ ೩:

೧೯೪೨ ರಲ್ಲಿ ಗೋಪಾಲಗೌಡರ ನೇತ್ರತ್ವದಲ್ಲಿ ತೀರ್ಥಹಳ್ಳಿ – ಕೊಪ್ಪ ಮಾರ್ಗದಲ್ಲಿ ದೇವಂಗಿ – ಬಸವಾನಿ ಸಮೀಪ ತಂತಿ ಕತ್ತರಿಸುವ ಯೋಜನೆ ಆಗುತ್ತದೆ. ತಂಡದಲ್ಲಿ ಶಾನ ಐತಾಳರು, ಕಿಟ್ಟಪ್ಪ, ವೆಂಕಟರಾಯ ಕಾಮತ್, ಡಿ.ಟ.ಚಂದ್ರಶೇಖರ್ ಇರುತ್ತಾರೆ. ಆ ದಿನ ಸಂಜೆ ಒಬ್ಬೊಬ್ಬರೆ ಬಸವಾನಿ ರಾಮಶರ್ಮರ ಮನೆ ಸೇರುತ್ತಾರೆ. ತಡರಾತ್ರಿ ಎಲ್ಲರೂ ಮುಸುಕುಧಾರಿಗಳಾಗಿ ಟೆಲಿಗ್ರಾಫ್ ತಂತಿ ಕತ್ತರಿಸಲು ನಡೆಯುತ್ತಾರೆ. ನಿರ್ಜನ ಪ್ರದೇಶವಾದ್ದರಿಂದ ಧೈರ್ಯವಾಗಿ ಕೆಲಸ ಪ್ರಾರಂಭಿಸುತ್ತಾರೆ. ತಂತಿ ಕತ್ತರಿಸಿ ಹೊರಡಬೇಕು ಎನ್ನುವಾಗ ಗಸ್ತು ತಿರುಗುತ್ತಿದ್ದ ಪೋಲಿಸರು ಕಣ್ಣಿಗೆ ಬೀಳುತ್ತಾರೆ. ಇವರು ಓಡಲು ಶುರು ಮಾಡಿದಾಗ ಪೋಲಿಸರಿಗೆ ಇವರ ಕೆಲಸ ಅರಿವಾಗುತ್ತದೆ. ಎಲ್ಲರೂ ಒಂದೊಂದು

ದಿಕ್ಕಿಗೆ ಓಡುತ್ತಾರೆ. ವೆಂಕಟರಾಯ ಕಾಮತ್ ಇನ್ನೇನು ಸಿಕ್ಕಿಹಾಕಿಕೊಂಡರು ಅನ್ನುವಾಗ ಅವರು ಪೋಲಿಸರನ್ನು ತಳ್ಳಿ ಬೇಲಿ ಹಾರಿ ಹೊಲದಲ್ಲಿ ಕಣ್ಮರೆಯಾಗುತ್ತಾರೆ. ಕತ್ತಲು ಮತ್ತು ಮುಸುಕು ಹಾಕಿದ್ದರಿಂದ ಪೋಲಿಸರಿಗೆ ಯಾರ ಗುರುತು ಸಿಗಲಿಲ್ಲ. ಮುಂದೆ ಈ ಪ್ರಕರಣ ಪ್ರಸಿದ್ಧಿ ಪಡೆಯುತ್ತದೆ. ಚಿಕ್ಕಮಗಳೂರಿನ ಅನೇಕ ಕಡೆಗಳಲ್ಲೂ ಈ ತಂಡ ತಂತಿ ಕತ್ತರಿಸುವಲ್ಲಿ ಯಶಸ್ವಿಯಾಗುತ್ತದೆ.

**ಘಟನೆ ೪:**

**ಗಂಗಸರೊ ಗಂಗಸರು**
**ಪಾರಡೇ ಕಲಿ ಗಂಗಸರ॥**

**ಕೆಬಿತ್ತ ಮುರೂ ದೆತ್ತದು ಕೊರೊ**
**ಪಾರ್‌ಂಡ ಕಲೀ ಗಂಗಸರ॥**

**ಕಿದೆತ್ತ ಎರೊ ಮಾರ್ದು ಪೋವು**
**ಪಾರ್‌ಂಡ ಕಲೀ ಗಂಗಸರ॥**

**ಗಂಗಸರೊ ಗಂಗಸರು**
**ಪಾರಡೇ ಕಲಿ ಗಂಗಸರ॥**

**ಅಟ್ಟದ ಬಿತ್ತ್ ಮಾರ್ದು ಪೋವು**
**ಪಾರಡೇ ಕಲಿ ಗಂಗಸರ॥**

ದೊಡ್ಡ ಧ್ವನಿಯಲ್ಲಿ ಈ ತುಳು ಹಾಡನ್ನು ಹೇಳುತ್ತ ಜಿರಾವತಿ ಮಳೆಯಲ್ಲಿ ಟಿ.ವಿಶ್ವನಾಥ ಮತ್ತು ಕೆಲವು ಜನರು ಸಾರಾಯಿ ಅಂಗಡಿ ಪಿಕೆಟಿಂಗ್ ಮಾಡುತ್ತಿದ್ದರು. ನರೇಂದ್ರ ಪ್ರಭು ಇವರ ನಾಯಕರು. ಇವರು ತುಂಬಾ ಜ್ಞಾನಿಯಾಗಿದ್ದರು. ಆರ್ಯಸಮಾಜದ ಆದ್ಯಗ್ರಂಥ ಸತ್ಯಾರ್ಥ ಪ್ರಕಾಶ' ವನ್ನು ಆ ವಯಸ್ಸಿನಲ್ಲೇ ವಿವರಿಸಿ ಅರ್ಥೈಸುತ್ತಿದ್ದರು. ಮಹರ್ಷಿ ದಯಾನಂದ ಸರಸ್ವತಿ ಜೀವನದ ಬಗ್ಗೆ



ಆಗಾಗ್ಗೆ ವ್ಯಾಖ್ಯಾನ ಮಾಡುತ್ತಿದ್ದರು. ಇಂತಹ ಹಿರಿಯರ ನೇತೃತ್ವದಲ್ಲಿ ಅಂದು ತೀರ್ಥಹಳ್ಳಿ ಆಸ್ಪತ್ರೆ ಎದುರಿಗಿದ್ದ ಸರಾಯಿ ಅಂಗಡಿಯ ಮುಂದೆ ಇವರು ಪಿಕೆಟಿಂಗ್ ಮಾಡುತ್ತಿದ್ದರು. ಸರಾಯಿ ಅಂಗಡಿಯು ಇವರುಗಳ ವೈರಿಗಳದ್ದೇನಲ್ಲ, ಟಿ ವಿಶ್ವನಾಥ್ ಅವರ ಸ್ನೇಹಿತ ಟ.ಲಕ್ಷಯ್ಯನ ತಂದೆ ರಂಗಪ್ಪ ಆ ಸರಾಯಿ ಅಂಗಡಿ ನಡೆಸುತ್ತಿದ್ದರು. ವಿಶ್ವನಾಥ್ ರವರು ಪ್ರತಿದಿನ ಶಾಲೆಗೆ ಹೋಗುವಾಗ ಲಕ್ಷಯ್ಯನ ಮನೆಯಲ್ಲಿ ಕೆಲ ನಿಮಿಷ ಕಳೆದು ಅವರನ್ನು ಕರೆದುಕೊಂಡು ಹೋಗುತ್ತಿದ್ದರು. ಶಾಲೆ ಮುಗಿದ ಕೂಡಲೆ ವಿಶ್ವಾನಾಥರು ಲಕ್ಷಯ್ಯನ ಅಂಗಡಿ ಮುಂದೆ ನಿಂತುಕೊಂಡು ಸೇಂದಿ, ಸಾರಾಯಿ ಪಿಕೆಟಿಂಗ್ ಮಾಡುತ್ತಿದ್ದರು. ಅವತ್ತು ಆ ಮಳೆಯಲ್ಲಿ ನಿಂತು ಕೂಗುತ್ತಿರುವಾಗ ಪೋಲಿಸರು ಬಂದು ಇವರೆನ್ನಲ್ಲ ಸ್ಟೇಷನ್ನಿಗೆ ಎಳೆದುಕೊಂಡು ಹೋಗಿ ಬೂಟಿಗಾಲಿನ ತುದಿಯಿಂದ ಮೊಣಕಾಲ ಗಂಟಿನ ಕೆಳಗಿನ ಎಲುಬಿಗೆ ಕಟಕಟ ಒದೆಯುವಾಗ, ಎಲ್ಲರಿಗೂ ಮೇಲಿನ ಏಳು ಲೋಕ ಕಂಡಿತ್ತು. ನಡುರಾತ್ರಿಯವರೆಗೂ ಕೂರಿಸಿಕೊಂಡು ಮೂರನೆ ಸಾರಿ ಒದೆಯುವಾಗ ಅಂಗಡಿ ರಂಗಪ್ಪನವರೆ ಬಂದು ವಿಶ್ವನಾಥರನ್ನು ಬಿಡಿಸಿ , ತಬ್ಬಿಕೊಂಡು ಕೈ ಹಿಡಿದು ಕರೆದುಕೊಂಡು ಹೋಗಿ ಮನೆಯ ಬಳಿ ಬಿಟ್ಟಿರುತ್ತಾರೆ.

❑

ಅಧ್ಯಾಯ ೮

## ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ ಬಿಂದು ಈ ಉದ್ಯಾನವನ

೧೯೪೨ ರ ಸ್ವಾತಂತ್ರ್ಯ ಚಳುವಳಿ "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂದು ಮಹಾತ್ಮ ಗಾಂಧೀಜಿ ಕೊಟ್ಟ ಕರೆ ದೇಶಾದ್ಯಂತ ಪ್ರತಿಧ್ವನಿಸಿತು ಆ ಕೂಗು ಶಿವಮೊಗ್ಗ ಜನರ ಕಿವಿಗಳನ್ನು ಮುಟ್ಟದಂತೆ ಇರಲಿಲ್ಲ. ನಾಡಿನ ನಾಯಕರುಗಳ ಕರೆಯಂತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಲು ಜನ ಜಾತಿ, ಕುಲ, ಭೇದ ಮರೆತು ನಾ ಮುಂದು ತಾ ಮುಂದು ಎಂದು ಬರುತ್ತಿದ್ದರು. ದೇಶದ ಸ್ವಾತಂತ್ರ್ಯಕ್ಕಾಗಿ ತನು ಮನ ಧನ ಅರ್ಪಿಸಲು ಹುರಿದುಂಬಿಸುವ ಕಾರ್ಯಕ್ರಮಗಳ ಪ್ರಭಾತ ಫೇರಿ ಕೂಡ. ಇದು ಪ್ರತಿದಿನ ಮುಂಜಾನೆ ಶ್ರೀ ರಾಮಣ್ಣ ಶ್ರೇಷ್ಠಿ ಉದ್ಯಾನವನದಿಂದ ತ್ರಿವರ್ಣ ಧ್ವಜದೊಂದಿಗೆ ದೇಶಭಕ್ತಿ ಗೀತೆಗಳ ಝುಂಡಾ ಊಂಚಾ ರಹೇ ಹಮಾರಾ ವಿಜಯೀ ವಿಶ್ವ ತಿರಂಗಾ ಪ್ಯಾರಾ ದೊಂದಿಗೆ ಹೊರಡುತ್ತಿತ್ತು. ಉದ್ಯಾನವನದ ಮುಂಭಾಗದ ಚೌಕಿಯಿಂದ ಸಾಲುಗಟ್ಟಿ ಪ್ರಭಾತಪೇರಿಗೆ ನಿಂತ ಹೋರಾಟಗಾರರಿಂದ:

**ಭೋಲೋ ಭಾರತ್ ಮಾತಾಕಿ ಜೈ**

**ಬೋಲೋ ಮಹಾತ್ಮಾಗಾಂಧೀಕಿ ಜೈ**

**ಒಂದೇ ಏನೇ ಬರಲಿ ಒಗ್ಗಟ್ಟಿರಲಿ**

ಇಂಕ್ವಿಲಾಬ್ ಜಿಂದಾಬಾದ್ ಎಂದು ಏಕಕಂಠದಿಂದ ಘೋಷಣೆಗಳು ಬರುತ್ತಿದ್ದರೆ, ಉದ್ಯಾನವನದ ಪ್ರತಿ ಕಣ ಕಣ ಕಣಗಳಲ್ಲಿ ತುಂಬಿ ತುಳುಕುತ್ತಿತ್ತು. ಜನತೆಯ ಮನೆಗಳಲ್ಲಿ ದೇಶ ಭಕ್ತಿಯನ್ನು ಸಿಂಚನ ತುಂಬಿಸುತ್ತಿದ್ದ ಸ್ಥಳ



ಶ್ರೀ ರಾಮಣ್ಣ ಶ್ರೇಷ್ಠಿ ಪಾರ್ಕ್ ಪ್ರಭಾತಪೇರಿ ಪ್ರಾರಂಭವಾಗುತ್ತಿದ್ದುದು ಇಲ್ಲಿಂದಲೇ ನಗರ ಪ್ರದಕ್ಷಿಣೆಯ ನಂತರ ಕೊನೆಯಾಗುತ್ತಿದ್ದುದು ಇದೇ ಸ್ಥಳದಲ್ಲಿ. ಬೆಳಿಗ್ಗಿನ ಪ್ರಭಾತಪೇರಿ ಕಾರ್ಯಕ್ರಮದ ನಂತರ ಸಂಜೆಯ ಸಾರ್ವಜನಿಕ ಬಹಿರಂಗ ಸಭೆಯ ಕಾರ್ಯಕ್ರಮಕ್ಕೆ ಈ ಪುಟ್ಟ ಉದ್ಯಾನವನದ ಮಧ್ಯೆ ಒಂದು ಚಿಕ್ಕ ವೇದಿಕೆ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ದೊಡ್ಡ ಪಾತ್ರವನ್ನು ವಹಿಸಿತ್ತು. ಈ ವೇದಿಕೆ ಭಾಷಣಕಾರರಿಗೂ, ಅಧ್ಯಕ್ಷರಿಗೂ ಸ್ಥಳವಕಾಶ ಮಾಡಿಕೊಡುತ್ತಿತ್ತು. ಅನೇಕ ನಾಯಕರು ಮತ್ತು ಭಾಷಣಕಾರರು ಶಿವಮೊಗ್ಗ ನಗರ ಮತ್ತು ಸುತ್ತಮುತ್ತ ಹಳ್ಳಿಗಳಲ್ಲಿ ಜೀವನವನ್ನೇ ಮುಡಿಪಿಟ್ಟ ಮಹಾಶಯರುಗಳು ಸರ್ಕಾರದ ದುರಾಡಳಿತವವನ್ನು ಜನತೆಗೆ ತಿಳಿಸಿ ಸ್ವಾತಂತ್ರ್ಯ ಬೇಡಿಕೆಯನ್ನು ಮುಂದಿಟ್ಟ ಹಲವು ಮುಖಂಡರುಗಳನ್ನು ಪರಿಚಯಿಸಿದ್ದು ಶ್ರೀರಾಮಣ್ಣ ಶ್ರೇಷ್ಠಿ ಉದ್ಯಾನವನದ ವೇದಿಕೆ. ಒಮ್ಮೆ ಡಿ.ಎಸ್ ದಿನಕರ್ ರವರು ಸ್ತ್ರೀ ವೇಷದಲ್ಲಿ ಬಂದು ಸ್ವಾತಂತ್ರ್ಯದ ಅವಶ್ಯಕತೆಗಳನ್ನು ಜನತೆಗೆ ತಮ್ಮ ವಾಗ್ಝರಿಯಿಂದ ತಿಳಿಸಿ ಸರ್ಕಾರವನ್ನು ಟೀಕಿಸಿ, ಪೋಲಿಸ್ ಗೂಢಾಚಾರಿಗಳಿಂದ ತಪ್ಪಿಸಿಕೊಂಡಿದ್ದರು. ಮತ್ತೊಮ್ಮೆ ಶಾಂತವೇರಿ ಗೋಪಾಲಗೌಡರು ವೇಷ ಮರೆಸಿಕೊಂಡು ಭಾಷಣಕಾರರಾಗಿ ಬಂದು ಪೋಲೀಸರಿಂದ ತಪ್ಪಿಸಿಕೊಂಡು ಹೋಗಿದ್ದರು. ಈ ವೇದಿಕೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಕೆಲವು ಮಹನೀಯರೆಂದರೆ ಎಚ್ ಸಿದ್ದಯ್ಯ, ಎಸ್ ವಿ ಕೃಷ್ಣಮೂರ್ತಿರಾವ್, ಜಯತೀರ್ಥಾಚಾರ್, ಕಡಿದಾಳ್ ಮಂಜಪ್ಪ, ಸಿ ರಾಮಸ್ವಾಮಿ ಶೆಟ್ಟಿ, ಎಂ ಎಸ್ ರುದ್ರಪ್ಪ, ಡಾ॥ ಪಾರ್ಥನಾರಾಯಣ ಪಂಡಿತ್, ಕೆ.ಆರ್.ಮಾಧವರಾವ್, ಭೂಪಾಲಂ ಚಂದ್ರಶೇಖರಯ್ಯ ಕೆ.ಜಿ.ಒಡೆಯರ್, ಎ.ಆರ್. ಬದರಿನಾರಾಯಣ್ ಅಯಂಗರ್ ಇನ್ನೂ ಅನೇಕರು ಈ ವೇದಿಕೆಯಿಂದ ವಿಜೃಂಭಿಸಿದ ವ್ಯಕ್ತಿಗಳು.

ಆಗಿನ ರಾಮಣ್ಣಶ್ರೇಷ್ಠಿ ಎಂಬ ದಾನಿಗಳು ಈ ಜಾಗವನ್ನು ಸಾರ್ವಜನಿಕ ಉಪಯೋಗಕ್ಕೆ ನೀಡಿದ್ದರು. ಅಂದಿನಿಂದ ಶ್ರೀ ರಾಮಣ್ಣ ಶ್ರೇಷ್ಠಿ ಉದ್ಯಾನವನ ಎಂದೇ ಖ್ಯಾತಿ. ಉದ್ಯಾನವನ ಎಂದರು ಯಾವುದೇ ಗಿಡ ಮರಗಳು ಇರಲಿಲ್ಲ ಸಂಜೆ ವೇಳೆ ಜನರು ಇಲ್ಲಿಗೆ ವಿಶ್ರಾಂತಿಗೆ ಬರುತ್ತಿದ್ದರು. ಪುರಸಭೆ ಇಟ್ಟಿದ್ದ ಪುಟ್ಟ ರೇಡಿಯೋ ಬಿತ್ತರಿಸುವ ವಾರ್ತೆಗಳೇ ಆಗಿನ ಒಂದು ಸಂಪರ್ಕ ಮಾಧ್ಯಮ.

ರಾತ್ರಿ ವೇಳೆಯಲ್ಲಿ ವಿದ್ಯಾರ್ಥಿಗಳು ಇಲ್ಲಿನ ವಿದ್ಯುತ್ ದೀಪದ ಬೆಳಕಿನಲ್ಲಿ ವ್ಯಾಸಂಗ ಮಾಡುತ್ತಿದ್ದರು. ೧೯೪೨ ರ ಚಳವಳಿಯಲ್ಲಿ ಗೋಪಾಲಗೌಡರನ್ನು ಇಡೀ ಜಿಲ್ಲೆಗೆ ಪರಿಚಯಿಸಿದ್ದು ಇದೇ ಉದ್ಯಾನವನ. ಚಳುವಳಿ ಕಾಲದಲ್ಲಿ ದಿನಕ್ಕೊಂದು ವಿವಿಧ ವೇಷ ಧರಿಸಿ ಭಾಷಣ ಮಾಡಿ ಗೋಪಾಲಗೌಡರು, ದಿನಕರ್ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಕಣ್ಮರೆಯಾಗುತ್ತಿದ್ದರು. ಇವರ ಭಾಷಣವೇ ಆಂದೋಲವನ್ನು ತೀವ್ರಗೊಳಿಸಿದ್ದು. ಅನೇಕರು ಭಾಷಣ ಕಲೆಯನ್ನು ಕಲಿತದ್ದು ಇಲ್ಲೆ. ಇಂದಿನಂತೆ ಆಟೋ ಮತ್ತು ಧ್ವನಿವರ್ಧಕಗಳು ಪ್ರಚಾರಕ್ಕೆ ಇರದ ದಿನಗಳಲ್ಲಿ ಜಾಗಟೆಯೊಂದಿಗೆ ಪ್ರಚಾರಕ್ಕೆ ಪ್ರಮುಖ ಸಾಧನವಾಗಿತ್ತು. ಪಾತ್ರೆ ಅಂಗಡಿ ಶಾಂತಪ್ಪನವರಿಂದ ತರಿಸಿದ ಜಾಗಟೆಯನ್ನು ಹಿಡಿದು ನಾಗಪ್ಪಶೆಟ್ಟರು ನಡೆಸುತ್ತಿದ್ದ ಖಾದಿ ವಸ್ತ್ರಾಲಯದಿಂದ ಬಹಿರಂಗ ಸಭೆಗೆ ಅಧ್ಯಕ್ಷತೆ ಪ್ರಮುಖ ಭಾಷಣಕಾರರ ಹೆಸರು ಸಭೆಯ ವೇಳೆ ತಿಳಿಸುವ ಚೀಟಿಯೊಂದನ್ನು ಪಡೆದು ಪ್ರಚಾರಕ್ಕೆಂದು ಕಾಲ್ನಡಿಗೆಯಲ್ಲಿ ಹೊರಡುತ್ತಿದ್ದ ಪ್ರಾರಂಭ ಬಿಂದು ಶ್ರೀ ರಾಮಣ್ಣ ಶ್ರೇಷ್ಠಿ ಉದ್ಯಾನವನ ಎಂದು ನೆನಪಿಸಿಕೆಳ್ಳುತ್ತಾರೆ ಎಸ್ ಶಿವರಾಂ.

ಹೀಗೆ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾರ್ವಜನಿಕರಿಗೆ ಸಭಿಕರಿಗೆ ಮುಖಂಡರು ಮತ್ತು ಕಾರ್ಯಕರ್ತರುಗಳಿಗೆ ಆಶ್ರಯವಿತ್ತ ಸ್ಫೂರ್ತಿಯ ತಾಣ ಶ್ರೀ ರಾಮಣ್ಣ ಶ್ರೇಷ್ಠಿ ಉದ್ಯಾನವನ. ಶಿವಮೊಗ್ಗ ನಗರದಿಂದ ಹಾದು ಹೋಗುವ ತುಂಗಾ ನದಿಯ ದಂಡೆಯ ಮೇಲೆ ಅನೇಕ ಪುಣ್ಯ ಸ್ಥಳಗಳು ಇವೆ. ಅದರಲ್ಲಿ ಉದ್ಯಾನವನ ಸಹ ಒಂದು. ಅಂದು ದೇಶಭಕ್ತಿಯ ಸಂಕೇತವಾಗಿದ್ದ ಸ್ಥಳ ಇಂದು ಸರ್ವಸಿದ್ಧಿ ವಿನಾಯಕಸ್ವಾಮಿ ದೇವಸ್ಥಾನವಾಗಿ ದೈವಭಕ್ತಿ ಬಿತ್ತುತ್ತಿದೆ.

❑

ಅಧ್ಯಾಯ ೯

## ಕಾಗೋಡು ಸತ್ಯಾಗ್ರಹ

'ಕಾಗೋಡು ಸತ್ಯಾಗ್ರಹ' 'ಉಳುವವನೇ ಭೂಮಿ ಒಡೆಯ' ಎಂಬ ಶಬ್ದಗಳನ್ನು ಕೇಳುವಾಗ 'ಭೂ ಸುಧಾರಣೆ' ಶಾಸನದ ನೆನಪು ಸಹಜವಾಗಿ ಮೂಡುತ್ತದೆ. ಭೂ ಸುಧಾರಣೆ ಮಾತೆತ್ತಿದಾಗ ಕೀರ್ತಿಶೇಷ ಗೋಪಾಲಗೌಡರ ಹೆಸರು ಹಚ್ಚಹಸಿರಾಗಿ ಮುಂದೆ ಬಂದು ನಿಲ್ಲುತ್ತದೆ. 'ಕಾಗೋಡು ಸತ್ಯಾಗ್ರಹ' ನಾಡಿನ ಇತಿಹಾಸದಲ್ಲಿ ಒಂದು ಚಿರಸ್ಮರಣೀಯ ಅಧ್ಯಾಯ. ನಾಡಿನ ಬಹುಪಾಲ ರೈತ ಜನತೆಯ, ಜೀವನ ಪ್ರಶ್ನೆಯನ್ನು ಮೂಲಭಾತವಾಗಿ ಕೆದಕಿದ ಘಟನೆ. ರಾಷ್ಟ್ರ– ರಾಜ್ಯದ ಭೂಸುಧಾರಣೆ ಶಾಸನದ ಸ್ಪೂರ್ತಿಯ ಸೆಲೆ. ಈ ಐತಿಹಾಸಿಕ ಸತ್ಯಾಗ್ರಹ ಚಳುವಳಿಯ ಪಾತ್ರ ಮಹತ್ವಪೂರ್ಣವಾದುದು. ಈ ಚಳುವಳಿಯ ಸ್ಪೂರ್ತಿಯ ನೇತಾರ ಶಾಂತವೇರಿ ಗೋಪಾಲಗೌರು.

ಕಾಗೋಡು ಸತ್ಯಾಗ್ರಹವನ್ನು ಗೋಪಾಲಗೌಡರು ನೆನಪಿಸಿಕೊಳ್ಳುವುದು ಹೀಗೆ.

ಕಾಗೋಡು! ನೆನೆದೊಡನೆ ನಾನು ಅಲ್ಲಿ; ಆ ಪರಿಸರದಲ್ಲಿ, ಆ ಕಾಲದಲ್ಲಿ, ಹಿಂದಕ್ಕೆ ಮತ್ತೆ ಹೋಗಿ ಬದುಕುವುದು ಅಸಾಧ್ಯ! ನನ್ನ ಪ್ರಜ್ಞೆಯಲ್ಲಿ ಜಾಗೃತವಾಗಿರುವ ಒಂದು ಮಹಾ ಘಟನೆ, ಕಾಗೋಡು ಹೋರಾಟ. ನಾನು ಈಗ ಹೀಗೆ ಆಗಿದ್ದರೆ. ಹಾಗೆ ಆಗುವಲ್ಲಿ ಕಾಗೋಡಿನ ಕೈವಾಡ ಬಹಳವಿದೆ. ನನ್ನ ಮನಸ್ಸಿನ ಮೇಲೆ ಅಚ್ಚಳಿಯದೆ ಉಳಿದಿರುವ, ದಿನ ಕಳೆದಂತೆ ಹೆಚ್ಚು ಹೆಚ್ಚು ಹಸಿರಾಗಿ ನಳನಳಿಸುತ್ತಿರುವ ಒಂದು ಪ್ರಸಂಗ

ಕಾಗೋಡು. ಅದು ಆಳವಾದ ಅನುಭವ; ಅಂತೆಯೇ ನನ್ನ ಸ್ಮರಣೆಯಲ್ಲಿ ಚಿರವಾದುದು.

ಗೇಣಿ ಎಷ್ಟಿರಬೇಕೆಂದು ಒಂದು ವಿವಾದ ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾಗೋಡು ಗ್ರಾಮದ ಜಮೀನುದಾರರ – ರೈತರ ನಡುವೆ ಹುಟ್ಟಿತು: ರಾಜಿ ಆಗಲಿಲ್ಲ; ಸಂಧಾನಗಳು ಫಲಿಸಲಿಲ್ಲ. ರೈತರು ರೈತಸಂಘ, ಅರವತ್ತು ಸೇರು ಎಂದರು. ಒಡೆಯಾರು, ಪ್ರಮಾಣ ಇರಲಿಲ್ಲ. ಎಪ್ಪತ್ತು ಸೇರಿನಂತೆ ಗೇಣಿ ಚುಕ್ತ ಮಾಡಿ ಗದ್ದೆಗೆ ಕಾಲಿಡಿ ಎಂದು ಒಡೆಯಾರು ಆಜ್ಞೆ ಮಾಡಿದರು. ಅರವತ್ತು ಸೇರಿಗಿಂತ ಒಂದು ಕಾಳು ಜಾಸ್ತಿ ಕೊಡುವುದಿಲ್ಲ. ಉಳುಮೆ ಹಕ್ಕನ್ನು ಬಿಡುವುದಿಲ್ಲ. ನಾವು ಗಳೇವು ಕಟ್ಟೇ ಸೈ ಎಂದು ರೈತರು ತಮ್ಮ ತೀರ್ಮಾನ ತಿಳಿಸಿದರು; ಇಷ್ಟೇ ಮೂಲ: ರೈತರು ಗಳೇವು ಕಟ್ಟಲು ನೇಗಿಲು, ನೊಗಹೊತ್ತುಕೊಂಡು ಗದ್ದೆಗಳಿಗೆ ಕಾಲು ಇಟ್ಟಿದ್ದೇ ತಡ, ಕಾಯುತ್ತಿದ್ದ ಒಡೆಯರು, ಅವರ ಆಳು – ಕಾಲು ಎಲ್ಲ ಸೇರಿ ಅವರನ್ನು ಹೊಡೆದು, ಒದೆದು ಗದ್ದೆಗಳಿಂದ ಅಟ್ಟಿ ಓಡಿಸಿದರು. ಘರ್ಷಣೆ ನಡೆಯಿತು. ಪೋಲೀಸರಿಗೆ ದೂರು ಹೋಯಿತು. ರೈತಸಂಘ, ಸೋಷಲಿಸ್ಟ್ ಪಾರ್ಟಿ ರೈತರ ಪರ ನಿಂತವು ಸೂಚನೆ ಕೊಟ್ಟು ಸತ್ಯಾಗ್ರಹ ಸಾರಿದರು. ದೀರ್ಘ ಹೋರಾಟದ ಭೂಮಿಕೆ ಏರ್ಪಟ್ಟಿತು.

ಗೊತ್ತಾದ ದಿನ ಸತ್ಯಾಗ್ರಹಿಗಳ ಮೊದಲ ತಂಡ ಕಾಗೋಡು ರೈತರ ಕೇರಿಯ ಅಶ್ವತ್ಥಮರದ ಬುಡದಿಂದ ಹೊರಟಿತು. ಒಡೆಯರ ಗದ್ದೆಯತ್ತ, ಗಳೇವು ಕಟ್ಟಲು, ಕಾನೂನು ಮುರಿಯಲು, ಸತ್ಯಾಗ್ರಹಿಗಳು, "ರೈತರ ಹೋರಾಟಕ್ಕೆ" ಎಂದೊಡನೆ ಅಲ್ಲಿ ನೆರೆದಿದ್ದ ಸಹಸ್ರಾರು ಜನ ರೈತರು, ಹೆಂಗಸರು, ಹುಡುಗರು 'ಜಯವಾಗಲಿ!" ಎಂದು ಜಯಘೋಷ ಮಾಡಿದರು. ಹೀಗೆ, 'ಇನ್‌ಕಿಲಾಬ್ – ಜಿಂದಾಬಾದ್', 'ಉಳುವವನೆ ಹೊಲದೊಡೆಯ', 'ಜಮೀನುದ್ದಾರಿ ಪದ್ಧತಿ ನಾಶವಾಗಲಿ,' 'ಜಮೀನುದಾರರ ದಬ್ಬಾಳಿಕೆಗೆ ಧಿಕ್ಕಾರ', 'ದಬ್ಬಾಳಿಕೆಯ ಸರಕಾರಕ್ಕೆ ಧಿಕ್ಕಾರ' ಎಂದು ಮೇಲಿಂದ ಮೇಲೆ ಘೋಷಣೆಗಳು ಮೊಳಗಿದವು. ನೆರೆದಿದ್ದವರು ಸತ್ಯಾಗ್ರಹಿಗಳಿಗೆ ಹಾರಹಾಕಿ ಹರಸಿದರು. ಸತ್ಯಾಗ್ರಹಿಗಳು ಜಮೀನನ್ನು ಪ್ರವೇಶಿಸುತ್ತಿದ್ದಂತೆಯೇ ಸಿದ್ಧವಾಗಿದ್ದ ಪೋಲಿಸರು ಅವರನ್ನೆಲ್ಲ ನೇಗಿಲು ನೊಗ



ಸಮೇತ ಬಂಧಿಸಿದರು. ಕಾಗೋಡಿನ ಗದ್ದೆ, ತೋಟ, ಕಾಡು ಆಕಾಶ ಬಿರಿಯುವಂತೆ ಮೊಳಗಿತು. ಸತ್ಯಾಗ್ರಹಿಗಳನ್ನು ಪೋಲಿಸರು ವ್ಯಾನಿಗೆ ತುಂಬಿಕೊಂಡು ಸಾಗರದತ್ತ ಹೋದರು. ಚಳವಳಿ ಉತ್ರವೂ, ವ್ಯಾಪಕವೂ ಆಯಿತು. ಸರಕಾರ ಹೋರಾಟವನ್ನು ಹತ್ತಿಕ್ಕಲು ಕ್ರೂರ ದಬ್ಬಾಳಿಕೆಗೆ ಇಳಿಯಿತು. ವಿದೇಶ ಪ್ರವಾಸ ಹೊರಡಲಿದ್ದ ಸೋಷಲಿಸ್ಟ್ ನೇತಾರ ಡಾ. ರಾಮಮನೋಹರ ಲೋಹಿಯಾ ಅವರು ಕಾಗೋಡಿಗೆ ಧಾವಿಸಿ ಬಂದರು. ಅವರೂ ಬಂಧನಕ್ಕೊಳಗಾದರು. ನ್ಯಾಯಾಲಯ ಅವರನ್ನು ಬಿಡುಗಡೆ ಮಾಡಿತು.

ಹೋರಾಟ ದೇಶ ವಿದೇಶಗಳಲ್ಲಿ ಪ್ರಸಿದ್ಧವಾಯಿತು. ಚಿರಾಯು ವಾಯಿತು.

ನಾವು ಕೆಲವರು ಸ್ವಯಂ ಆಗಿ ಸತ್ಯಾಗ್ರಹ ಮಾಡಿ ಬಂಧನಕ್ಕೊಳಗಾಗದೆ, ಪೋಲೀಸರ ಕಣ್ಣು ತಪ್ಪಿಸಿಕೊಂಡು ಹೋರಾಟವನ್ನು ನಿರ್ದೇಶಿಸುವ ಕೆಲಸದಲ್ಲಿ ತೊಡಗಿದ್ದೆವು. ಹೀಗೆ ಹೋರಾಟ ನಡೆಯುತ್ತಿರುವಲ್ಲಿ ಪೋಲೀಸರ ಕೈಗೆ ನಾನು ಸಿಕ್ಕಿಹಾಕಿಕೊಂಡಾಗ ನನಗಾದ ಅತಿ ವಿಚಿತ್ರ ಅನುಭವ ಇಂತಿದೆ.

ಕಾಗೋಡು ಹತ್ತಿರದ ಒಂದು ಹಳ್ಳಿಯಲ್ಲಿ ಒಂದು ರಾತ್ರಿ ತಂಗಿದ್ದೆ, ಉಳಿದುಕೊಳ್ಳಲು ಊರಿನವರು ಮನೆ ಗೊತ್ತು ಮಾಡಿದ್ದರು. ರಾತ್ರಿ ನಾಳಿನ ಸತ್ಯಾಗ್ರಹದ ಬಗೆಗೆ ತೀರ್ಮಾನ ತೆಗೆದುಕೊಂಡು ನಂತರ ನನ್ನನ್ನು ಆ ಮನೆಗೆ ಕರೆದುಕೊಂಡು ಹೋಗಿ, ನನ್ನ ಮಲಗುವ ವ್ಯವಸ್ಥೆ ಮಾಡಿದರು. ಆಯಾಸವಾಗಿತ್ತು; ನಾನು ಮಲಗಿ ನಿದ್ರೆ ಹೋದೆ. ಆ ಮನೆಯಲ್ಲಿದ್ದವರು ವಯಸ್ಸಾದ ತಾಯಿ ಮತ್ತು ಅವಳ ಮಗ. ಆತ ನಮ್ಮ ಸಹಾಯಕ, ನನ್ನ ಬೆಂಗಾವಲು. ಊರ ಮುಂದಲ ಮನೆ. ಮನೆಯ ಮುಂದೆ ಊರಿನ ಬಾವಿ.

ನಸುಕಿನಲ್ಲಿ ಎದ್ದು ಬಯಲು ಕಡೆ ಹೋಗಿ ಬಂದೆ. ಮುಖ ತೊಳೆದು, ಚಹಾ ಕುಡಿದು, ಮನೆಯ ಮುಂದಿನ ಚಡಿಯ ಮೇಲೆ ಹಾಕಿದ್ದ ಚಾಪೆಯ ಮೇಲೆ ಕುಳಿತು 'ಮೂಡಲ ಮನೆಯ ಮುತ್ತಿನ ನೀರಿನ ಎರಕಾವ ಹೊಯ್ದಾ' ರಾಗ ಎಳೆಯುತ್ತಾ ಪ್ರಕೃತಿಯೊಂದಿಗೆ ಬೆರೆತು ಕೆಲ ಹೊತ್ತು ಕಳೆದು, ಸಾಗರಕ್ಕೆ

ಕಳಿಸಬೇಕಾಗಿದ್ದ ದಿನದ ಟಪ್ಪಾಲನ್ನು ಸಿದ್ಧ ಪಡಿಸತೊಡಗಿದ್ದೆ. ಕವಿದಿದ್ದ ಮೋಡಗಳನ್ನು ಸೀಳಿ ಎಳೆ ಬಿಸಿಲು ನನ್ನನ್ನು ನೆಕ್ಕತೊಡಿಗಿತ್ತು. ಜನರ ಓಡಾಟವೂ ಹೆಚ್ಚುತ್ತ ನಡೆದಿತ್ತು. ಆಸಕ್ತರು ಒಬ್ಬೊಬ್ಬರಾಗಿ ಬಂದು ಸಲಮ್ ಮಾಡಿ, ಸಾಲಾಗಿ ಚಡಿಯ ಮೇಲೆ ಮಂಡಿಸಿ, ಬೀಡಿ ಎಳೆಯುತ್ತಾ ಪಿಸುಮಾತುಗಳಲ್ಲಿ ತೊಡಗಿದ್ದರು. ಹೆಣ್ಣುಮಕ್ಕಳು ಕೊಡಪಾನಗಳನ್ನು ಬಗಲಿಗೇರಿಸಿಕೊಂಡು ನೀರು ಸೇದಲು ಬಾವಿಯ ಸುತ್ತ ಸೇರುವುದು, ನೀರನ್ನು ಸೇದುವುದು, ಕೊಡಪಾನ ಹೊತ್ತು ಸಾಗುವುದು ನಡೆದಿತ್ತು. ಗಂಡಸರು ಎತ್ತುಗಳನ್ನು ಹೊಡೆದುಕೊಂಡು ಬೇಣಗಳತ್ತ ಹೊರಟಿದ್ದರು. ಹಳ್ಳಿಗೆ ಹಳ್ಳಿಯೇ ನೆನ್ನಿನ ಸತ್ಯಾಗ್ರಹ, ಬಂಧನ, ಪೋಲೀಸರು ಸತ್ಯಾಗ್ರಹಿಗಳ ಮೇಲೆ ನಡೆಸಿದ ಅತ್ಯಾಚಾರ, ಜೈಲಿನಲ್ಲಿ ಬಂದಿಗಳ ಉಪವಾಸ – ಮುಂತಾದ ಕತೆಗಳನ್ನು ಕೇಳಿ ಔಡುಗಚ್ಚಿತ್ತು. ಎಲ್ಲರ ಮುಖದಲ್ಲೂ, ನಡಿಗೆಯಲ್ಲೂ ದಿಟ್ಟತನ ಮೂಡಿತ್ತು. ಮುಂದಿನ ಪ್ರತಿಕ್ರಿಯೆಗಾಗಿ ಸಿದ್ಧತೆ ನಡೆದಿತ್ತು. ಹೋರಾಟದ ಸಂಭ್ರಮ ಸಡಗರ ಎಲ್ಲೆಲ್ಲೂ ತುಂಬಿತ್ತು.

ಇದ್ದಕ್ಕಿದಂತೆ ಕೋಳಿಮರಿಗಳ ಮೇಲೆ ಗಿಡುಗ ಎರಗಿದಂತಾಯಿತು; ಇಡೀ ವಾತಾವರಣದ ಶಾಂತಿ, ಜನರ ಕಿರಿಚು, ದಿಕ್ಕಾಪಾಲು ಓಟ, ಕೂಗು, ಗಾಬರಿ, ಕಳವಳಗಳಿಂದ ಕಲಕಿತು. ನಾನೂ ಫಟ್ಟನೆ ಎದ್ದು ನಿಂತೆ. ಎದುರಿನ ರಸ್ತೆಯಿಂದ ಕೆಲವರು ನಮ್ಮತ್ತ ಓಡೋಡಿ ಬರುವುದನ್ನು ಕಂಡೆ. ಓಡಿ ಬಂದು ಏದುತ್ತಾ ಪೋಲೀಸ್! ಪೋಲಿಸ್! ಯಾನ್ ಬಂತು! ಯಾನ್ ಬಂತು! ಬಂದೇ ಬಿಡ್ತು! ಎಂದು ಎಲ್ಲರೂ ಒಮ್ಮೆಗೆ ಕಳವಳದಿಂದ ವರದಿ ಮಾಡಿದರು. ವ್ಯಾನ್ ಬಂದೆ ಬಿಟ್ಟಿತು. ನನಗೂ ಏನೂ ಹೊಳೆಯಲಿಲ್ಲ: ಕಾಗದಪತ್ರಗಳನ್ನೆಲ್ಲ ಬಾಚಿಕೊಂಡು ಒಳಗೆ ಹೋದೆ. ಅವನ್ನೆಲ್ಲಾ ಹಾಸಿಗೆಯಲ್ಲಿ ಹುದುಗಿಸಿಬಿಟ್ಟೆ. ನನ್ನ ಹಿಂದೆಯೇ ಬಾಗಿಲು ಮುಚ್ಚಿಕೊಂಡಿತು.

ಒಳಗೆ ಕತ್ತಲೆ ಆವರಿಸಿತು. ಹಿಂಬದಿಯಲ್ಲಿ ಬಾಗಿಲಿರಬಹುದೆಂದು ಹುಡುಕುತ್ತಾ ಅತ್ತ ನಡೆದೆ, ಬಾಗಿಲು ಇಲ್ಲದ್ದನ್ನು ಕಂಡು ನನ್ನ ಮೇಲೆ ಆಕಾಶವೇ ಕಳಚಿ ಬಿದ್ದಾಂತಾಯಿತು. ಮುಂಬಾಗಿಲಿಗೆ ಬಂದು ಜಗ್ಗಿದೆ, ಬಡಿದೆ, ಬಾಗಿಲು ಬರಲಿಲ್ಲ. ಹೊರಗಡೆಯಿಂದ ಅದಕ್ಕೆ ಬೀಗ ಮುದ್ರೆಯಾಗಿತ್ತು. ಮುದುಕಿ ಬೀಗ ಹಾಕಿ ಹೋಗಿದ್ದಳು. ನಾನು ಬೋನಿಗೆ ಬಿದ್ದ ಇಲಿಯಂತಾದೆ. ದಿಕ್ಕು



ತೋಚದಾಯಿತು. ಕಣ್ಣಿಗೆ ಕತ್ತಲೆ ಗಿರ್ರನೆ ತಿರುಗಿತು. ಕೆಟ್ಟೆ ಎಂದುಕೊಂಡೆ. ಚೇತರಿಸಿಕೊಂಡು ಕ್ಷಣಕಾಲ ಯೋಚಿಸಿ ನಡುಮನೆಗೆ ನಡೆದೆ. ಅಟ್ಟಕ್ಕೆ ಚಾಚಿದ ಏಣಿಯೊಂದು ಗೋಚರಿಸಿತು. ನನ್ನ ಕಾಲುಗಳು ಯಾಂತ್ರಿಕವಾಗಿ ಮೆಟ್ಟಿಲುಗಳನ್ನು ಹತ್ತಿದವು. ಮೇಲೂ ಕತ್ತಲು. ಏನೇನೋ ಸಾಮಾನು, ಸರಕುಗಳು ಕಣ್ಣ ಹಾಯಿಸಿ ಎಲ್ಲವನ್ನೂ ದಿಟ್ಟಿಸಿದೆ. ಮೇಲಿನ ಛಾವಣಿಗಳ ದಬ್ಬೆ ಬಿಗಿದು ಹುಲ್ಲು ಹಾಕಿತ್ತು. ಅದನ್ನು ತೂರಿ ಹಾರಿ ಹೋಗಬಹುದೆಂದು ನೋಡುತ್ತಿದ್ದೆ. ಅಷ್ಟರಲ್ಲಿ ಪೋಲೀಸರು ಊರನ್ನೆಲ್ಲಾ ಶೋಧಿಸಿ, ಈ ಮನೆಯತ್ತ ಬರುತ್ತಿರುವುದು ಅವರ ಮಾತು ಮತ್ತು ಬೂಟಿನ ಸಪ್ಪಳಗಳಿಂದ ತಿಳಿಯಿತು. ನನಗೆ ಉಸಿರೇ ಕಟ್ಟಿದಂತಾಯಿತು.

ಪೋಲೀಸು ಅಧಿಕಾರಿ, ಯಾರದ್ದು ಈ ಮನೆ? ಯಾಕೆ ಬೀಗ ಹಾಕಿದೆ? ತೆಗೆಯಿರಿ ಬೀಗ ಎಂದು ಗದರಿಸಿದ. ಈ ಮನೆಯ ಮತ್ತೊಂದು ಭಾಗಕ್ಕೆ ಪೋಲೀಸರು ಒಬ್ಬರ ಹಿಂದೆ ಒಬ್ಬರು ನುಗ್ಗಿ ಬಂದರು. ಸಂದು ಮೂಲೆ ಹುಡುಕಿದರು. ಮೇಲೆ ಕೆಳಗೆ ನೋಡಿದರು. ಇಲ್ಲಾ, ಇಲ್ಲಿ, ಇಲ್ಲ! ಎಂದು ಬಂದಂತೆ ಒಬ್ಬೊಬ್ಬರಾಗಿ ಹೊರಬಿದ್ದರು. ದಫೇದಾರನೊಬ್ಬ ಅಟ್ಟದ ಕಡೆ ಕಣ್ಣುಹಾಯಿಸಿ, ನಾನು ನಿಂತಿದ್ದ ಕಡೆ ದಿಟ್ಟಿಸಿದ. ನಾನು ನಿಂತಲ್ಲಿಯೇ ಗಾಳಿ ಕಳೆದುಕೊಂಡ ಬೆಲೂನಿನಂತೆ ಕುಸಿದು ಕುಗ್ಗಿದೆ. ಮುದುಡಿ ಅಲ್ಲಿಯೇ ನನ್ನ ಮುಂದೆ ಇದ್ದ ಒಂದು ಅಕ್ಕಿಗೂಡೆಯ ಹಿಂದೆ ಕುಕ್ಕರಿಸಿದೆ. ಈ ಮಹಾರಾಯನೂ ಯಾರೂ ಇಲ್ಲ ಎಂದು ಹೊರಬಿದ್ದ. ನಾನು ಹಿಡಿದಿದ್ದ ಉಸಿರನ್ನು ಬಿಟ್ಟೆ, ಕಾಲುಗಳು ಏಳದಾದವು.

ಕುಪಿತನಾದ ಪೋಲಿಸ್ ಅಧಿಕಾರಿ, "ಏಯ್ ತಗೀ ಬೀಗ, ಇಲ್ಲ ಬಾಗಿಲು ಮುರಿದು ನುಗ್ಗುತ್ತೇವೆ" ಎಂದು ಮತ್ತೊಮ್ಮೆ ಅಧಿಕಾರವಾಣಿಯಿಂದ ಘರ್ಜಿಸಿದ. ಪೋಲೀಸರು ಬಾಗಿಲು ಮುರಿಯಲು ಸಿದ್ಧರಾಗುವಷ್ಟರಲ್ಲಿ, ಅಲ್ಲೇ ಎಲ್ಲೋ ಅವಿತುಕೊಂಡಿದ್ದ ಮುದುಕಿ ಮರುಮಾತಾಡದೆ ಬೀಗ ತೆಗೆದು "ಯಾರೂ ಇಲ್ಲಪ್ಪಾ ಇಲ್ಲಿ. ನೋಡಿಕೊಳ್ರೋ ಮಹರಾಯ", ಎಂದು ಗದ್ಗದಿತಳಾಗಿ ಚಡಿಯ ಮೇಲೆ ಕುಸಿದು ಕುಳಿತಳು. ಪೋಲೀಸರು ದಡಾಬಡಾ ನುಗ್ಗಿದರು. ಒಬ್ಬ ಬಾರೀ ಆಸಾಮಿ ಏಣಿಯನ್ನು ಏರಿದ. ನಾನು ಅವನನ್ನು ಗೋಡೆಯ ಮರೆಯಿಂದ

ನೋಡಿದೆ: ನನ್ನ ಸ್ಥಿತಿ ನನಗೆ ಅಸಹ್ಯವಾಯಿತು. ನನಗೆ ನಾನೇ ನಾಚಿದೆ: ನನ್ನ ಬಗ್ಗೆ ನಾನೇ ಕನಿಕರಪಟ್ಟೆ. ಇನ್ನು ಬಚ್ಚಿಟುಕೊಳ್ಳುವುದು ಸಾಧ್ಯವಿರಲಿಲ್ಲ. ಗೋಡೆಯ ಹಿಂದಿನಿಂದ ಎದ್ದುನಿಂತೆ. ಒಮ್ಮೆಗೇ ಆ ಪೋಲಿಸಿನವ ನನ್ನನ್ನು ನೋಡಿ ಹೌಹಾರಿದ "ಹೋ" ಎಂದು ಕಿರಿಚಿಕೊಂಡು; ಸದ್ಯ ಅಟ್ಟದಿಂದ ಜಿಗಿಯಲಿಲ್ಲ ಆತ.

"ಅಟ್ಟ ಹತ್ತಿ ಕೂತಿದ್ದೀರಾ, ಬನ್ನಿ ಕೆಳಗೆ"ಎಂದ. ತನ್ನವರನ್ನೆಲ್ಲಾ ಕೂಗಿಕರೆದ. 'ಇಳಿಯಪ್ಪ ಬರ್ತೀನಿ' ಎಂದು ನಾನು ಮುಂಚೆ ಹೆಜ್ಜೆ ಹಾಕಿದೆ. ಆತನೂ ನನ್ನನ್ನೇ ದುರುಗುಟ್ಟಿ ನೋಡುತ್ತ ಒಂದೊಂದೇ ಮೆಟ್ಟಲನ್ನು ಇಳಿಯತೊಡಗಿದ. ನಾನು ಇಳಿದೆ. ನನ್ನನ್ನು ನೋಡಿಕೊಂಡೆ: ಅಂಗಿ, ಪಂಚೆ, ಮೈಕೈ ಎಲ್ಲ ಕಪ್ಪಡರಿತ್ತು. ತಲೆ ತುಂಬ ಕರಿಜೇಡನ ಬಲೆ. ಮುಖಕ್ಕೂ ಮಸಿ ಹತ್ತಿತ್ತೆಂಬುದನ್ನು ಅಲ್ಲೇ ಗೂಡಿನಲ್ಲಿದ್ದ ಪುಟ್ಟ ಕನ್ನಡಿಯತ್ತ ಕಣ್ಣು ಹೊರಳಿಸಿದಾಗ ಕಂಡಿತು. ಇದೇ ವೇಷದಲ್ಲಿ ಮನೆಯಿಂದ ಹೊರಬಿದ್ದೆ. ಅಷ್ಟರಲ್ಲಿ ನೂರಾರು ಜನ ಸೇರಿದ್ದರು. ನನ್ನ ಈ ದುರವಸ್ಥೆ ಕಂಡು ಅವರ ಮುಖಗಳು ಬಿಳಿಚಿದ್ದವು; ಕಣ್ಣುಗಳಲ್ಲಿ ಮರುಕವಿತ್ತು. ಅವರನ್ನೆಲ್ಲಾ ಒಮ್ಮೆ ಮೊಗವೆತ್ತಿ ನೋಡಿ ನಕ್ಕೆ, ಅವರೂ ನಗಲಾರದೆ ನಕ್ಕರು; ತಲೆತಗ್ಗಿಸಿ ನಿಂತರು. ದಂಡಧಾರಿ ಪೋಲೀಸು ಅಧಿಕಾರಿ ನನ್ನ ಕಡೆ ನೋಡಿ ಗಹಗಹಿಸಿ ನಕ್ಕು ಹೇಳಿದ, "ಏನು ಸಬರ (ಶಿಬಿರ ಎಂಬ ಪದ ಅವನಿಗೆ ಬರದು) ಮಾಡ್ತಿ? ಎಲ್ಲಿ ಬೇರೆಯವರೆಲ್ಲಾ? ಹೇಳು ತೋರ್ಸು" ಎಂದ. ನಾನು ಆತನನ್ನು ಒಂದು ಕ್ಷಣ ಮಲೆತು ನೋಡಿದೆ. ನೀರು ಹಿಡಿದು ನಿಂತಿದ್ದವನ ಹಿಂದ ಕೈ – ಕಾಲು ಮುಖ ತೊಳೆದು ಬಂದು ಚಡಿಯ ಮೇಲೆ ಕುಳಿತೆ. ಪೋಲೀಸರು ಮತ್ತೆ ಒಳಹೊಕ್ಕರು. ನಾನೂ ಒಳಗೆ ದಾಟಿದೆ. ಬಾಗಿಲ ಮೂಲೆಯಲ್ಲಿ ಒಂದು ವಸ್ತುವನ್ನು ಪೋಲೀಸಿನವನೊಬ್ಬ ಕಾಲಿನಲ್ಲಿ ಒದೆದು ನೋಡಿದ. ಬಟ್ಟೆ ತೆಗೆದ. ಅದು ಹಲಸಿನ ಕಾಯಿ ಆಗಿತ್ತು. ಚಿಟಿಕೆ ಹೊಡೆದು ಬಾರಿಸಿ ನೋಡಿ, ಮೂಸಿದ, ಹಣ್ಣೇ ಎಂದು ತಿಳಿಯಲು, ಅದು ಕಾಯಾಗಿತ್ತು. ಮತ್ತೊಂದು ಪಕ್ಕದಲ್ಲಿ ಕಣಜಕ್ಕೆ ಅಪ್ಪಿಕೊಂಡು ಉದ್ದನ ಆಕೃತಿಯೊಂದುವಾಲಿತ್ತು. ಒಬ್ಬ ಪೋಲೀಸಿನವ ಬಟ್ಟೆ ಎಳೆದ. ಆ ಆಕೃತಿ ಕಣಜಕ್ಕಿಂತ ಉದ್ದವಾಯಿತು. ಮುಖ ತಿರುವಿತು. ನೋಡುತ್ತೇನೆ; ಮಂಡಗಳಲೆಯ ಹೊಸೂರು



ರಾಮನಾಯ್ಯರು! ಅವರೂ ಗಾಬರಿಯಲ್ಲಿ ನನ್ನೊಂದಿಗೆ ಒಳಹೊಕ್ಕು ಸಿಕ್ಕಿ ಬಿದ್ದವರು. ಅವರು ಒಳಗೆ ಇರುವ ಸುಳಿವು ನನಗೆ ಮೊದಲೇ ತಿಳಿದಿದ್ದರೆ ಪೋಲೀಸರಿಗೆ ಕೈಕೊಟ್ಟು ಹೇಗೋ ಪಾರಾಗಬಹುದಿತ್ತು. ಎಂದು ಕೊಂಡು ವ್ಯಥೆಪಟ್ಟೆ, ನನಗೆ ನಮ್ಮ ಕಾಗದ ಪತ್ರಗಳೆಲ್ಲಿ ಪೋಲೀಸರ ಕೈಗೆ ಸಿಕ್ಕಿಬಿಡುವವೋ ಎಂಬ ದಿಗಿಲು. ಅದಕ್ಕೇ ನಾನು ಒಳಗೆ ಬಂದುದು. ಕಾಗದ ಪತ್ರಗಳನ್ನು ಮುಚ್ಚಿಟ್ಟಿದ್ದ ಹಾಸಿಗೆ ಪಿಂಡಿಯ ಮೇಲೆ ಭದ್ರವಾಗಿ ಕುಳಿತೇ ಬಿಟ್ಟೆ, ಎಲ್ಲರೂ ಹೊರ ಬಿದ್ದ ಮೇಲೇ ಅಲ್ಲೆ, ನಿಂತಿದ್ದ ನಮ್ಮ ಸಹಾಯಕನಿಗೆ ಕಣ್ಣ ಸನ್ನೆ ಮಾಡಿ, ಬಾಯಿನಲ್ಲಿ "ನನ್ನ ಹಾಸಿಗೆ ಬಟ್ಟೆ ಎಲ್ಲ ಸಾಗರಕ್ಕೆ ಕಳಿಸಿ" ಎಂದು ಹೇಳುತ್ತಾ ಹೊರಗೆ ಬಂದೆ. ಅಷ್ಟರಲ್ಲಿ ಪೋಲೀಸರು ಅನೇಕರನ್ನು ಬಂಧಿಸಿ ಬಾವಿಕಟ್ಟೆಗೆ ತಂದಿದ್ದರು. 'ಅಯ್ತಲ್ಲಾ ಹೂ, ನಡೀರಿ' – ಎನ್ನುತ್ತಾ ಎಲ್ಲರಿಗೂ ನಮಸ್ಕರಿಸಿ, ಆಗಲೇ ಮೊಳಗುತ್ತಿದ್ದ ಜಯಕಾರಗಳ ಮಧ್ಯೆ ನಡೆದು ಬಂದು ವ್ಯಾನಿನಲ್ಲಿ ಕುಳಿತೆ. ಇತರ ಬಂದಿಗಳೊಂದಿಗೆ, 'ಇನ್‌ಕಿಲಾಬ್ ಜಿಂದಾಬಾದ್', 'ಉಳುವವನೇ ಹೊಲದೊಡೆಯ' ಎಂದು ಜಯ ಜಯಕಾರ ಮಾಡುತ್ತಾ ಸಾಗರಕ್ಕೆ ಬಂದೆವು. ನ್ಯಾಯಾಲಯದ ಮುಂದೆ ನಿಲ್ಲಿಸಿ, ಜೈಲಿಗೆ ಸಾಗಿಸಿದರು. ಜೈಲಿನಲ್ಲಿ ನಮಗೆ ಹಾರ್ದಿಕ ಸ್ವಾಗತ: ಜೈಜೈಕಾರ.

## ಸ್ವರಾಜ್ಯ ಬಂತು

೧೯೪೨ ಭಾರತ ದಿಲ್ಲಿಯಿಂದ ಹಳ್ಳಿಯತನಕ ಒಂದೇ ಕೂಗು! 'ಕ್ವಿಟ್ ಇಂಡಿಯಾ', 'ಚಲೇಜಾವ್', 'ಬ್ರಿಟಿಶರೇ ಭಾರತದಿಂದ ತೊಲಗಿ', ೧೮೫೭ರ ಸಿಪಾಯಿ ದಂಗೆಯಿಂದ ಆರಂಭವಾದ ಬಿಡುಗಡೆಯ ಹೋರಾಟದ ಸಂದೇಶ ಭಾರತದ ಜನತೆಯ ಮನೆಮನೆಗೂ ಮನಕ್ಕೂ!! ಮುಟ್ಟಿದ ಸಮಯ, ವಂದೇ ಮಾತರಂ! ಭಾರತ ಮಾತಾಕೀ ಜೈ! ಮಹಾತ್ಮಾ ಗಾಂಧೀಕೀ ಜೈ! ಜೈ ಜೈಕಾರಗಳ ಘೋಷಣೆ 'ಮಾಡು ಇಲ್ಲವೇ ಮಾಡಿ', ಶಪಥ. ಮಹಾತ್ಮರೇ ಸಂಗ್ರಾಮದ ಮುಂದಾಳು, ಆದರೆ ಸರೆಯಾಳು.

ಆಗ ನಾನು ತೀರ್ಥಹಳ್ಳಿ ಪ್ರೌಢಶಾಲೆಯಲ್ಲಿ ಒಬ್ಬ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿ ಆಯ್ಕೆಯ ಪರೀಕ್ಷೆ ನಡೆಯುತ್ತಿತ್ತು. ಪರೀಕ್ಷೆಗೆಂದು ಹಾಸ್ಟಲಿನಿಂದ,

ಮ್ಯಾನೇಜರವರ ಹೆದರಿಕೆಗೆ ಬೆದರಿ, ಶಾಲೆಯತ್ತ ಹೋಗುತ್ತಿದ್ದೆ. ಶಾಲೆ ಬಂದ್ ಮಾಡುವಲ್ಲೆ ಆಗಲೇ ನೂರಾರು ವಿದ್ಯಾರ್ಥಿ–ವಿದ್ಯಾರ್ಥಿನಿಯರು ತೊಡಗಿದ್ದುದು ದೂರದಿಂದಲೇ ಕಂಡಿತು. ಜಯಘೋಷಗಳು ಮೊಳಗುತ್ತಿದ್ದುದೂ, ಪೋಲೀಸರ ಪೇಚೂ ಎಲ್ಲಾ ನನ್ನ ಮೈನವಿರೇಳಿಸಿದವು. ಕೈಲಿದ್ದ ಕಾಗದವನ್ನು ಅಲ್ಲೇ ಬಿಸುಟು, ನನು ಸತ್ಯಾಗ್ರಹಿಯಾಗಿ, ಮೈ ಮರೆತು, ಎದೆಯುಬ್ಬಿ. ಜೈಕಾರ ಮಾಡುತ್ತಾ ಮುನ್ನುಗ್ಗಿದೆ. ಮುನ್ನುಗ್ಗುವವರನ್ನು ಕೂಡಿಕೊಂಡೆ. ಶಾಲೆ ಬಂದ್ ಅನೇಕರ ಬಂಧನ, ಬಂದೀಖಾನೆಗೆ ರವಾನೆ, ಜೈ ಜೈಕಾರಗಳ ಮೊಳಗು, ಬೀಳ್ಕೊಡಿಗೆ, ಮೆರವಣಿಗೆ ಹರತಾಳ, ಬಹಿರಂಗ ಸಭೆ, ಅನೇಕರ ಭಾಷಣ, ಪ್ರಭಾತಪೇರಿ ಸಭೆ. ಇವು ತೀರ್ಥಹಳ್ಳಿಯ ಜನತೆಯ ನಿತ್ಯ ಹೋರಾಟ. ದಿನದಿನಕ್ಕೂ ಉಗ್ರರೂಪ ತಾಳಿತು. ಹೋರಾಟ ಹಳ್ಳಿ ಹಳ್ಳಿಗೂ ಹಬ್ಬಿತು. ದಿನ ಕಳೆದಂತೆ ಬಿಡುಗಡೆಗಳೂ ಆರಂಭವಾದವು. ಹೋರಾಟ ಇಳಿಮುಖವಾಗತೊಡಗಿತು. ಬಂಧನಕ್ಕೊಳಗಾಗದೆ ಉಳಿದಿದ್ದ ನಾವು ಕೆಲವರು ಊರು ಊರು ಸುತ್ತಿ ಸುತ್ತಿ ಸಭೆ – ಮೆರವಣಿಗೆ ಮುಂದುವರಿಸಿಕೊಂಡೇ ನಡೆದವು. ಚಳವಳಿಗೆ ಇನ್ನೂ ಉಗ್ರ ಸ್ವರೂಪ ಕೊಡಲು, ಹೋರಾಟ ಹಿಂಸೆಯ ಹಾದಿಹಿಡಿದರೂ ಚಿಂತೆಯಿಲ್ಲವೆಂದು, ಗುಪ್ತ ಪ್ರಚಾರ, ಹಸ್ತಪತ್ರಿಕೆಗಳ ಹಂಚಾಟದಲ್ಲೇ ಭೂಗತರಾಗಿದ್ದ ಉಗ್ರಗಾಮಿಗಳು ತೊಡಗಿದರು. ಅಂತೆಯೇ ನಾವು ಕೆಲವರು ಪೋಸ್ಟ್‌ಡಬ್ಬ ಕೀಳುವುದು, ತಂತಿ ಕತ್ತರಿಸುವುದು ಮುಂತಾದ ವಿಧ್ವಂಸಕ ರಾತ್ರಿ ಚಟುವಟಿಕೆಗಳಲ್ಲಿ ತೊಡಗಿದೆವು. ನೂರಾರು ಜನ ಮುಖಂಡರು, ಸ್ಥಾನಬದ್ಧತೆ ಕೈದಿಗಳು ಅವರ ಮಧ್ಯೆ ಮೈಮುರಿ ಪೋಲೀಸರಿಂದ ಬಡಿಸಿಕೊಂಡು ಮೊಕದ್ದಮೆಯನ್ನು ಎದುರಿಸುವ ಅಂಡರ್ ಟ್ರಯಲ್ ಕೈದಿಗಳು, ನಾವು ಕೆಲವರು, ಎಲ್ಲಾ ಕೈದಿಗಳೇ, ಎಲ್ಲರ ಗುರಿಯೂ ಒಂದೇ ಮಾತೃಭೂಮಿಯನ್ನು ಪರದಾಸ್ಯದಿಂದ ಮುಕ್ತಮಾಡುವುದು. ಅದಕ್ಕಾಗಿ ಸೆರೆಮನೆವಾಸ, ತ್ಯಾಗ ಬಲಿದಾನಗಳಿಗೆ ಸಿದ್ಧರಾದವರು, ಗಾಂಧೀಯವರ ಅಹಿಂಸಾ ದೀಕ್ಷೆ ತೊಟ್ಟವರು. ತೊಡದವರು ಎಲ್ಲರೂ ಬ್ರಿಟಿಷ್ ಸರ್ಕಾರದ ಬಂದೀಖಾನೆಯ ಬಂಧುಗಳು. ಅಲ್ಲೇ ನನ್ನ ವಿವಿಧ ರಾಜಕೀಯ ದರ್ಶನ, ಸಿದ್ಧಾಂತ ಕಾರ್ಯಕ್ರಮ, ಗುರಿಗಳ ಅಭ್ಯಾಸ ಆರಂಭವಾದುದು. ಗ್ರಂಥಗಳ ಅಭಾವ. ಇದ್ದ ಪುಸ್ತಕಗಳೇ ಪುಸ್ತಕ.



ಜವಾಹರಲಾಲರ 'ಡಿಸ್ಕವರಿ ಆಫ್ ಇಂಡಿಯಾ'ದಿಂದ ಹಿಡಿದು ಮೀನೂ ಮಸಾನಿಯವರ ಸೋಷಲಿಸಂ ರೀಕನ್‌ಸಿಡರ್ಡ್‌ವರೆಗೂ, ಮಾರ್ಕ್ಸ್‌ವಾದ, ಗಾಂಧೀವಾದದಿಂದ ಹಿಡಿದು ಟ್ರಾಟ್‌ಸ್ಕಿಯವರೆಗೂ ಪರಿಚಯವಾಯಿತು. ಉರ್ದು, ತಮಿಳು, ಹಿಂದೀ ಉಪಾಧ್ಯಾಯರು ದೊರೆತರು. ಸೆರೆಮನೆಯೇ ನನಗೆ ಒಂದು ವಿಶ್ವವಿದ್ಯಾನಿಲಯವಾಯಿತು. ಈ ಅನುಭವವೇ ಅನುಭವ! ಇದೇ ನನ್ನ ರಾಜಕೀಯ ಜೀವನಕ್ಕೆ ನಾಂದಿ. ಚಿರಸ್ಮರಣೀಯ. ಕೆಲವು ತಿಂಗಳುಗಳ ಕಾಲ ನ್ಯಾಯಾಲಯದ ಮುಂದೆ ಹಾಜರಾಗುವುದು, ಮರಳಿ ಜೈಲಿಗೆ ಹೋಗುವುದು: ನಡೆದು, ಕೆಲವು ತಿಂಗಳ ಶಿಕ್ಷೆ ನ್ಯಾಯಾಧೀಶರ ತೀರ್ಪು, ಮತ್ತೆ ಸೆರೆಮನೆ ಸೇರಿದುದು, ಶಿಕ್ಷೆ ಮುಗಿಯುವುದರೊಳಗೆ ಬಿಡುಗಡೆ: ಹೊರ ಪ್ರಪಂಚಕ್ಕೆ ಪ್ರವೇಶ: ಮತ್ತೆ ತೀರ್ಥಹಳ್ಳಿ ಪ್ರೌಢಶಾಲೆಯಲ್ಲಿ ಎಸ್. ಎಸ್. ಎಲ್. ಸಿ. ವ್ಯಾಸಂಗ ಮುಂದುವರಿಕೆ.

ಭಾರತ ಸ್ವಾತಂತ್ರ್ಯ ಸಂಗ್ರಾಮ ತುಟ್ಟ ತುದಿಯನ್ನು ಮುಟ್ಟಿದುದು ೧೯೪೨ರಲ್ಲೇ, ನಂತರದ ೫ ವರ್ಷಗಳನ್ನು ಸಮಾಧಾನಗಳಲ್ಲಿ ಕಳೆದೆವೆನ್ನಬಹುದು. ಸಂಧಾನವೇನೋ ಫಲಿಸಿತು.

೧೯೪೭ ಆಗಸ್ಟ್ ೧೫ ಬೆಳಗಿನ ಶೂನ್ಯಗಳಿಗೆ, ಅಶೋಕ ಚಕ್ರ ಹೊತ್ತ ಭಾರತದ ತ್ರಿವರ್ಣಧ್ವಜ ಬ್ರಿಟಿಷರ ಧ್ವಜದ ಸ್ಥಾನವನ್ನು ಏರಿ ಹಾರಾಡತೊಡಗಿತು. ಧ್ವಜವಂದನೆ, ಜನಗಣಮನ ರಾಷ್ಟ್ರಗೀತೆಯೊಂದಿಗೆ ಸ್ವಾತಂತ್ರ್ಯ ದಿನಾಚರಣೆ ಸಮಾರಂಭ. ಮೌಂಟ್ ಬ್ಯಾಟನ್ನರಿಂದ ಜವಾಹರಲಾಲ ನೆಹರೂ ಅವರಿಗೆ ಅಧಿಕಾರ ಹಸ್ತಾಂತರ.

❑

## ಆಕರಗಳು


೧. ಹೋರಾಟದ ದಿಟ್ಟ ಹೆಜ್ಜೆಗಳು – ಹೆಚ್, ಎಸ್, ದೊರೆಸ್ವಾಮಿ, ಸಾಹಿತ್ಯ ಮಂದಿರ, ಬೆಂಗಳೂರು ೨೦೦೬

೨. ಜೀವಂತ ಜ್ವಾಲೆ – ಶಾಂತವೇರಿ ಗೋಪಾಲಗೌಡ, ಕೋಣಂದೂರು ವೆಂಕಟಪ್ಪ

೩. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು –ಸಂಪುಟ ೨, ಸಂಪುಟ ೩ – ಡಾ॥ ಸೂರ್ಯನಾಥ ಕಾಮತ್ ೧೯೭೫

೪. ೧೮೩೦–೩೧ ರಲ್ಲಿ ರೈತ ದಂಗೆ – ಡಾ. ಸಿದ್ಧಲಿಂಗ ಸ್ವಾಮಿ

೫. ಶಿವಮೊಗ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು – ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – ಡಾ। ಆರ್ ಗೋಪಾಲ್

೬. Archives - State archives ಪ್ರಬುದ್ಧ ಕರ್ನಾಟಕ – ಸಂಪುಟ ೭೧, ಸಂಚಿಕೆ ೩,೪ – ಮೈಸೂರು ವಿಶ್ವವಿದ್ಯಾಲಯ ೧೯೮೯–೯೦

೭. Gazetteer Of India - Karnataka State - Shimoga District - 1975

೮. Mythic Society, Nrupatunga Road, Bengaluru.


❑

### ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
### ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರ.ಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |